
ರಂಗಸಂಪನ್ನರು ಮಾಲಿಕೆ

# ಕಂಚಿಕೇರಿ ಶಿವಣ್ಣ

## ಮಲ್ಲಿಕಾರ್ಜುನ ಕಡಕೋಳ



ಕರ್ನಾಟಕ ನಾಟಕ ಅಕಾಡೆಮಿ

ರಂಗಸಂಪನ್ನರು ಮಾಲಿಕೆ

# ಕಂಚಿಕೇರಿ ಶಿವಣ್ಣ

ಮಲ್ಲಿಕಾರ್ಜುನ ಕಡಕೋಳ

ಕರ್ನಾಟಕ ನಾಟಕ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 02

**KANCHAKERE SHIVANNA** (**Rangasampannaru Malike**) by **Sri Mallikarjuna Kadakola** , Published by **Registrar, B. Manjunatha Aradhya** Karnataka Nataka Academy, J.C.Road, Bengaluru - 560 002.

ಹಕ್ಕು : ಕರ್ನಾಟಕ ನಾಟಕ ಅಕಾಡೆಮಿ

ಮುದ್ರಿತ ವರ್ಷ : 2016

ಪ್ರತಿಗಳು : 1000

ಪುಟಗಳು : xvi + 80

ಬೆಲೆ : ರೂ. 60/-

ಪ್ರಕಾಶಕರು :
ಶ್ರೀ ಬಿ. ಮಂಜುನಾಥ ಆರಾಧ್ಯ
ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ
ಕನ್ನಡಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨
ದೂ. : ೦೮೦ – ೨೨೨೪೪೧೭೬

ಪ್ರಕಟನಾ ಸಮಿತಿ ಸದಸ್ಯರು :
ಶ್ರೀ ಮುದ್ದಣ್ಣ ರಟ್ಟೆಹಳ್ಳಿ
ಶ್ರೀ ಎಂ.ಎಸ್.ಗುಣಶೀಲನ್
ಶ್ರೀ ಎಸ್.ಕೆ.ಕೊನೆಸಾಗರ

ರಕ್ಷಾಪುಟ ವಿನ್ಯಾಸ: ಕೃಷ್ಣ ರಾಯಚೂರು

ಮುದ್ರಕರು:
ರಶ್ಮಿ ಪ್ರಿಂಟರ್ಸ್
ಸುಧಾಮನಗರ, ಬೆಂಗಳೂರು
9901916581



# ಕಂಚಿಕೇರಿ ಶಿವಣ್ಣ

## ಅಧ್ಯಕ್ಷರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ನಮ್ಮ ಅವಧಿ ಎರಡು ವರ್ಷ ಕಳೆದಿದೆ. ಮೊದಲ ವರ್ಷ ಜಿಲ್ಲಿಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಬಾಗಲಕೋಟೆ ಜಿಲ್ಲೆ ಇಳಕಲ್‌ನಲ್ಲಿ ೩೦ ದಿನಗಳ ವೃತ್ತಿರಂಗಭೂಮಿ ತರಬೇತಿ ಶಿಬಿರ, ಮುಂಬೈ, ದೆಹಲಿ ಹಾಗೂ ಕೇರಳದ ತ್ರಿಷ್ಯೂರಿನಲ್ಲಿ ಹೊರರಾಜ್ಯ ನಾಟಕೋತ್ಸವ, ಕಾಸರಗೋಡಿನಲ್ಲಿ ಗಡಿನಾಡು ಬಹುಭಾಷಾ ನಾಟಕೋತ್ಸವ ಮತ್ತು ಮೈಂದರ್ಗಿಯಲ್ಲಿ ಗಡಿನಾಟಕ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮ ನಡೆಸಿದೆವು.

ವಿಜಯಪುರದಲ್ಲಿ ೨೦೧೫ರ ಆಗಸ್ಟ್ ೨೪ ರಿಂದ ೩೦ರವರೆಗೆ ನಡೆದ ರಾಜ್ಯ ವೃತ್ತಿರಂಗ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆ ರಂಗಭೂಮಿ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ. ಆರ್. ಅರಿಷಿಣಗೋಡಿ ಅವರಿಗೆ ಇಳಕಲ್ ನಲ್ಲಿ ಹಾಗೂ ಎಲ್.ಬಿ.ಕೆ. ಅಲ್ದಾಳ ಅವರಿಗೆ ಕಲಬುರಗಿಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ ೨೧ ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ೨ ದಿನ ಹಾಗೂ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ೭ ದಿನಗಳ

ಕಾಲ ನಡೆದ ವೃತ್ತಿರಂಗಭೂಮಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು, ವಿಶೇಷಘಟಕ ಯೋಜನೆಯಡಿ ೩೦ ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ನಡೆದಿವೆ. ವಿಶೇಷಘಟಕ ಐದು ಜನರ ಮತ್ತು ಗಿರಿಜನ ಯೋಜನೆಯಲ್ಲಿ ಮೂರು ಜನರ ಸಾಕ್ಷ್ಯಚಿತ್ರ ನಿರ್ಮಾಣ ಮಾಡಲಾಗಿದೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಅದರಂತೆ ೧೨ ವೃತ್ತಿ ಕಂಪನಿಗಳ ಸಾಕ್ಷ್ಯಚಿತ್ರಗಳನ್ನು ನಿರ್ಮಿಸಲಾಗುತ್ತಿದೆ. ಸರಿಸುಮಾರು ಕಳೆದ ೨೦ ವರ್ಷಗಳಿಂದ ಸ್ಥಗಿತಗೊಂಡಿದ್ದ ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ "ಸಂವಾದ" ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ.

ಪುಸ್ತಕಗಳ ಪ್ರಕಟಣೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪುಸ್ತಕಗಳ ಪ್ರಕಟಣೆ ಮುಖಾಂತರ ಅಂದು ಕಂಡ ಕನಸು ಇಂದು ನನಸಾಗುತ್ತಿದೆ. ೧೯೫೯ ರಿಂದ ೨೦೧೬ ರವರೆಗಿನ ನಾಟಕ ಅಕಾಡೆಮಿಯ ಎಲ್ಲಾ ಪ್ರಶಸ್ತಿ ಪುರಸ್ಕೃತರ ಪರಿಚಯದ ಪುಸ್ತಕವನ್ನು ಹೊರತರಲು ಕ್ರಮವಹಿಸಲಾಗುತ್ತಿದೆ. ಈ ಎಲ್ಲಾ ಕನಸು ಸಾಕಾರಗೊಳ್ಳಲು ಶ್ರಮಿಸಿದ ಪ್ರಕಟಣಾ ಸಮಿತಿಯ ಸದಸ್ಯರು/ನಾಟಕ ಅಕಾಡೆಮಿ ಸದಸ್ಯರು ಹಾಗೂ ಜಿಲ್ಲಾ ರಂಗಮಾಹಿತಿ ಮಾಲಿಕೆಯಡಿ ಸರಿಸುಮಾರು ೨೦ ಹಾಗೂ ರಂಗಸಂಪನ್ನರು ಮಾಲಿಕೆಯಡಿ ೧೫ ಜನ ಕಲಾವಿದರ ಪುಸ್ತಕಗಳನ್ನು ಬರೆದುಕೊಟ್ಟ ಎಲ್ಲಾ ಲೇಖಕರಿಗೆ ಹಾಗೂ ಸಂವಾದ ಪತ್ರಿಕೆಯ ಸಂಪಾದಕರಾದ ಶ್ರೀ ಶಶಿಧರ ಭಾರಿಘಾಟ್, ಈ ಪುಸ್ತಕವನ್ನು ಹೊರತರಲು ಸಹಕರಿಸಿದ ಶ್ರೀ ಮಲ್ಲಿಕಾರ್ಜುನ ಕಡಕೋಳ, ಸಕಾಲಕ್ಕೆ ಮುದ್ರಿಸಿಕೊಟ್ಟ ರಶ್ಮಿ ಪ್ರಿಂಟರ್ಸ್ ಅವರಿಗೂ, ಅಕಾಡೆಮಿಯ ರಿಜಿಸ್ಟ್ರಾರ್ ಬಿ. ಮಂಜುನಾಥ ಆರಾಧ್ಯ ಹಾಗೂ ಅಕಾಡೆಮಿಯ ಎಲ್ಲಾ ಸಿಬ್ಬಂದಿವರ್ಗದವರಿಗೂ ಕೃತಜ್ಞತೆಗಳು.

ಎಲ್. ಬಿ. ಶೇಖ (ಮಾಸ್ತರ)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿಯ

# ಕರ್ನಾಟಕ ನಾಟಕ ಅಕಾಡೆಮಿ

ಅಧ್ಯಕ್ಷರು
ಎಲ್.ಬಿ.ಶೇಖ (ಮಾಸ್ತರ)

ಸದಸ್ಯರು
ಎನ್.ಕೆ.ರಾಮಕೃಷ್ಣ
ವಿ.ಎನ್.ಅಕ್ಕಿ
ಕಲ್ಪನಾ ನಾಗನಾಥ್
ಬಿ.ಎಂ.ರಾಮಚಂದ್ರ
ಉಮೇಶ ಸಾಲಿಯಾನ್
ಪಿ.ತಿಪ್ಪೇಸ್ವಾಮಿ
ಎಚ್.ಷಡಾಕ್ಷರಪ್ಪ ಹೊಸಮನಿ
ಎಸ್.ಕೆ.ಕೊನೆಸಾಗರ
ಅನ್ನಪೂರ್ಣ ಸಾಗರ
ಎ.ವರಲಕ್ಷ್ಮಿ
ಹಾಲ್ಕುರಿಕೆ ಶಿವಶಂಕರ್
ರಾಜಪ್ಪ ಕಿರಗಸೂರು
ಎಂ.ಎಸ್.ಗುಣಶೀಲನ್
ಮುದ್ದಣ್ಣ ರಟ್ಟೆಹಳ್ಳಿ
ಕೆ.ಜಗುಚಂದ್ರ

ಸಹಸದಸ್ಯರು
ಶ್ರೀಪಾದ ಭಟ್
ಗುಡಿಹಳ್ಳಿ ನಾಗರಾಜ
ಎಲ್.ಎಚ್.ರಂಗನಾಥಪ್ಪ

ರಿಜಿಸ್ಟ್ರಾರ್: ಬಿ.ಮಂಜುನಾಥ ಆರಾಧ್ಯ

ಪ್ರಥಮದರ್ಜೆ ಸಹಾಯಕರು : ಕೆ.ರೇವಣ್ಣ

ಕಚೇರಿ ಸಿಬ್ಬಂದಿ: ಸೌಭಾಗ್ಯಲಕ್ಷ್ಮೀ, ಎಂ.ಭೋಜಣ್ಣ, ಸುಶೀಲಮ್ಮ

## ಓದುವ ಪ್ರೀತಿಗೆ ಮೊದಲು .....

ಕನ್ನಡ ರಂಗಭೂಮಿಗೆ ನೂರೈವತ್ತು ವರುಷಗಳ ಇತಿಹಾಸವಿದೆ. ಹಾಗೆ ನೋಡಿದರೆ ಅದು ವೃತ್ತಿರಂಗಭೂಮಿಯ ರಂಗೇತಿಹಾಸವೂ ಹೌದು. ನಾಟಕಗಳೆಂದರೆ ಕಂಪನಿ ನಾಟಕಗಳು ಎಂಬ ಪ್ರಜಾಪ್ರಭುತ್ವವಾದಿ ಬಹುಮತದ 'ರಂಗಸತ್ಯ'ವನ್ನು ಯಾರೂ ಅಲ್ಲಗಳೆಯಲಾರರು. ರಂಗಭೂಮಿ ಚರಿತ್ರೆಕಾರರು ವೃತ್ತಿರಂಗಭೂಮಿಗೆ ನೀಡಬೇಕಾಗಿದ್ದ ಅಗತ್ಯ ಮಹತ್ವಗಳನ್ನು ನೀಡದಿರುವುದು ವಿಷಾದದ ವಿಷಯ. ವಿಶ್ವ ವಿದ್ಯಾಲಯಗಳ ಪಂಡಿತರಿಗೆ ವೃತ್ತಿ ರಂಗಭೂಮಿಯು ವಿಚಾರ ಸಂಕಿರಣಗಳ ಪ್ರಬಂಧ ಮಂಡನೆ ಹಾಗೂ ಪಿ.ಎಚ್‌ಡಿ. ಅಧ್ಯಯನದ ವಸ್ತುವಾಗಿ, ಬಳಕೆಯಾಗುತ್ತಿರುವುದು ಮಾತ್ರ ಅಲ್ಲಗಳೆಯಲಾಗದು. ಒಟ್ಟು ವೃತ್ತಿ ರಂಗಭೂಮಿ ಕುರಿತಾಗಿ ಶಾಸ್ತ್ರೀಯ ನೆಲೆಗಟ್ಟಿನ, ವಿಶ್ಲೇಷಣಾತ್ಮಕ ಮತ್ತು ಸಂಶೋಧನಾಶೀಲ ಶಾಸ್ತ್ರಗ್ರಂಥಗಳು ಬಾರದಿರುವುದು ತುಂಬಾ ವಿಳಂಬ ಮತ್ತು ವಿಷಾದದ ಸಂಗತಿಗಳು. ವೃತ್ತಿ ರಂಗ ಭೂಮಿಯ ವರ್ತಮಾನದ ತಲ್ಲಣ ಗಳನ್ನು ಕುರಿತು ಗಂಭೀರ ಚರ್ಚೆಗಳು ಆರಂಭಗೊಳ್ಳದಿರುವುದು ನೋವಿನ ವಿಷಯವೇ. ಸರ್ಕಾರಕ್ಕೆ ವೃತ್ತಿ ರಂಗಭೂಮಿಯನ್ನು ಉಳಿಸಿಕೊಳ್ಳುವ ಮನಸ್ಸಿದೆ. ಆದರೆ ಅದನ್ನು ಹೇಗೆ ಉಳಿಸಿಕೊಳ್ಳ ಬೇಕು, ಅದರ ಒಟ್ಟು ಸ್ವರೂಪದ ಆಧುನಿಕೋತ್ತರ ಸಂವರ್ಧನೆ ಹೇಗಾಗಬೇಕೆಂಬುದು ಪ್ರಶ್ನೆಯಾಗಿ ಸರ್ಕಾರ ಸೇರಿದಂತೆ ಎಲ್ಲರನ್ನು ಕಾಡಬೇಕಿದೆ.

ಆಧುನಿಕ ರಂಗಭೂಮಿಯ ತಾಯಿ ಬೇರುಗಳಿರುವುದು ವೃತ್ತಿ ರಂಗಭೂಮಿಯಲ್ಲಿ ಎನ್ನುವುದನ್ನು ಮರೆಯಲಾಗದು. ವೃತ್ತಿ ರಂಗಭೂಮಿಯದು ಬಹುತ್ವದ ಜನಸಂಸ್ಕೃತಿ. ಲೈಸೆನ್ಸ್ ಪಡೆದು ಟೆಂಟು ಹಾಕಿ ಅದರ ಸರ್ವತೋಮುಖಿ ಹೈರಾಣ–ಸಂಕಟ–ಸಂತಸ..... ಕವಡೆ ಲೋಬಾನದ ಘಮಘಮ, ವೃತ್ತ–ಕಂದ ಪದಗಳ ಕಲರವ ಕುಣಿತ.... ಹೀಗೆ ಬಹುಜನಪರತೆ ಮತ್ತು ಪ್ರೀತಿಯನ್ನು ಇಂದಿಗೂ ಉಳಿಸಿಕೊಂಡಿದೆ. ನಾಟಕ ಆಡುವುದನ್ನೇ ವೃತ್ತಿ ಮಾಡಿಕೊಂಡಿರುವ ಆಧುನಿಕ ನಟ–ನಟಿ ಪೀಳಿಗೆಯನ್ನು ಕಂಪನಿ ಶೈಲಿಯ ಅಪ್ಪಟ ವೃತ್ತಿ ರಂಗಭೂಮಿಗೆ ಸಂವಾದಿಯಾಗಿ ಕಂಡು ಅವರನ್ನು ವೃತ್ತಿ ರಂಗಭೂಮಿ ಪ್ರಭೇದಕ್ಕೆ ಸೇರಿಸಲಾಗದು. ಕೆಲವರು ಹಾಗೆ ವೃತ್ತಿಪರತೆಯ ಪ್ರೀತಿಯ ಭರದಲ್ಲಿ ವಿಶ್ಲೇಷಣೆ ಮಾಡುತ್ತಿದ್ದಾರೆ.

ವೃತ್ತಿರಂಗವು ಸೋಪಜ್ಞಶೀಲತೆ, ಅವಿಚ್ಛಿನ್ನವಾದ ಅಖಂಡತೆಯ ಸಂಸ್ಕೃತಿಯಿಂದ ಕೂಡಿದೆ. ಕುರ್ಚಿಗುಂಡಿ ತೋಡು ವುದರಿಂದ ಹಿಡಿದು ಅದರ ವೈಭವೋಪೇತ ಪಡದೆ, ಸೀನರಿಗಳು, ಝಗ ಮಗಿಸುವ ಬೆಳಕು, ಸಂಗೀತ, ಪ್ರೇಕ್ಷಕ ಸಮೂಹದ ಪ್ರತಿಕ್ರಿಯೆ ಹೀಗೆ ಒಂದು ಆಪ್ತತೆಯ ಸಂವಹನಶಾಲಿ ವಾತಾ ವರಣವನ್ನು ಇಂದಿಗೂ ವೃತ್ತಿ ರಂಗಭೂಮಿ ಉಳಿಸಿಕೊಂಡಿರು ವುದು ಪ್ರಜಾಪ್ರಭುಗಳ ಜನಪ್ರೀತಿಯ ಆಗ್ರಹಿಕೆಯೂ ಹೌದು.

ವೃತ್ತಿರಂಗದ ಈ ಎಲ್ಲ ವರ್ತಮಾನದ ತಲ್ಲಣಗಳು ತಾರ್ಕಿಕ ಅಂತ್ಯದ ಕವಲು ದಾರಿಗಳಲ್ಲಿ ನಿಂತಿರುವುದು ಸುಳ್ಳಲ್ಲ. ವೃತ್ತಿರಂಗದ ಒಟ್ಟು ವೈಭವಗಳನ್ನು ಮತ್ತೆ ಮತ್ತೆ ಹೇಳುವ ಮೂಲಕವೇ ಅದರ ಹೊಸ ಬೆಳಕಿನ ಧಾರೆಗಳನ್ನು, ದಾರಿಗಳನ್ನು ಹುಡುಕಿಕೊಳ್ಳಬೇಕಿದೆ. ಹೊಸ ಹುಡುಕಾಟಗಳಿಂದಲೇ ಪರಂಪರೆಯ ಔನ್ನತ್ಯ ಮರುಕಳಿಸುವ ಕನಸು ಕೈಗೂಡಬೇಕು. ಆ ಮೂಲಕ ಕುಟುಂಬದ ಎಲ್ಲ ಸದಸ್ಯರು ಸಂಪ್ರೀತಿಯಿಂದ, ನಿರುಮ್ಮಳವಾಗಿ ಕುಂತು ನಾಟಕ ಆಹ್ಲಾದಿಸಿಕೊಳ್ಳುವ ಸದಭಿರುಚಿಯು ಮತ್ತೆ ಮರುಕಳಿಸಬೇಕಿದೆ. ನ್ಯೂಕ್ಲಿಯಸ್ ಕುಟುಂಬದ ಎಲ್ಲ ತಲ್ಲಣಗಳಿಗೆ ವೃತ್ತಿರಂಗ ತಣ್ಣನೆಯ ಚಿಕಿತ್ಸೆಯೂ ಆಗಬಲ್ಲದು.

ಇಂತಹ ಅಂತಃಕರಣದ ಕಾರಣಗಳಿಗಾಗಿ ವೃತ್ತಿ ರಂಗ

ಭೂಮಿಯ ಆಧುನಿಕೋತ್ತರ ವಿಕಾಸಕ್ಕೆ ಎದುರು ನೋಡಬೇಕಿದೆ. ಪ್ರಸ್ತುತ ನಾನು ರಚಿಸಿರುವ ಕಂಚಿಕೇರಿ ಶಿವಣ್ಣನವರ ಬದುಕು–ರಂಗಸಾಧನೆಯ ಉತ್ಕರ್ಷಗಳನ್ನೊಳಗೊಂಡ ಈ ಪುಸ್ತಕ ಅಂತಹ ರಂಗವಿಕಾಸದ ಭಾಗವಾಗಿದೆಯೆಂದು ಭಾವಿಸುತ್ತೇನೆ.

ಹಿರಿಯ ವೃತ್ತಿ ರಂಗ ಚೇತನ ಶ್ರೀ ಕಂಚಿಕೇರಿ ಶಿವಣ್ಣ ಅಪರೂಪದ ಜೀವಧ್ವನಿ. ಅವರ ನೆನಪಿನಶಕ್ತಿ ಅಗಾಧವಾದುದು. ಎಂಬತ್ತೊಂದರ ಈ ಇಳಿ ವಯಸ್ಸಿನಲ್ಲೂ ಅವರ ಜೀವನೋತ್ಸಾಹದ ರಂಗ 'ಚಿಲುಮೆ' ಸಾಸಿವೆಯಷ್ಟು ಬತ್ತಿಲ್ಲ. ತಾರೀಖು ಸಮೇತವಾಗಿ ಹೇಳುವ ಗಣಕಯಂತ್ರದಂತಹ ಶತಮಾನದ ನೆನಪುಗಳ ಗಣಿ ಅವರು. ಶಿವಣ್ಣನವರೊಂದಿಗೆ ಮಾತನಾಡುವುದೆಂದರೆ ಕನ್ನಡ ವೃತ್ತಿರಂಗ ಭೂಮಿಯ ಅನಂತತೆಯೊಂದಿಗೆ ಸಂವಾದ ಮಾಡಿದಂತೆ. ಪ್ರಸ್ತುತ ಅವರು ದಾವಣಗೆರೆ ಶಹರ, ಎಸ್.ಎಂ.ಕೆ. ನಗರ ಆಶ್ರಯ ಮನೆಯಲ್ಲಿದ್ದಾರೆ.

ಈ ಪುಸ್ತಕ ರಚಿಸಿಕೊಡಲು ಕೇಳಿ ನೆನಪೋಲೆಗಳನ್ನು ಬರೆದು ನೆನಪಿಸಿದ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರು, ನನ್ನ ಸನ್ಮಿತ್ರರೂ ಆದ ಶ್ರೀ ಎಲ್.ಬಿ. ಶೇಖ ಮಾಸ್ತರರು, ನಾಟಕ ಅಕಾಡೆಮಿ ರಿಜಿಸ್ಟ್ರಾರ್ ಆದ ಶ್ರೀ ಮಂಜುನಾಥ ಆರಾಧ್ಯ ಅವರು, ತಮ್ಮ ರಂಗ ನೆನಪುಗಳನ್ನು ಆತ್ಮಕಥನದಂತೆ ನನ್ನೆದುರು ತೆರೆದಿಟ್ಟ ಶ್ರೀ ಕಂಚಿಕೇರಿ ಶಿವಣ್ಣ ಹಾಗೂ ಅವರ ಕುಟುಂಬದ ಎಲ್ಲ ಸದಸ್ಯರಿಗೂ ನನ್ನ ನಮಸ್ಕಾರಗಳು.

ಕರ್ನಾಟಕ ನಾಟಕ ಅಕಾಡೆಮಿಯು ಕಂಚಿಕೇರಿ ಶಿವಣ್ಣನವರ ಜೀವಮಾನದ ರಂಗ ಸಾಧನೆಯನ್ನು ಗುರುತಿಸಿ ಅವರನ್ನು ವಿಶೇಷವಾಗಿ ಗೌರವಿಸುತ್ತಿರುವುದು ಶ್ಲಾಘನೀಯ. ಅದರಲ್ಲೂ ದಾವಣಗೆರೆಯಲ್ಲೇ ಅವರಿಗೆ ವಿಶೇಷ ಸನ್ಮಾನ ಸಮಾರಂಭ ಏರ್ಪಡಿಸಿ ಅವರ ಕುರಿತಾದ ಈ ಪುಸ್ತಕ ಇದೇ ಸಮಾರಂಭದಲ್ಲಿ ಬಿಡುಗಡೆ ಆಗುತ್ತಿರುವುದು ರಂಗಪ್ರೇಮಿಗಳಿಗೆಲ್ಲರಿಗೂ ಖುಷಿಯ ಮಜಕೂರ. ಈ ಪುಟ್ಟಕೃತಿ ರಚಿಸಲು ನೆರವಾದ ಎಲ್ಲರಿಗೂ ಓದುವ ನಿಮಗೆಲ್ಲ ನಲ್ಮೆಯ ನೆನಹುಗಳು.

ದೀವಳಿಗೆ–2016 — *ಮಲ್ಲಿಕಾರ್ಜುನ ಕಡಕೋಳ*

ದಾವಣಗೆರೆ. — **9341010712**

# ಅಂತರಂಗ


| | | |
|---|---|---|
| 1. | ಓದುವ ಪ್ರೀತಿಗೆ ಮೊದಲು | |
| 2. | ನಾಂದಿಗೆ ಮುನ್ನ | 1 |
| 3. | ಬಾಲ್ಯ–ವಿದ್ಯಾಭ್ಯಾಸ | 5 |
| 4. | ಬಿಟ್ಟೇನೆಂದರೂ ಬಿಡದ ಬಣ್ಣದ ಮಾಯೆ | 9 |
| 5. | ಕಲಬುರ್ಗಿ ಕ್ಯಾಂಪಿನ ಖುಷ್ ಖಬರ್ | 13 |
| 6. | ಓಬಳೇಶ್ವರ ಕಂಪನಿಯಲ್ಲಿ ರಂಗ ವಿಪ್ಲವ | 18 |
| 7. | ವರದಾನದಿಯ ಆಚೆ–ಈಚೆ | 20 |
| 8. | ನಿರುದ್ಯೋಗ ಪರ್ವದ ಕ್ರೂರ ಬೇಸರ | 24 |
| 9. | ಮಡ್ಲೇರಿಯಲ್ಲಿ ಪವಾಡ ಸದೃಶ ಮಳೆ | 27 |
| 10. | ಎಂ.ಪಿ. ಪ್ರಕಾಶ್‌ಗೂ ಕೇರ್ ಮಾಡದ ಅಧಿಕಾರಿಗಳು | 31 |
| 11. | ಗಡಿನಾಡಲ್ಲಿ ಮಡುಗಟ್ಟಿದ ದುಃಖ ದುಮ್ಮಾನಗಳು | 38 |
| 12. | ವಜ್ರಮಹೋತ್ಸವದ ಕನಸಿನಂತಹ ನೆನಪು | 53 |
| 13. | ಮೂರು ತಲೆಮಾರಿನ ಶಿವಣ್ಣನ ರಂಗ ಕುಟುಂಬ | 55 |
| 14. | ಅನುಬಂಧ | 56 |

# ನಾಂದಿಗೆ ಮುನ್ನ...

ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ದಾವಣಗೆರೆಗೆ ವಿಶೇಷ ಸ್ಥಾನಮಾನ. ಈ ಊರಿನ ಟಿ.ಎ. ಕೋಲಶಾಂತಪ್ಪ ಕನ್ನಡದ ಪ್ರಥಮ ಸಾಮಾಜಿಕ ನಾಟಕಕಾರ. ಸಮಾಜಶಾಸ್ತ್ರೀಯ ನೆಲೆಗಟ್ಟಿನ ಅವಿಭಕ್ತ ಕುಟುಂಬಪ್ರೀತಿ, ದೇಶಭಕ್ತಿ, ಆದರ್ಶಪ್ರಾಯ ಬದುಕು, ರೋಲ್ ಮಾಡೆಲ್ ವ್ಯಕ್ತಿತ್ವ ಇಂತಹ ಅನೇಕ ಗಟ್ಟಿಮುಟ್ಟಾದ ನೀತಿ, ವಸ್ತು, ವೈವಿಧ್ಯಮಯ ನಾಟಕಗಳನ್ನು ರಚಿಸಿದ ಕೀರ್ತಿ ಕೋಲ ಶಾಂತಪ್ಪನವರದು. ವೃತ್ತಿ ನಾಟಕ ಕಂಪನಿಗಳ ಸಂದರ್ಭದಲ್ಲಿ ಚಿಂದೋಡಿ ನಾಟಕ ಕಂಪನಿಯದು ಹಿರಿದಾದ ಹೆಸರು. ಈ ಕಂಪನಿಗಿಂತ ಮೊದಲೇ ಈ ಊರಿನ ಮತ್ತೊಂದು ಮಹತ್ವದ ನಾಟಕ ಕಂಪನಿಯೆಂದರೆ ಕಂಚಿಕೇರಿ ಕೊಟ್ರಬಸಪ್ಪನವರು ಸ್ಥಾಪಿಸಿದ ಶ್ರೀ ಜಯಲಕ್ಷ್ಮಿ ನಾಟಕ ಸಂಘ. 1918ರ ಸುಮಾರಿಗೆ ಶ್ರೀ ಶಬ್ದಮಣಿ ಕೊಟ್ರಯ್ಯ ಹಾಗೂ ಶ್ರೀ ಜ್ಯೋತಿ ಕರಿಯಪ್ಪನವರ ಸಹಕಾರದೊಂದಿಗೆ ಹಿರೇಹಡಗಲಿಯಲ್ಲಿ ಶ್ರೀ ಜಯಲಕ್ಷ್ಮಿ ಪ್ರಾಸಾದಿಕ ನಾಟಕ ಮಂಡಳಿಯನ್ನು ಕಂಚಿಕೇರಿ ಕೊಟ್ರಬಸಪ್ಪ ಆರಂಭಿಸುತ್ತಾರೆ. 'ರಾಮಕೊರವಂಜಿ-ಕೃಷ್ಣ ಕೊರವಂಜಿ' ನಾಟಕವೇ ಅವರ ಕಂಪನಿಯ ಪ್ರಥಮ ಜಾನಪದ ನಾಟಕ. ಸ್ಥಳೀಯವಾಗಿ ಲಭ್ಯವಿದ್ದ ರಂಗ ಪರಿಕರಗಳ ನೆರವಿನೊಂದಿಗೆ ಕಂಪನಿ ಆರಂಭಿಸುತ್ತಾರೆ.

ಕಂಪನಿ ದಾವಣಗೆರೆಗೆ ಬಂದು ದಿನಾಂಕ : 3.11.1921ರಲ್ಲಿ ತ್ರಿಕೋಟಿ ಲಿಂಗಪ್ರತಿಷ್ಠಾಪನೆ ಎಂಬ ಪೌರಾಣಿಕ ನಾಟಕದ ಮೂಲಕ ಶ್ರೀ ಜಯಲಕ್ಷ್ಮಿ ನಾಟಕ ಸಂಘವಾಗಿ ತನ್ನ ಅಸ್ತಿತ್ವವನ್ನು ಭದ್ರಪಡಿಸಿಕೊಳ್ಳುತ್ತದೆ. ಅಂದಿನ ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ಕಂಚಿಕೇರಿ ಗ್ರಾಮದಲ್ಲಿ (ಇಂದು ದಾವಣಗೆರೆ ಜಿಲ್ಲೆ) 1884ರಲ್ಲಿ ಜನಿಸಿದ ಕೊಟ್ರಬಸಪ್ಪ ಜಾಣ ವಿದ್ಯಾರ್ಥಿ. ಬಾಲ ಸರಸ್ವತಿ ಎಂಬ ಬಿರುದು ಪಡೆದವರು. ಸಂಗೀತ, ನಾಟಕ, ಧಾರ್ಮಿಕ ಕ್ಷೇತ್ರಗಳಲ್ಲಿ ವಿಶೇಷ ಆಸಕ್ತಿ ಉಳ್ಳವರಾಗಿದ್ದರು. ಕೊಟ್ಟೂರಿನ ಸಾಹುಕಾರ ಶ್ರೀ ಜಾಗಟಗೇರಿಯವರ ಬಳಿ

ಗುಮಾಸ್ತರಾಗಿ ಕೆಲಸಕ್ಕೆ ಸೇರಿ ರಂಗಭೂಮಿಯ ತೀವ್ರ ಆಸಕ್ತಿ ಬೆಳೆಸಿಕೊಂಡು ರಂಗ ವೈಭವ ಮೆರೆದರು.

ಆ ಕಾಲದಲ್ಲಿ ಕರ್ನಾಟಕ ಸಂಗೀತ ವಿದುಷಿಯೆಂದೇ ಖ್ಯಾತರಾಗಿದ್ದ ಆಂಧ್ರ ಪ್ರದೇಶದ ಲಕ್ಷ್ಮಮ್ಮ ಎಂಬುವರು ಕರ್ನಾಟಕಕ್ಕೆ ರಂಗನಾಟಕಗಳ ಮೂಲಕ ಪರಿಚಯವಾಗುತ್ತಾರೆ. ಹಾಗೆ ಬಂದವರು ಕೊಟ್ರಬಸಪ್ಪನವರ ಬಾಳ ಸಂಗಾತಿಯೂ ಆಗುತ್ತಾರೆ. ಕೊಟ್ರಬಸಪ್ಪನವರ ರಂಗ ಬದುಕಿನ ದೊಡ್ಡ ತಿರುವಿಗೂ ಕಾರಣವಾಗುತ್ತಾರೆ.

ತೆಲುಗಿನಲ್ಲಿದ್ದ ಕೈ ಬರಹದ ಹೇಮರೆಡ್ಡಿ ಮಲ್ಲಮ್ಮ ಪುರಾಣವೊಂದನ್ನು ಲಕ್ಷ್ಮಮ್ಮನವರು ಕನ್ನಡ ನಾಟಕವಾಗಿಸುವಲ್ಲಿ ತೋರಿದ ಶ್ರಮ, ಶ್ರದ್ಧೆ ಅನನ್ಯವಾದುದು. 'ಗಾಳಿಪಟದ ಮಲ್ಲಮ್ಮ' ನಾಟಕವೆಂದೇ ಪ್ರಸಿದ್ಧವಾದ 'ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ' ನಾಟಕವನ್ನು ಕನ್ನಡಕ್ಕೆ ಪ್ರಥಮವಾಗಿ (1925) ನೀಡಿದ ಕೀರ್ತಿ ಇವರದು. ಆ ನಾಟಕವನ್ನು ತಮ್ಮ ಕಂಪನಿ ಮೂಲಕ ಮೊದಲ ಬಾರಿಗೆ ಬಾಗಲಕೋಟೆ ಕ್ಯಾಂಪಿನಲ್ಲಿ ಸತತ ನೂರು ಪ್ರಯೋಗ ದಾಖಲೆ ಮಾಡಿದ ಶ್ರೇಯಸ್ಸು. ಆ ಕಾಲದಲ್ಲಿ ಶಾಂತಕುಮಾರಿ ಹಾಗೂ ಮಲ್ಲಮ್ಮನಾಟಕದ ಪಾತ್ರದಾರಿ ಲಕ್ಷ್ಮಮ್ಮ ಅದೆಷ್ಟು ಪ್ರಸಿದ್ಧರಾಗಿದ್ದರೆಂದರೆ ಜನ ಈ ನಟಿ ಶಿರೋಮಣಿಯನ್ನು ಮನೆ ಮನೆಗೆ ಕರೆದೊಯ್ದು ಇಲಕಲ್ ಸೀರೆ, ಕುಬುಸದ ಖಣ, ಬೆಳ್ಳಿ ಪದಕಗಳನ್ನು ನೀಡಿ ಸತ್ಕರಿಸಿದರು. ಬಿಜಾಪುರ, ಸೊಲ್ಲಾಪುರ, ಅಕ್ಕಲಕೋಟೆ, ಗುಲಬರ್ಗಾ, ಧಾರವಾಡ, ರಾಯಚೂರು, ಬಳ್ಳಾರಿ, ಆಂಧ್ರದ ನಾರಾಯಣಪೇಟೆ ಪ್ರಾಂತಗಳಲ್ಲಿ (1946) ಶ್ರೀ ಜಯಲಕ್ಷ್ಮಿ ನಾಟಕ ಸಂಘ ಹೀಗೆ ಮೂರು ರಾಜ್ಯಗಳಲ್ಲಿ ಮನೆ ಮಾತಾಯಿತು.

ಇದೇ ಕಂಪನಿಯ ಭೌಮಾಸುರ, ಶಾಂತಕುಮಾರಿ, ಹೆಳವನಕಟ್ಟೆ ಗಿರಿಯಮ್ಮ, ಚನ್ನಮ್ಮನ ದಂಡಿಯಂತಹ ಸಾಮಾಜಿಕ, ಪೌರಾಣಿಕ ನಾಟಕಗಳನ್ನು ರಚಿಸಿ ಮೂರುದಶಕಗಳಿಗೂ ಹೆಚ್ಚುಕಾಲ ಪ್ರಯೋಗಿಸಿದ ಕೀರ್ತಿ ಕೊಟ್ರಬಸಪ್ಪ ಹಾಗೂ ಈ ಕಂಪನಿಯದು. ಕೊಟ್ರಬಸಪ್ಪ ರಂಗಸಂಘಟಕ, ನಿರ್ದೇಶಕ, ನಟ, ನಾಟಕಕಾರ ಬಹುಮುಖ ಪ್ರತಿಭೆಯುಳ್ಳವರಾಗಿದ್ದರು.

ಅವರ ಕಂಪನಿಯಲ್ಲಿ ನೂರಾಹತ್ತು ಮಂದಿ ರಂಗಕರ್ಮಿಗಳಿದ್ದರು. ಪೇಂಟರ್‌ಗಳನ್ನು, ರಂಗಸಜ್ಜಿಕೆ ತಯಾರಕರನ್ನು, ಡೈನಮೋ ಫಿಟ್ಟರ್‌ಗಳನ್ನು ಕೂಡಾ ಆಗಿನ ಕಾಲದಲ್ಲೇ ಸಂಬಳಕ್ಕೆ ನೇಮಿಸಿಕೊಂಡಿದ್ದರು. ಅರವತ್ತು ಸಾವಿರ ರೂಪಾಯಿಗಳ ವೆಚ್ಚದಲ್ಲಿ ಸರಿದಾಡುವ ರಂಗಸಜ್ಜಿಕೆ, ತಿರುಗುವ ರಂಗಮಂದಿರ ಆ ಕಾಲದಲ್ಲಿ ನಿರ್ಮಿಸಿದ ಸಾಹಸ ಇವರದು. ಆರುತಿಂಗಳ ಕಾಲ (1940) ಅದಕ್ಕಾಗಿ ಕಂಪನಿ

ಬಂದ್ ಮಾಡಿ ಇಂತಹದ್ದೊಂದು ಹರ ಸಾಹಸ ಮಾಡಿದ್ದರು. ಗುಬ್ಬಿಕಂಪನಿ, ಶಿರಹಟ್ಟಿ ವೆಂಕೋಬರಾಯರ ಕಂಪನಿಗಳು. ಆ ಕಾಲದಲ್ಲಿ ರಂಗವೈಭವದ ಪೈಪೋಟಿಯಲ್ಲಿದ್ದವು. ಅಂತಹ ಪ್ರಸಿದ್ಧ ಕಂಪನಿಗಳಿಗೆ ಕಮ್ಮೀ ಇಲ್ಲದಂತೆ ಶ್ರೀಮಂತವಾದ ರಂಗಪರಿಕರಗಳನ್ನು ಈ ಕಂಪನಿ ಹೊಂದಿತ್ತು. ಹರಿಹರದ ಕ್ಯಾಂಪಿನಲ್ಲಿ ನಷ್ಟ ಅನುಭವಿಸಿದ ಶಿರಹಟ್ಟಿ ವೆಂಕೋಬರಾಯರ ಕಂಪನಿಯ 500ಕುರ್ಚಿ, ಜರತಾರಿ ಸೀರೆಗಳನ್ನು ಇತರೆ ರಂಗ ಪರಿಕರಗಳನ್ನು ಕೊಟ್ರಬಸಪ್ಪ ಖರೀದಿ ಮಾಡುತ್ತಾರೆ. ಜರತಾರಿ ಸೀರೆಗಳನ್ನು ಸುಟ್ಟು ಒಂದು ಸಾವಿರ ತೊಲ ಬೆಳ್ಳಿ ಅದರಿಂದ ಪಡೆಯುತ್ತಾರೆ. ಎರಡೆರಡು ರೈಲ್ವೆ ವ್ಯಾಗೀನುಗಳಲ್ಲಿ, ನೂರಾಐವತ್ತು ಚಕ್ಕಡಿಗಾಡಿಗಳಲ್ಲಿ ಈ ನಾಟಕ ಕಂಪನಿಯ ಸಾಮಾನು ಸರಂಜಾಮುಗಳನ್ನು ಹೇರಿಕೊಂಡು ಹೋಗಬೇಕಿತ್ತು. ಸ್ವಾತಂತ್ರ್ಯ ಹೋರಾಟದ ಸಂದರ್ಭ ಹಾಗೂ ಕಾಂಗ್ರೆಸ್ ನಿಧಿಗಾಗಿ ಈ ಕಂಪನಿ ಆಗಿನ ಕಾಲದಲ್ಲಿ ನಲವತ್ತೆಂಟು ಸಾವಿರ ರೂಪಾಯಿ ದೇಣಿಗೆ ನೀಡಿತು. ಮಹಾರಾಷ್ಟ್ರದ ಅಕ್ಕಲಕೋಟಿಯಲ್ಲಿ ಇವರ ಕಂಪನಿ ಬೆಳ್ಳಿಹಬ್ಬ ಆಚರಣೆ ಮಾಡುತ್ತದೆ.

ಹೀಗೆ ಇಂತಹ ಹತ್ತು ಹಲವು ದಾಖಲೆಗಳ ನಿರ್ಮಾಣದ, ಅಷ್ಟೇ ಅದ್ದೂರಿತನದ ಸುಂದರ ಸಂಗೀತ ನಾಟಕ ಮಂಡಳಿಯೊಂದು ಹೇಗಿರಬಹುದೆಂಬ ಆದರ್ಶಪ್ರಾಯದ ಉದಾಹರಣೆಯಂತೆ ಈ ಕಂಪನಿಯನ್ನು ಕೊಟ್ರಬಸಪ್ಪ ಕಟ್ಟುತ್ತಾರೆ. ತಮಗೆ ವಯಸ್ಸಾದಂತೆ ತಮ್ಮ ಮಗ ಬಸವಣ್ಣೆಪ್ಪನಿಗೆ ಕಂಪನಿಯ ಹೊಣೆ ವಹಿಸುತ್ತಾರೆ. ಮಗ ಕೂಡಾ ಈ ರಂಗಪರಂಪರೆಯನ್ನು ಮುಂದುವರೆಸುತ್ತಾರೆ. ಅವರೊಂದಿಗೆ ಹೆಸರಾಂತ ಕಲಾವಿದರ ತಂಡವೇ ಇತ್ತು. ಹೀಗಿರಬೇಕಾದರೆ 1950ರ ಸುಮಾರಿಗೆ ಕೂಡ್ಲಿಗಿ ತಾಲ್ಲೂಕಿನ ಬಣವಿಕಲ್ಲು ಗ್ರಾಮದಲ್ಲಿ ಕಂಪನಿ ಕ್ಯಾಂಪ್ ಮಾಡಿತ್ತು. ಬೆಳಕಿಗೆ ಇರಲೆಂದು ಇಟ್ಟಿದ್ದ ಗ್ಯಾಸ್‌ಲೈಟ್ ಸಿಡಿದು ನಾಟಕ ಕಂಪನಿ ಬೆಂಕಿ ಅನಾಹುತಕ್ಕೆ ಈಡಾಗಿ ಸಂಪೂರ್ಣವಾಗಿ ಸುಟ್ಟು ಹೋಯಿತು. ತಂತ್ರಜ್ಞರು ನಿರ್ಮಿಸಿದ್ದ ಮೂವತ್ತು ವರ್ಷಗಳ ಕಾಲದ ನಿರಂತರ ರಂಗವೈಭವ, ಭೌಮಾಸುರ ನಾಟಕಕ್ಕೆಂದೇ ವಿಶೇಷವಾಗಿ ನಿರ್ಮಿಸಿದ್ದ ಬೃಹತ್ತಾದ ರಂಗಸಜ್ಜಿಕೆ ಕ್ಷಣ ಮಾತ್ರದಲ್ಲಿ ಭಸ್ಮವಾಗುತ್ತದೆ. ಸುಂದರ ರಂಗ ವೈಭವವೊಂದು ಕಣ್ಮರೆಯಾಗುತ್ತದೆ.

ಇದೆಲ್ಲ ಆಘಾತ ಕೊಟ್ರಬಸಪ್ಪನವರ ಸೂಕ್ಷ್ಮ ಮನದ ಮೇಲೆ ಪೆಟ್ಟು ಕೊಟ್ಟಿತು. ಆದಾಗ್ಯೂ ಧೃತಿಗೆಡದೇ ಕಡತಿಯಲ್ಲಿದ್ದ ಅರವತ್ತು ಎಕರೆ ಜಮೀನು ಮಾರಿ ಪುನಃ ಕಂಪನಿ ಕಟ್ಟುತ್ತಾರೆ. ಆದರೆ ಮುನ್ನಿನಂತಾಗುವ ಸೂಚನೆಗಳಿರುವುದಿಲ್ಲ. ಕೊಟ್ರಬಸಪ್ಪನವರ ರಂಗ ಕನಸುಗಳಿಗೆ ಬೆಂಕಿ ಬಿದ್ದಂತಾಯಿತು. ಕೊಟ್ರಬಸಪ್ಪ ಅದೇ ವ್ಯಸನದಲ್ಲಿ ಹಾಸಿಗೆ ಹಿಡಿಯುತ್ತಾರೆ. ಈಗಿನ ದಾವಣಗೆರೆ ನಗರದಲ್ಲಿರುವ ಚೇತನಾ ಹೋಟೆಲ್ ಬಳಿ ಆಗ ತಾವು ಕಟ್ಟಿಸಿದ್ದ ಬಂಗಲೆಯನ್ನೇ ಮಾರಾಟ ಮಾಡುತ್ತಾರೆ.

ಕಂಪನಿಗಾಗಿ ಎಲ್ಲ ಆಸ್ತಿಪಾಸ್ತಿ ಮಾರಾಟ ಮಾಡುತ್ತಾರೆ. ನಂತರ ಇಲಕಲ್ ಕ್ಯಾಂಪ್ ಮಾಡಿ ನಷ್ಟ ಅನುಭವಿಸ್ತಾರೆ. ಕಂಪನಿ ಸುಟ್ಟು ಹೋದ ಖಿನ್ನತೆಯಲ್ಲಿಯೇ 1959ರಲ್ಲಿ ಕೊಟ್ರಬಸಪ್ಪ ಕಾಲವಶವಾಗುತ್ತಾರೆ. ಗಂಡನನ್ನು ಕಳೆದುಕೊಂಡ ವ್ಯಸನದಲ್ಲೇ ಕರ್ನಾಟಕ ಸಂಗೀತ ವಿದುಷಿ, ರಂಗನಟಿ ಲಕ್ಷ್ಮಮ್ಮ ತಿಂಗಳೊಪ್ಪತ್ತಿನಲ್ಲೇ ತೀರಿಕೊಳ್ಳುತ್ತಾರೆ. ಕೊಟ್ರಬಸಪ್ಪನವರ ಮಗ ಬಸವಣ್ಣೆಪ್ಪನವರಿಗೆ ಕಂಪನಿಯನ್ನು ತಂದೆಯವರ ರೀತಿಯಲ್ಲಿ ನಡೆಸಿಕೊಂಡು ಹೋಗುವುದು ಕಷ್ಟವಾಗುತ್ತದೆ. ಅವರು ತಮ್ಮ ಮಗ ಕಂಚಿಕೇರಿ ಶಿವಣ್ಣನವರಿಗೆ ಕಂಪನಿ ಹೊಣೆ ಹೊರೆಸಿ ತಾವೂ ಕಂಪನಿಯಲ್ಲಿರುತ್ತಾರೆ. ಹಾರ್ಮೋನಿಯಂ ನುಡಿಸುವಲ್ಲಿ ಬಸವಣ್ಣೆಪ್ಪ ಪ್ರಸಿದ್ದರು. ಸಾತ್ವಿಕ ಸ್ವಭಾವದ ಅವರು ಅಂತಹದ್ದೇ ಪಾತ್ರ ಮಾಡುತ್ತಿದ್ದರು.

1940ರಲ್ಲೇ ಭೌಮಾಸುರ ಎಂಬ ಇವರ ಕಂಪನಿಯ ಹೆಸರಾಂತ ನಾಟಕದಲ್ಲಿ ಬಾಲ ಭೌಮಾಸುರನಾಗಿ ತಮ್ಮ ಅಜ್ಜಿ ಲಕ್ಷ್ಮಮ್ಮನವರಿಂದ ಬಣ್ಣ ಹಚ್ಚಿಕೊಂಡ ಕಂಚಿಕೇರಿ ಶಿವಣ್ಣ ಆ ಮೂಲಕ ರಂಗ ಪ್ರವೇಶ ಮಾಡುತ್ತಾರೆ. ತಾತ–ಅಜ್ಜಿಯವರ ಕೃಪಾಶೀರ್ವಾದದ ನೆರಳಲ್ಲಿ ತಂದೆಯ ಸಲಹೆ–ಸಹಕಾರಗಳೊಂದಿಗೆ ಶಿವಣ್ಣ ನಡೆದುಬಂದ ದಾರಿಯನ್ನು ಅವರ ಆತ್ಮಕಥನದಂತೆ ಅವರದೇ ಕಂಪನಿಯ ಹಾಗೂ ಅವರ ಕತೆ ಕೇಳೋಣ.

# ಬಾಲ್ಯ–ವಿದ್ಯಾಭ್ಯಾಸ

ಕೆ.ಬಿ. ಬಸವಣ್ಣೆಪ್ಪ ಗೌರಮ್ಮ, ಕಂಚಿಕೇರಿ ಶಿವಣ್ಣನವರ ಅಪ್ಪ ಅಮ್ಮ. ದಿನಾಂಕ : 4.7.1936ರಂದು ಹುಟ್ಟಿದ್ದು, ಸ್ವತಃ ಶಿವಣ್ಣ ಹೇಳುವಂತೆ ನಾನು ಬಂಗಾರದ ಚಮಚವನ್ನೇ ಬಾಯಲ್ಲಿಟ್ಟುಕೊಂಡು ಹುಟ್ಟಿದೆ. ಹೌದು ಇವರ ತಾತ ಕಟ್ಟಿದ ಶ್ರೀ ಜಯಲಕ್ಷ್ಮಿ ನಾಟಕ ಸಂಘ ಅತ್ಯಂತ ವೈಭವ ಮೆರೆಯುತ್ತಿದ್ದ ಕಾಲ ಅದಾಗಿತ್ತು.

ದಾವಣಗೆರೆಯ ಕಾಯಿಪೇಟೆ ಬಸವೇಶ್ವರ ದೇವಸ್ಥಾನದ ಶಾಲೆಯಲ್ಲಿ ಹಿರಿಯ ಪ್ರಾಥಮಿಕ ಶಿಕ್ಷಣ ಮುಗಿಸಿ, ಸರ್ಕಾರಿ ಪ್ರೌಢಶಾಲೆಯಲ್ಲಿ ಮೊದಲ ಭಾಷೆಯಾಗಿ ಇಂಗ್ಲಿಷ್, ಎರಡನೇ ಭಾಷೆಯಾಗಿ ಕನ್ನಡ ಕಲಿತರು. ಶಿವಣ್ಣಗೆ ಕ್ರೀಡೆಗಳೆಂದರೆ ಪಂಚಪ್ರಾಣ. ಬಾಸ್ಕೆಟ್‌ಬಾಲ್, ಕ್ರಿಕೆಟ್ ಅವರ ಅಚ್ಚುಮೆಚ್ಚಿನ ಆಟಗಳು. ಎನ್.ಸಿ.ಸಿ. ಯಲ್ಲೂ ಅಪಾರ ಆಸಕ್ತಿ. ಸತತ ಮೂರು ವರ್ಷ ತರಬೇತಿ ಪಡೆದು ಮೈಸೂರು–ಬೆಂಗಳೂರು ಕ್ಯಾಂಪ್‌ಗಳಿಗೆ ಹೋಗಿಬಂದು ಎ ಮತ್ತು ಬಿ ಸರ್ಟಿಫಿಕೆಟ್ ಪಡೆದರು. 1955ರಲ್ಲಿ ಮೆಟ್ರಿಕ್ ಪಾಸಾಗಿ ಡಿ.ಆರ್.ಎಂ. ಕಾಲೇಜಿಗೆ ಸೇರಿದರು. ಕಾಲೇಜುಗಳಲ್ಲಿ ಮುಕ್ಕಾಲು ತಾಸಿನ ನಾಟಕಗಳೆಂದರೆ ಹಿಡಿಸುತ್ತಿರಲಿಲ್ಲ. ಇಡೀ ರಾತ್ರಿ ತನ್ನ ತಾತ ಆಡುತ್ತಿದ್ದ ವೃತ್ತಿ–ನಾಟಕಗಳತ್ತ ಶಿವಣ್ಣಗೆ ಒಲವು. ಜನತಾವಾಣಿ ಪತ್ರಿಕೆ ಸಂಪಾದಕ ಎಚ್.ಎನ್. ಷಡಾಕ್ಷರಪ್ಪ, ಆರ್.ಎಲ್. ರಮಾನಂದ, ಎ.ಸಿ. ಚಂದ್ರಣ್ಣ ಇವರ ಕ್ಲಾಸ್‌ಮೇಟ್ಸು.

ಕಳ್ಳ ಹೊಕ್ಕ ಮನೆ ಉಳಿಯಲು ಸಾಧ್ಯ. ಆದರೆ ಕೊಳ್ಳಿಹೊಕ್ಕ ಮನೆ ಉಳಿಯಲು ಸಾಧ್ಯವೇ ಎಂಬಂತೆ ಇವರ ತಾತ ಕಟ್ಟಿದ ನಾಟಕ ಕಂಪನಿ 1950ರಲ್ಲಿ ಬೆಂಕಿಗೆ ಆಹುತಿಯಾಗಿ ಅನೇಕ ರಂಗ ವೈಭವಗಳನ್ನು, ಆ ಬೆಂಕಿ ಬಲಿಪಡೆಯಿತು. ದಾವಣಗೆರೆಯ ಕಾಯಿಪೇಟೆ ನಿವೇಶನ, ಪಿ.ಜೆ. ಬಡಾವಣೆ ಮನೆ ಮಾರಿ ಕಂಪನಿಯ

ಪುನಶ್ಚೇತನಕ್ಕೆ ಇವರ ತಾತ, ಅಜ್ಜಿ, ಅಪ್ಪ ಸಾಕಷ್ಟು ಪ್ರಯತ್ನಿಸಿದರು. ಆರ್ಥಿಕ ಸಂಕಷ್ಟದಿಂದಾಗಿ ಶಿವಣ್ಣ ಕಾಲೇಜು ವಿದ್ಯಾಭ್ಯಾಸ ಮೊಟಕುಗೊಳಿಸಿ ಕುಟುಂಬ ಹಾಗೂ ನಾಟಕ ಕಂಪನಿಯ ಉಸ್ತುವಾರಿ ನೋಡಿಕೊಳ್ಳಬೇಕಾಯ್ತು. ಅನಿವಾರ್ಯವಾಗಿ ಕಂಪನಿ ನಡೆಸಲು ಸಾಧ್ಯವಾಗದೇ ಕೆಲಕಾಲ ಸ್ಥಗಿತಗೊಳಿಸಿದರು. ಇವರ ಕುಟುಂಬದ ವೈದ್ಯ ಡಾ॥ ಶಿವಶಂಕರ್ ಅವರ ಸಲಹೆ ಮೇರೆಗೆ ಶಿವಣ್ಣ ಗುರುರಾಜ ಬಸ್ ಏಜೆಂಟರಾಗಿ (ದಾವಣಗೆರೆ–ಚಿತ್ರದುರ್ಗ) ಕೆಲಸಕ್ಕೆ ಸೇರಿದರು. ಎರಡು ವರ್ಷಗಳ ಕಾಲ ಗತಿಸುತ್ತಿರ ಬೇಕಾದರೆ ಇವರ ತಾತ ಈತನನ್ನು ಹತ್ತಿರ ಕರೆದು ಪುನಃ 'ಕಂಪನಿ ಆರಂಭಿಸುತ್ತೇನೆಂದು ವಚನಕೊಡು' ಇದು ನನ್ನ ಅಂತಿಮ ಬಯಕೆ ಎಂದಾಗ ಶಿವಣ್ಣ ಇಲ್ಲವೆನ್ನಲಿಲ್ಲ.

ಆ ಪ್ರಕಾರ ತಾನು ಕೂಡಿಟ್ಟುಕೊಂಡಿದ್ದ ಆರು ಸಾವಿರ ಹಾಗೂ ಸಾಲ ಮಾಡಿ ಮೂರು ಸಾವಿರ ಸೇರಿಸಿ ಸೀನ್ಸ್, ಸೈಡ್‌ವಿಂಗ್ಸ್ ಸಿದ್ಧಗೊಳಿಸಲು ಬಾಬುರಾವ್ ಪೇಂಟರ್‌ರನ್ನೇ ಕರೆಸಿಕೊಂಡರು. ನಾಟಕ ನಿರ್ದೇಶನಕ್ಕೆ ಗರುಡ ಸದಾಶಿವರಾಯರ ಮಗ ಶ್ರೀಪಾದರಾವ್ ಗರುಡರನ್ನು ಕರೆಸಿ ಎಚ್.ಎನ್. ಹೂಗಾರರ ಮಕ್ಕಳ ಮದುವೆ ಎಂಬ ಹೊಸನಾಟಕದ ಪ್ರಾಕ್ಟೀಸ್ ಹಚ್ಚಿದರು. ಈ ನಾಟಕದಲ್ಲಿ ಅಭಿನಯಿಸಲು ಆರ್.ಟಿ. ರಮಾ, ಬೆಂಗಳೂರಿನ ಅನಸೂಯ, ತುಮಕೂರಿನ ಸಿದ್ದಲಿಂಗಪ್ಪ, ಹಾವೇರಿಯ ಬಸವಲಿಂಗಶಾಸ್ತ್ರಿ, ಅವರ ಪತ್ನಿ ಲಕ್ಷ್ಮೀದೇವಿ, ಮೆಡ್ಲೇರಿರಾಮಣ್ಣ, (ಹಾರ್ಮೋನಿಯಂ) ಹಸನ್‌ಸಾಬ್ (ತಬಲ) ಪ್ರಹ್ಲಾದ (ಕ್ಲಾರಿಯೋನೆಟ್) ಇನ್ನು ಅನೇಕರು ರಂಗತಾಲೀಮಿಗೆ ಅಣಿಯಾದರು. ಆರ್.ಟಿ. ರಮಾ ಆಗತಾನೇ ಎಸ್.ಎಸ್. ಎಲ್.ಸಿ. ಪರೀಕ್ಷೆ ಬರೆದು ಬಂದಿದ್ದರು. ನಾಟಕದ ಉಸ್ತುವಾರಿ ನೋಡಲು ಆರ್.ಜಿ. ಗೌರಿಶಂಕರ್ ಪ್ರೀತಿಯಿಂದ ಅವರೊಂದಿಗಿದ್ದರು. ಹೀಗೆ ಅತ್ಯಂತ ಶಿಸ್ತಿನಿಂದ ಹೊಸ ನಾಟಕವೊಂದರ ಮೂಲಕ ಕಂಪನಿಯ ಮರುಸ್ಥಾಪನೆಗೆ ಶಿವಣ್ಣ ಸಿದ್ಧಗೊಂಡರು.

ಆದರೆ ಶಿವಣ್ಣ ಅಂದುಕೊಂಡಂತಾಗಲಿಲ್ಲ. ಅದೇ ವೇಳೆಗೆ ಮಂಗಳೂರಿನ ಶ್ರೀ ಸರ್ವಮಂಗಳ ನಾಟಕ ಸಂಘ 'ಟಿಪ್ಪೂಸುಲ್ತಾನ್' ನಾಟಕವನ್ನು ದಾವಣಗೆರೆಯ ಧನಲಕ್ಷ್ಮಿ ರಂಗಮಂದಿರದಲ್ಲಿ ಆರಂಭಿಸಿತು. ಚಿತ್ರನಟ ಇಂದುಶೇಖರ್, ಬಾಲಪ್ಪಕಲಾದಗಿ, ಸಣ್ಣಾಚಾರಿ, ಲಲಿತಮೋಹಿನಿ ಇವರೊಂದಿಗೆ ವಿನೋದ ವಿದ್ಯಾನಿಧಿಯೆಂದೇ ಖ್ಯಾತರಾದ ರಂಗನಟ ಶಾಂತಕುಮಾರರ ಮೀರ್ ಸಾಧಿಕ್‌ನ ಪಾತ್ರ, ಶಾಂತಕುಮಾರರ ಈ ಪಾತ್ರದ ಮುಂದೆ ಇವರ ನಾಟಕದ ಪ್ರಯೋಗಗಳು ಸಪ್ಪೆಯಾಗಿ ಮೀರ್‌ಸಾಧಿಕನ ಪಾತ್ರ ದಾವಣಗೆರೆಯ ಜನರ ಮನಸೂರೆಗೊಂಡಿತು. ಅಷ್ಟೇ ಯಾಕೆ ಸ್ವತಃ ಕಂಚಿಕೇರಿ ಶಿವಣ್ಣನನ್ನು ಅಕ್ಷರಶಃ ಮನಸೂರೆಗೊಂಡಿತು. ಇನ್ನೇನು ಅದೇ ತಾನೇ ಪುನಶ್ಚೇತನದ ಕನಸಿನಲ್ಲಿದ್ದ ಸಂಘ ಮಮ್ಮಲ ಮಲಗುವಂತಾಗಿಬಿಟ್ಟಿತು.

ಈ ಸುದ್ದಿ ತಿಳಿದ ದಾವಣಗೆರೆಯವರೇ ಆದ ಸಿನಿಮಾ ನಿರ್ಮಾಪಕ ಚಂದೂಲಾಲ್ ಜೈನ್ ಶಿವಣ್ಣನ ನೆರವಿಗೆ ಬರುತ್ತಾರೆ. ಬೆಂಗಳೂರಿನ ಆರ್. ನಾಗರತ್ನಮ್ಮನವರ ಸ್ತ್ರೀ ನಾಟಕ ಮಂಡಳಿಯನ್ನು ಕರೆಸಿ ಇವರ ಕಂಪನಿಯಲ್ಲಿ ಕೃಷ್ಣಗಾರುಡಿ ನಾಟಕ ಪ್ರದರ್ಶಿಸಿ ಬಂದಿರುವ ಅಲ್ಪಸ್ವಲ್ಪ ಹಣ ಗಳಿಕೆಯಿಂದ ಬೇರೆ ಬೇರೆ ಊರುಗಳಿಂದ ಆಗಮಿಸಿದ ಕಲಾವಿದರನ್ನು ಮರಳಿ ಅವರವರ ಊರುಗಳಿಗೆ ಕಳಿಸಿಕೊಡುವಂತಾಯಿತು. ಆದರೆ ಶಿವಣ್ಣ ಕುಟುಂಬ ಸಲಹುವುದರಲ್ಲೇ ಪೇಚಾಡುವಂತಾಯ್ತು ರಂಗಕುಟುಂಬದ ಮಾತು ಬೇರೆ. ದಾವಣಗೆರೆಯಲ್ಲಿ ಸಾಲಗಾರರ ಕಾಟ ಜಾಸ್ತಿಆಯ್ತು. ಕಡತಿ, ಹಲವಾಗಲು ಎನ್ನುತ್ತಾ ದುಗ್ಗತ್ತಿಗೆ ಬಂದು ವಾಸ್ತವ್ಯ ಮಾಡುತ್ತಾರೆ. ಇವರ ತಾಯಿ ಗೌರಮ್ಮ ಹೊಲದ ಕೆಲಸಗಳಿಗೆ ಕೂಲಿ ಮಾಡುತ್ತಾ ದಿನಕ್ಕೆ ನಾಲ್ಕು ಸೇರುಗಳಂತೆ ಜೋಳ ತಂದು ಅದರಲ್ಲಿ ಎರಡು ಸೇರು ಬೆಲ್ಲ-ಚಹಪುಡಿ ದಿನಸಿಗೆ, ಇನ್ನೆರಡು ಸೇರು ಹೊಟ್ಟೆಯ ರೊಟ್ಟಿಗಳಿಗೆ ಹಿಟ್ಟು ಮಾಡಿಸುವಂತಾಯ್ತು. ಬಾಯಲ್ಲಿ ಬಂಗಾರದ ಚಮಚವಿಟ್ಟುಕೊಂಡು ಹುಟ್ಟಿದ ಶಿವಣ್ಣನಿಗೆ ಇದೆಲ್ಲ ಜೀರ್ಣಿಸಿಕೊಳ್ಳುವುದು ಘೋರವೆನಿಸಿತು.

ದುಗ್ಗತ್ತಿಯಿಂದ ಕಾಲ್ನಡಿಗೆಯಲ್ಲೇ ದಾವಣಗೆರೆಗೆ ಬಂದು ಭಾರತ್ ಬಸ್‌ನಲ್ಲಿ ಪುನಃ ಏಜೆಂಟ್ ಕೆಲಸಕ್ಕೆ ಶಿವಣ್ಣ ಸೇರಿಕೊಂಡರು. ತಿಂಗಳೊಪ್ಪತ್ತಿನಲ್ಲಿ ಲೈಸೆನ್ಸ್ ಇಲ್ಲದೇ ಬಸ್ ಓಡಾಟ ನಿಲ್ಲಿಸಿತು. ಶ್ರೀ ರಾಯಚೂರು ಎಂಬ ಪೇಂಟರ್ ಆಗ ದಾವಣಗೆರೆ ಯಲ್ಲಿದ್ದರು. ಇವರು ಏಣಗಿ ಬಾಳಪ್ಪ ಕಂಪನಿಯಲ್ಲಿ ಮ್ಯಾನೇಜರ್ ಆಗಿದ್ದವರು ಶಿವಣ್ಣನವರ ತಾತನ ಬಗ್ಗೆ ಶ್ರೀ ರಾಯಚೂರ್ ಅವರಿಗೆ ಅಪಾರ ಗೌರವ ಅಭಿಮಾನವಿತ್ತು. ಹೀಗಾಗಿ ಬಾಳಪ್ಪನವರಿಗೆ ಮನವಿಯಂತಹ ಒಂದು ಪತ್ರ ಬರಕೊಟ್ಟು ಶಿವಣ್ಣನಿಗೆ ಬಸ್‌ಚಾರ್ಜ್ ಕೊಟ್ಟು ಸಹಾಯಕ್ಕಾಗಿ ಬಾಳಪ್ಪನವರಲ್ಲಿಗೆ ಕಳಿಸಿಕೊಡುತ್ತಾರೆ. ಅಲ್ಲಿ ಬಾಳಪ್ಪ ಇವರಿಗೆ ಕೆಲವು ನಾಟಕದ ಚೋಪಡಿ (ಸ್ಕ್ರಿಪ್ಟ್)ಗಳನ್ನು ಓದಲು ಕೊಡುತ್ತಾರೆ. ದಿನಾಲೂ ಶಿವಣ್ಣ ಏಣಗಿ ಬಾಳಪ್ಪನವರ ಕಂಪನಿಯಲ್ಲಿ ಪ್ರಯೋಗವಾಗುವ ನಾಟಕ ತಪ್ಪದೇ ನೋಡಬೇಕು. ಧಾರವಾಡದ ಕ್ಯಾಂಪ್ ಅದು. ತಿಂಗಳೊಪ್ಪತ್ತು ಕಳೆಯಿತು. ದಾವಣಗೆರೆಯ ತಮ್ಮ ಕುಟುಂಬದ ಗತಿಯೇನು ? ಶಿವಣ್ಣನಿಗೆ ವಾರಕ್ಕೆ ಐದು ರೂಪಾಯಿ ಮಾತ್ರ. ಖರ್ಚಿಗೆ ಕೊಡ್ತಿದ್ರು. ಕಂಪನಿಯ ಎಲ್ಲ ಆಯಾಮಗಳ ಪರಿಚಯವುಳ್ಳ ಶಿವಣ್ಣನಿಗೆ ಅಭಿನಯಿಸದೇ ಬೋರ್ಡಿಂಗ್‌ನಲ್ಲಿ ಊಟ ಮಾಡಿಕೊಂಡು ಸುಮ್ಮನೆ ಅಡ್ಡಾಡಿಕೊಂಡಿರುವುದು ಮುಜುಗರವಾಯ್ತು. ಆದರೆ ಬಾಳಪ್ಪನವರಿಗೆ ಶಿವಣ್ಣನವರ ತಾತ ಕಂಚಿಕೇರಿ ಕೊಟ್ರಬಸಪ್ಪನವರ ರಂಗಸಾಧನೆಗಳ ಬಗ್ಗೆ ಎಲ್ಲಿಲ್ಲದ ಗೌರವ, ಅಭಿಮಾನ. ಆಗ ರಾಮಚಂದ್ರರಾವ್ ಶಿರ್ಸಿ ಪೇಂಟರ್ ಏಣಗಿಯವರ ಕಂಪನಿಯಲ್ಲಿದ್ದರು. ಶಿವಣ್ಣನಿಗೆ ಅಂಗಡಿಗಳ ಹೆಸರಿನ ಬೋರ್ಡ್ ಬರೆಯಲು ಬರುತ್ತದೆಂಬುದನ್ನು ತಿಳಕೊಂಡು ಆ

ಕೆಲಸಕ್ಕೆ ಕಳಿಸಿ ಒಂದಷ್ಟು ಖರ್ಚಿಗೆ ಹಣ ಮಾಡಿಕೊಳ್ಳಲು ಸಹಾಯ ಮಾಡುತ್ತಾರೆ. ತಮ್ಮ ಕಂಪನಿಯಲ್ಲಿ ಬೋರ್ಡ್ ಬರೆದ ಶಿವಣ್ಣನಿಗೆ ಈ ಕೆಲಸ ಕಷ್ಟವೆನಿಸುವುದಿಲ್ಲ.

ಆಗ ಏಣಗಿಬಾಳಪ್ಪನವರ ಕಂಪನಿಯಲ್ಲಿದ್ದ ಲಿಂಗರಾಜ ಮನ್ಸೂರ, ಸುಭದ್ರಮ್ಮ ಮನ್ಸೂರ, ಹೀರಾಬಾಯಿ, ಸುತಗಟ್ಟಿ ಗುರುಸಿದ್ದಯ್ಯಸ್ವಾಮಿ, ಲಕ್ಷ್ಮೀದೇವಿ ಬಳ್ಳಾರಿ, ಶಿರೂರಗಂಗಯ್ಯ, ವಿರೂಪಾಕ್ಷಪ್ಪ ಈ ಎಲ್ಲ ಹಿರಿಯ ಕಲಾವಿದರು ಶಿವಣ್ಣನನ್ನು ಪ್ರೀತಿಯಿಂದ ಕಂಡರು. ಅಲ್ಲಿದ್ದ ಇನ್ನೊರ್ವ ಹಿರಿಯ ಕಲಾವಿದ ಲಕ್ಷ್ಮೇಶ್ವರದ ಶಿವಯ್ಯಸ್ವಾಮಿ ವಿಜಾಪುರ ಜಿಲ್ಲೆ ಸಿಂದಗಿ ಪಟ್ಟಣದಲ್ಲಿ ಬೆಳವಣಿಕೆ ಸಂಗಪ್ಪನವರ ನೆರವಿನೊಂದಿಗೆ ಪುನಃ ಕಂಪನಿ ಆರಂಭಿಸಲು ಪ್ರೋತ್ಸಾಹಿಸುತ್ತಾರೆ. ಅಲ್ಲಿ ಗಂಡನ ಮಾನ, ತಾಯಿಕರಳು ನಾಟಕಗಳು ಪ್ರದರ್ಶನ ಕಂಡು ಹೆಸರಾಗುತ್ತವೆ. ಶಿವಣ್ಣನವರ ಪಾತ್ರವು ಕೂಡಾ ಯಂಕಂಚಿ ಜಾತ್ರೆ, ಯಳಮೇಲಿ, ಭೀಮಾತೀರದ ದೇವಣಗಾಂವ, ಗೊಬ್ಬೂರುಗಳಲ್ಲಿ ಕ್ಯಾಂಪ್ ಮಾಡಿದರೂ ತೀರದ ಆರ್ಥಿಕ ದುಃಸ್ಥಿತಿ. ಕಂಪನಿಯಲ್ಲಿದ್ದ ರುದ್ರಯ್ಯಸ್ವಾಮಿ ತನ್ನ ಕೊರಳಲ್ಲಿದ್ದ ಬೆಳ್ಳಿ ಕರಡಗಿಯನ್ನು ಮಾರಿ ಶಿವಣ್ಣನಿಗೆ ಹಣಕೊಟ್ಟು ದಾವಣಗೆರೆಗೆ ಕಳಿಸುತ್ತಾರೆ.

ದಾವಣಗೆರೆಯ ಕಸ್ತೂರಬಾ ಬಡಾವಣೆಯಲ್ಲಿ ಹತ್ತು ರೂಪಾಯಿ ಬಾಡಿಗೆ ಮನೆಯಲ್ಲಿದ್ದ ಶಿವಣ್ಣನ ತಂದೆ ತಾಯಿ ಇನ್ನು ಮುಂದೆ ನಾಟಕದ ಸಹವಾಸವೇ ಬೇಡ. ಬಸ್ ಏಜೆಂಟ್ ಆಗಿಯೇ ಜೀವನ ಸಾಗಿಸು ಎಂದು ಕಟ್ಟಾಜ್ಞೆ ಹೊರಡಿಸುತ್ತಾರೆ.

# ಬಿಟ್ಟೇನೆಂದರೂ ಬಿಡದ ಬಣ್ಣದ ಮಾಯೆ.....

ಜಯಲಕ್ಷ್ಮಿ ನಾಟಕ ಕಂಪನಿ ನಡೆಸುವುದನ್ನು ಶಿವಣ್ಣ ಬಿಟ್ಟರೂ ಕಂಪನಿ ನಾಟಕಗಳು ಶಿವಣ್ಣನನ್ನು ಬಿಡಲಿಲ್ಲ. 1963ರ ದಿನಮಾನಗಳು. ದಾವಣಗೆರೆಗೆ ಸಿಂಧನೂರಿನ ಮೃಡದೇವ ಗವಾಯಿಗಳ ಶ್ರೀ ಅಮರೇಶ್ವರ ನಾಟಕ ಸಂಘ ಆಗಮಿಸಿ ಧನಲಕ್ಷ್ಮಿ ರಂಗಮಂದಿರದಲ್ಲಿ ಮುಕ್ಕಾಂ ಮಾಡಿತು. ಶಿವಣ್ಣನವರ ಕಂಪನಿಯಲ್ಲಿದ್ದ ಖಾಜಾಮಿಯಾಮಾಸ್ತರ, ಕಲಾದಗಿ ಭೀಮಪ್ಪ, ಮೆಳ್ಳಗೇರಿ ಪಂಚಾಕ್ಷರಸ್ವಾಮಿ, ಸವಣೂರು ಜುಬೇದಾಬೇಗಂ, ಆ ಕಾಲದ ಖ್ಯಾತ ರಂಗನಟ ಎಲಿವಾಳಸಿದ್ದಯ್ಯ ಮತ್ತು ಅವರ ಪತ್ನಿ ಚಂದ್ರಮ್ಮ, ಮಗಳು ಕಮಲ, ಶಿವಣ್ಣನ ವಾರಗೆಯ ಬಿ.ಕೆ. ಶಂಕರ್(ನಂತರದ ದಿನಗಳಲ್ಲಿ ಸಿನಿಮಾರಂಗದಲ್ಲಿ ಖ್ಯಾತರಾದ ನಟ)ಈ ಕಂಪನಿಯಲ್ಲಿ ಇರುತ್ತಾರೆ. ಅವರ ನಾಟಕಗಳನ್ನು ನೋಡುತ್ತಲೇ ಪಾತ್ರ ಮಾಡಲು ಮಾನಸಿಕ ಸಿದ್ಧತೆ ಮಾಡಿಕೊಂಡು ತಿಂಗಳಿಗೆ ನೂರು ರೂಪಾಯಿ ಸಂಬಳದ ಮೇರೆಗೆ ಗವಾಯಿಗಳ ಈ ಕಂಪನಿ ಸೇರಿಕೊಳ್ಳುತ್ತಾರೆ. ಎಚ್.ಎನ್. ಹೂಗಾರರ ಕುಲಪುತ್ರ ನಾಟಕದಲ್ಲಿ ನಾಯಕ ನಟನ ಪಾತ್ರ, ಧುತ್ತರಗಿಯವರ ಹರಗಿರಿಜೆಯಲ್ಲಿ ಅಗ್ನಿಕೇತು, ಮಲಮಗಳು ನಾಟಕದ ಶಾಮ ಹೀಗೆ ಹೀರೋ ಆಗಿ ಶಿವಣ್ಣ ಜನಪ್ರಿಯತೆ ಗಳಿಸುತ್ತಾರೆ. ಬಿ.ಪಿ. ಸಣ್ಣಪ್ಪ ಇವರ ಸಂಘದಲ್ಲಿ ಮ್ಯಾನೇಜರ್ ಆಗಿರ್‍ತಾರೆ. ತಾನೊಬ್ಬ ಪರಿಪೂರ್ಣ ರಂಗನಟನಾಗಿ ಶಿವಣ್ಣ ಆತ್ಮ ವಿಶ್ವಾಸ ಗಳಿಸುತ್ತಾರೆ.

ಪ್ರಶಾಂತ ಚಿತ್ತಕಳೆಯ ಯುವ ರಂಗನಟಿಗೆ ಆ ನಾಟಕ ಕಂಪನಿಯಲ್ಲಿ ಹೀರೋಯಿನ್ ಪಾತ್ರ, ಆಕೆ ಹೆಸರು ಕಮಲ. ಕಮಲ ಎಲಿವಾಳ ಸಿದ್ದಯ್ಯ-ಚಂದ್ರಮ್ಮನವರ ಸುಪುತ್ರಿ, ಮೊದಲೇ ಹೆಸರಾಂತ ಕಲಾವಿದರ ಮಗಳು. ಕಾಲಕ್ರಮೇಣ ಕಮಲ ಶಿವಣ್ಣನವರಲ್ಲಿ ಪರಸ್ಪರ ಪ್ರೀತಿ ಅಂಕುರಿಸುತ್ತದೆ. ಅಷ್ಟೊತ್ತಿಗಾಗಲೇ ವರ್ಷವೊಪ್ಪತ್ತು ಕಳೆದು ಕಂಪನಿಗೆ ಮಂಗಳೂರಿನ ಕ್ಯಾಂಪ್. ಕಮಲ ಶಿವರಾಜ್ (ಶಿವಣ್ಣನ ಹೆಸರು) ಪ್ರೀತಿಯ ಗುಟ್ಟು-ಗುಸುಗುಸು ಬಯಲಾಗಿ ಕಮಲಳ ತಾಯಿ ಚಂದ್ರಮ್ಮನವರ ಕಿವಿಗೂ ತಾಗಿ ಎಲಿವಾಳ ಸಿದ್ದಯ್ಯನವರ ಸಮ್ಮತಿಯೂ ದೊರೆತು

ದಿನಾಂಕ 24-7-1964 ರಂದು ಮಂಗಳೂರಿನ ಕದ್ರಿ ಮಂಜುನಾಥ ಸ್ವಾಮಿ ದೇವಸ್ಥಾನದಲ್ಲಿ ಸಂಘದ ಒಡೆಯರಾದ ಮೃಢದೇವ ಗವಾಯಿ, ಅವರ ಪತ್ನಿ ಈಶ್ವರಮ್ಮ ಹಿರಿಯ ಕಲಾವಿದರಾದ ಖಾಜಾಮಿಯಾಮಾಸ್ತರ, ಮ್ಯಾನೇಜರ್ ಬಿ.ಪಿ. ಸಣ್ಣಪ್ಪ ಮಂಗಳೂರಿನ ಶ್ರೀ ದುರ್ಗಾ ಪರಮೇಶ್ವರಿ ಯಕ್ಷಗಾನ ಮಂಡಳಿಯ ಎಲ್ಲಾ ಕಲಾವಿದರ ಸಮಕ್ಷಮ ಮದುವೆ ಸರಳ-ಸುಂದರವಾಗಿ ಜರುಗಿ ಕಮಲ ಶಿವಣ್ಣ ದಂಪತಿಗಳಾದರು. ಆದರೆ ಶಿವಣ್ಣನ ಬಂಧು ಬಳಗ ಯಾರೂ ಇರುವುದಿಲ್ಲ.

ಮಂಗಳೂರಿಂದ ಬೆಂಗಳೂರಿಗೆ ಇವರ ಕ್ಯಾಂಪ್ ಶಿಫ್ಟ್ ಆಯ್ತು. ಸುಬ್ಬಯ್ಯನಾಯ್ಡು ಅವರ ರಾಜರಾಜೇಶ್ವರಿ ರಂಗಮಂದಿರ (ಈಗಿನ ಕೆಂಪೇಗೌಡ ಚಿತ್ರಮಂದಿರದ ಬಳಿ)ದಲ್ಲಿ ಮುಕ್ಕಾಂ. ಅದೇ ಸಮಯದಲ್ಲಿ ಮಾಸ್ಟರ್ ಹಿರಣ್ಣಯ್ಯನವರ ಮಿತ್ರ ಮಂಡಳಿ ಮೆಜೆಸ್ಟಿಕ್‌ನ ಕೆರೆಯಂಗಳದಲ್ಲಿ (ಈಗಿನ ಸಿಟಿಬಸ್ ನಿಲ್ದಾಣ) ಮುನಿರಂಗಪ್ಪನವರ ಮ್ಯಾನೇಜ್‌ಮೆಂಟಿನೊಂದಿಗೆ ಕ್ಯಾಂಪ್ ಮಾಡಿ ಅವರ ಕಂಪನಿಯ ನಾಟಕಗಳನ್ನು ಆಡಿ ಮುಗಿಸಿ ಶ್ರೀ ಕವಲಿ ಚೆನ್ನಬಸಪ್ಪನವರ ಕಲಾಪ್ರಕಾಶ ನಾಟಕ ಸಂಘಕ್ಕೆ ಅವಕಾಶ ಮಾಡಿಕೊಟ್ಟಿತ್ತು. ಈ ಕಂಪನಿಯು 'ಕೊಂಡುತಂದ ಗಂಡ' ನಾಟಕ ಪ್ರದರ್ಶಿಸುತ್ತಿದ್ದರೇ ಶಿವಣ್ಣನವರಿದ್ದ ಅಮರೇಶ್ವರ ನಾಟಕ ಸಂಘ 'ಮಲಮಗಳು' ನಾಟಕ ಪ್ರದರ್ಶಿಸ ತೊಡಗಿತು.

ಆಗಿನ ಬೆಂಗಳೂರಿನ ರಂಗಭೂಮಿ ವಾತಾವರಣ ಹಿತಕರವಾಗಿರಲಿಲ್ಲ. ಉತ್ತರ ಕರ್ನಾಟಕದ ಕಂಪನಿ ನಾಟಕಗಳನ್ನು ವಿಲಕ್ಷಣವಾಗಿ ತೆಗಳುವ ಪತ್ರಿಕೆಗಳೇ ಆಗ ಹೆಚ್ಚಾಗಿದ್ದವು. ಇಂತಹ ವಿಷಮ ವಾತಾವರಣದ ನಡುವೆಯೂ ಅ.ನ. ಕೃಷ್ಣರಾಯ, ಬೀಚಿ, ನಾಡಿಗೇರ ಕೃಷ್ಣರಾಯರಂತಹ ಮೇದಾವಿಗಳು ಉತ್ತರ ಕರ್ನಾಟಕದ ಇವರ ನಾಟಕಗಳನ್ನು ನೋಡಿ ಬೆನ್ನು ಚಪ್ಪರಿಸುತ್ತಿದ್ದುದನ್ನು ಕಂಚಿಕೇರಿ ಶಿವಣ್ಣ ಕೃತಜ್ಞತೆಯಿಂದ ನೆನೆಯುತ್ತಾರೆ. ಅಲ್ಲದೇ ಬೀಚಿ, ಅ.ನ.ಕೃ. ನಾಡಿಗೇರರು ಶಿವಣ್ಣನವರ ಅನೇಕ ಪಾತ್ರಗಳನ್ನು ಮೆಚ್ಚಿಕೊಂಡುದನ್ನು ಪ್ರೀತಿಯಿಂದ ನೆನೆಯುತ್ತಾರೆ. ಕೆಲವು ತಿಂಗಳನಂತರ ಕ್ಯಾಂಪ್ ನಂಜನಗೂಡಿಗೆ ಸ್ಥಳಾಂತರಗೊಂಡಿತು.

ದೇವದಾಸಿ ನಾಟಕದ "ತಿರುಪತಿಯಲ್ಲಿ ತಲೆಬೋಳಿಸಿಕೊಂಡು ಶಿವಗಂಗೆಯಲ್ಲಿ ಸ್ನಾನ ಮಾಡಿ ಮೇಲುಕೋಟೆಯಲ್ಲಿ ನಾಮ ಹಾಕಿಸಿಕೊಂಡು ನಂಜನಗೂಡಲ್ಲಿ ಮೂರು ಹಿಡಿ ಮಣ್ಣು ಮುಕ್ಕಿದಂತಾಯ್ತು" ಎಂಬ ಡೈಲಾಗ್‌ನಂತೆ ಶಿವಣ್ಣನವರಿದ್ದ ಅಮರೇಶ್ವರ ನಾಟಕ ಕಂಪನಿ ಸ್ಥಿತಿ ಮಂಗಳೂರಿನ ಶ್ರೀನಿವಾಸ ಬಾಳಿಗರಲ್ಲಿ ಸಾಲಮಾಡಿ ತಲೆ ಬೋಳಿಸಿಕೊಂಡು ಸಮುದ್ರದಲ್ಲಿ ಸ್ನಾನಮಾಡಿ, ಬೆಂಗಳೂರಲ್ಲಿ ನಾಮ ಬಳಿಸಿಕೊಂಡು ನಂಜನಗೂಡಲ್ಲಿ ಮಣ್ಣು ಮುಕ್ಕಿಸಿಕೊಂಡಂತಾಯ್ತು. ಆಗ ನಂಜನಗೂಡಲ್ಲಿ ನೆಲೆಸಿದ್ದ, ಮುಸುರಿಕೃಷ್ಣಮೂರ್ತಿ, ಎಚ್.ಟಿ. ಅರಸು, ಸುಶೀಲಮ್ಮ, ಇಂದಿರಮ್ಮ ಈ ಹಿರಿಯ ಕಲಾವಿದರಿಂದಲೂ ಇದೇ ಅನಿಸಿಕೆ.

ಅಂದು ಮಂಗಳೂರಿನಲ್ಲಿ ಮೃಥದೇವ ಗವಾಯಿಗಳಿಗೆ ಕಂಪನಿ ನಡೆಸಲು ಸಾಲ ನೀಡಿದ್ದ ಶ್ರೀನಿವಾಸ ಬಾಳಿಗ ಕೊನೆಗೊಂದು ದಿನ ನಂಜನಗೂಡಿಗೆ ಆಗಮಿಸಿ ಇವರ ಕಂಪನಿಯ ಎಲ್ಲ ಪರಿಕರ ರಂಗ ಸರಂಜಾಮು – ಸಾಮಾನುಗಳನ್ನು ಮೂರು ಲಾರಿಗಳಲ್ಲಿ ಹೇರಿಸಿಕೊಂಡು ಹೋಗುತ್ತಾರೆ. ಮೂವತ್ತೈದು–ನಲವತ್ತು ಮಂದಿ ಕಲಾವಿದರು ಊಟಕ್ಕೆ ಗತಿ ಇಲ್ಲದೇ ದಿನ ದೂಡುತ್ತಾರೆ. ಆಗ ಮೈಸೂರಲ್ಲಿ ಮಾಸ್ಟರ್ ಹಿರಣ್ಣಯ್ಯನವರ ಕ್ಯಾಂಪ್. ನಂಜನಗೂಡಿನಿಂದ ಶಿವಣ್ಣ ಮತ್ತು ಬಿ.ಕೆ. ಶಂಕರ್ ರೈಲಿನಲ್ಲಿ ಟಿಕೆಟ್ ರಹಿತ ಪ್ರಯಾಣ ಮಾಡಿ ಮೈಸೂರು ತಲುಪಿ ಮಾಸ್ಟರ್ ಹಿರಣ್ಣಯ್ಯನವರಲ್ಲಿ ತಮಗಾದ ನೋವಿನ ಕಥೆ ನಿವೇದಿಸಿಕೊಳ್ತಾರೆ. ಶಿವಣ್ಣನವರ ಕೈಗೆ ಒಂದಷ್ಟು ಹಣ ನೀಡಿದ ಮಾಸ್ಟರ್ ಹಿರಣ್ಣಯ್ಯ ಮೊದಲು ಕಲಾವಿದರಿಗೆ ಊಟದ ವ್ಯವಸ್ಥೆ ಮಾಡಿಸುತ್ತಾರೆ. ಮೈಸೂರಲ್ಲಿ ಸಂಜೆ 6 ಗಂಟೆಗೆ ನಾಟಕ ಶುರು ಮಾಡಿ ರಾತ್ರಿ 9ಗಂಟೆಗೆ ಮುಗಿಸಿ ಅದೇ ಲಂಚಾವತಾರ ನಾಟಕವನ್ನು ಹಿರಣ್ಣಯ್ಯ, ರಾತ್ರಿ 10.30ಕ್ಕೆ ನಂಜನಗೂಡಿನಲ್ಲಿ ಅಮರೇಶ್ವರ ನಾಟಕ ಸಂಘದ ಕಲಾವಿದರಿಗಾಗಿ ಮೂರು ದಿವಸ ಕಾಲ ಪ್ರದರ್ಶನ ನೀಡಿ ಅದರಿಂದ ಸಂಗ್ರಹವಾದ ಹಣದಿಂದ ಎಲ್ಲ ಕಲಾವಿದರು ಅವರವರ ಊರಿಗೆ ಹೋಗುವ ವ್ಯವಸ್ಥೆಯಾಗುತ್ತದೆ. ಮಾಸ್ಟರ್ ಹಿರಣ್ಣಯ್ಯನವರು ಮಾಡಿದ ಈ ಸಹಾಯವನ್ನು ಶಿವಣ್ಣ ಕೃತಜ್ಞತೆಯಿಂದ ನೆನೆಯುತ್ತಾರೆ. ಹಿರಣ್ಣಯ್ಯ ಮಿತ್ರಮಂಡಳಿಯಲ್ಲಿ ಆಗ ಲಿಂಗರಾಜ್ ಮನ್ಸೂರ್, ಸುಭದ್ರಮ್ಮ ಮನ್ಸೂರ್, ಮೀಸೆ ಮುನಿಯಪ್ಪ ಪಾತ್ರಧಾರಿಗಳು.

ಪತ್ನಿ ಕಮಲ ಮತ್ತು ಅತ್ತೆ ಚಂದ್ರಮ್ಮರೊಂದಿಗೆ ಶಿವಣ್ಣ ದಾವಣಗೆರೆಗೆ ಬರುತ್ತಾರೆ. ಅಪ್ಪ ಅಮ್ಮಗೆ ಖುಷಿ ಪಡಿಸುತ್ತಾರೆ. ಆಗ ತಿಪ್ಪೇಸ್ವಾಮಿರೆಡ್ಡಿ, ಕರೂರು ಲೋಕೇಶ್, ಮೈಸೂರು ದಿನಕರ ಇವರುಗಳಿಗೆ ಶಿವಣ್ಣ ಕಮಲರ ಆಗಮನ ಖುಷಿ ಕೊಡುತ್ತದೆ. ಅತ್ತೆ ಚಂದ್ರಮ್ಮಗೆ ಇಲ್ಲಿರಲು ಮನಸಾಗದೇ ಕುಂದಗೋಳಕ್ಕೆ ಹೋಗುತ್ತಾರೆ. ಶಿವಣ್ಣನ ತಮ್ಮ ಮಂಜುನಾಥ ಕೂಡಾ ರಂಗಭೂಮಿ ಕಲಾವಿದ. ಅಣ್ಣಪ್ಪ ಮತ್ತು ಸೋಮನಾಥ ಕಿರಿಯ ಸೋದರರು.

ಮತ್ತೆ ಕಂಪನಿ ಪುನರ್ ಆರಂಭಿಸುವ ಉಮೇದು. ಹದಡಿಯಲ್ಲಿ ಶಂಕರಾಚಾರ್ ನಾಟಕದ ಸೀನ್ಸ್‌ಗಳನ್ನು ಮಾಡಿದ್ದು ಗೊತ್ತಿತ್ತು. ಹದಡಿಯಿಂದಲೇ ರಂಗಮಿತ್ರ ಬಿ.ಕೆ. ಶಂಕರ ಜತೆಗೆ ಕ್ಯಾಂಪ್ ಆರಂಭಿಸುತ್ತಾರೆ. ಶಂಕರಾಚಾರ್ಯರ ಸಹಭಾಗಿತ್ವದಲ್ಲಿ ಶಿವಣ್ಣರ ಕುಟುಂಬದ ಸದಸ್ಯರು ಸೇರಿ ಇವರ ಕಂಪನಿಯ ಹಳೆಯ ನಾಟಕ ಗಾಳಿಪಟದ ಮಲ್ಲಮ್ಮ ಅರ್ಥಾತ್ ಹೇಮರೆಡ್ಡಿ ಮಲ್ಲಮ್ಮ ಆರಂಭಿಸುತ್ತಾರೆ. ಒಂದುವಾರದ ನಂತರ ಶಿಕಾರಿಪುರ, ಈಸೂರು, ರಟ್ಟಿಹಳ್ಳಿಗಳಲ್ಲಿ ಮುಕ್ಕಾಂ ಮಾಡುವ ಮೂಲಕ ಕೈಯಲ್ಲಿ ಒಂದಷ್ಟು ಹಣ ನೋಡುವಂತಾಯ್ತು.

ರಟ್ಟೀಹಳ್ಳಿಯಲ್ಲಿ ಆಸ್ವಾಲಿ ಬಸಪ್ಪ ಎಂಬುವವರಿಗೆ ನಾಟಕದ ಗುತ್ತಿಗೆ ವಹಿಸುತ್ತಾರೆ. ಬಸಪ್ಪ ಇವರಿಗೆ ತೊಂದರೆ ಕೊಡುತ್ತಾನೆ. ಲೈಸೆನ್ಸ್ ತನ್ನ ಹೆಸರಲ್ಲಿರುವುದರಿಂದ ಧಾರವಾಡ ಜಿಲ್ಲಾಧಿಕಾರಿ ಕಚೇರಿಯಿಂದ ಶಿವಣ್ಣನಿಗೆ ಹೆಚ್ಚು ನೆರವು ದೊರೆಯುತ್ತದೆ. ಅಲ್ಲಿಂದ ಕಾಕೋಳು ಗ್ರಾಮಕ್ಕೆ ಕ್ಯಾಂಪ್ ಸ್ಥಳಾಂತರ. ಇವರ ಪತ್ನಿ ಕಮಲಮ್ಮ ತುಂಬುಗರ್ಭಿಣಿ ಆದರೂ ಪಾತ್ರ ಮಾಡುತ್ತಾರೆ. ದಿನಾಂಕ 13–6–1965ರಂದು ಕಮಲಮ್ಮ ಗಂಡುಮಗುವಿಗೆ ಜನ್ಮ ನೀಡುತ್ತಾರೆ ಆ ಮಗುವಿಗೆ ನಟರಾಜ ಎಂದು ಹೆಸರಿಡುತ್ತಾರೆ. ನಟರಾಜ ಇಂದು ವೃತ್ತಿರಂಗಭೂಮಿಯಲ್ಲಿ ದೊಡ್ಡ ಹೆಸರು ಮಾಡಿದ್ದಾರೆ. ಎಂದಿನಂತೆ ಶಿವಣ್ಣನವರಿಗೆ ಆರ್ಥಿಕ ಮುಗ್ಗಟ್ಟು ಮುಂದುವರೆಯುತ್ತದೆ.

ಹಾವೇರಿಯ ನಾಟಕಕಾರ ಬಸವಲಿಂಗಶಾಸ್ತ್ರಿಗಳ ನೆರವಿನಿಂದ ರಾಣೇಬೆನ್ನೂರು ಮುಕ್ಕಾಮಿನಲ್ಲಿದ್ದ ಬಿ. ಓಬಳೇಶ್ ಅವರ ಶ್ರೀ ಓಂಕಾರೇಶ್ವರ ನಾಟಕ ಕಂಪನಿ ಸೇರಿ ಶಿವಣ್ಣ ಮತ್ತು ಓಬಳೇಶ್ ಜೋಡಿ ಕನ್ನಡ ವೃತ್ತಿರಂಗಭೂಮಿ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನೇ ನಿರ್ಮಿಸುತ್ತಾರೆ. ಒಂದೂವರೆ ತಿಂಗಳ ಮಗುವಿನೊಂದಿಗೆ ಓಬಳೇಶ್ವರ ಕಂಪನಿಗೆ ಗಂಡ–ಹೆಂಡತಿ ಕಲಾವಿದರಾಗಿ ಸೇರಿಕೊಳ್ಳುತ್ತಾರೆ. ಓಬಳೇಶ್ವರರ ಹೆಂಡತಿ ಯಶೋಧಮ್ಮ ಆ ಕಾಲದಲ್ಲಿ ಸಾಕಷ್ಟು ಹೆಸರಿದ್ದವರು. ಬಸವಲಿಂಗಶಾಸ್ತ್ರಿ ಮತ್ತು ಅವರ ಪತ್ನಿ, ಶ್ರೀ ರಾಯಚೂರು, ಭೀಮಣ್ಣ ಮರೋಳ್ ಹಾವೇರಿಯ ವಸಂತಕುಮಾರಿ, ತುಳಸಿದಾಸ (ಮರೋಳರಾಮಣ್ಣನ ಮಗ) ಹೀಗೆ ಒಂದು ಒಳ್ಳೆಯ ತಂಡ ಅದಾಗಿತ್ತು.

# ಕಲಬುರ್ಗಿ ಕ್ಯಾಂಪಿನ ಖುಷಿಯ ಖಬರ್

ಅಷ್ಟೊತ್ತಿಗಾಗಲೇ ಓಬಳೇಶ ಅವರಿಗೆ ರಾಜ್ಯಮಟ್ಟದಲ್ಲಿ ಹಾಸ್ಯಚಕ್ರವರ್ತಿ ಎಂಬ ಕೀರ್ತಿವಾಹಿ ಸಾಕಷ್ಟಿತ್ತು. ಬಿ. ಓಬಳೇಶ್ವರ ಒಡೆತನದ ಶ್ರೀ ಓಂಕಾರೇಶ್ವರ ನಾಟಕ ಸಂಘ 1967ರ ಸುಮಾರಿಗೆ ಬಾಗಲಕೋಟೆಯಿಂದ ಕಲಬುರ್ಗಿಯ ಶರಣಬಸವೇಶ್ವರ ದೇವಸ್ಥಾನ ಪೌಳಿಯಲ್ಲಿ ಕ್ಯಾಂಪ್ ಮಾಡುತ್ತದೆ. ಆಗ ಶರಣಬಸವೇಶ್ವರ ಅಪ್ಪನ ಜಾತ್ರೆಯ ಸಂಭ್ರಮ. 'ಬೆಳ್ಳಿಬಂಗಾರ' ನಾಟಕದೊಂದಿಗೆ ಜಾತ್ರೆಯ ಕ್ಯಾಂಪ್. ಜಾತ್ರೆ ಮುಗಿದಾದ ಮೇಲೆ ಕಲಬುರ್ಗಿಯ ನಗರಸಭೆ ಗಾರ್ಡನ್ ಜಾಗದಲ್ಲಿ ಇವರ ಕಂಪನಿ ಅದೇ ಬೆಳ್ಳಿಬಂಗಾರ ನಾಟಕವನ್ನು ವಿಜಾಪುರದ ಶ್ರೀ ಕರಂದೀಕರ್ ಅವರು ನಿರ್ಮಿಸಿದ ನೂತನ ರಂಗ ಸಜ್ಜಿಕೆಯಲ್ಲಿ ಆರಂಭಿಸಿತು. ಓಬಳೇಶ್ವರ್ ಕರ್ನಾಟಕಾದ್ಯಂತ ಹಾಸ್ಯ ನಟ ಚಕ್ರವರ್ತಿ ಎಂದೇ ಪ್ರಸಿದ್ಧ ರಾಗಿದ್ದರು. ಶ್ರೀ ಶರಣ ಬಸವೇಶ್ವರ ಸಂಸ್ಥಾನದ ದೊಡ್ಡಪ್ಪ ಅಪ್ಪ ಹಾಗೂ ಪುಟ್ಟಪರ್ತಿ ಸಾಯಿಬಾಬಾ ಅವರ ಸಾನಿಧ್ಯದಲ್ಲಿ ನಾಟಕ ಆರಂಭಿಸುತ್ತಾರೆ. ಸದರಿ ಕಂಪನಿಗೆ ಹಳೆಯ ಸಾಲಗಾರರ ಕಾಟ ತಾಳಿಕೊಳ್ಳಲು ಸಾಧ್ಯವಾಗುವುದಿಲ್ಲ. ಹತ್ತಿರದ ಶಹಬಾದ ಪಟ್ಟಣದಲ್ಲಿ ಆಗ ಶ್ರೀ ಸಿದ್ದರಾಜ ಉಜ್ಜಯಿನಿಮಠ ಇವರ ಶ್ರೀ ಸಮಾಜ ವಿಕಾಸ ನಾಟಕ ಸಂಘದ ಕ್ಯಾಂಪ್ ತುಂಬಾ ನಷ್ಟದಲ್ಲಿ ನಡೆಯುತ್ತಿರುತ್ತದೆ. ಅವರ ಕಂಪನಿಯಲ್ಲಿ ಮೂವತ್ತಕ್ಕೂ ಹೆಚ್ಚು ಮಂದಿ ಕಲಾವಿದರು, ಅದರಲ್ಲಿ ಹದಿನೇಳು ಮಂದಿ ಮಹಿಳಾ ಕಲಾವಿದರು. ಇಡೀ ಕರ್ನಾಟಕದಲ್ಲೇ ಬಹುಪಾಲು ಸ್ತ್ರೀ ಕಲಾವಿದರಿದ್ದ ಕಂಪನಿ ಅದಾಗಿತ್ತು. ಅಲ್ಲಿ ಬಿ.ಪಿ. ಸಣ್ಣಪ್ಪ ಮ್ಯಾನೇಜರ್ ಆಗಿದ್ದರು.

ಅಲ್ಲಿ ಸಣ್ಣಪ್ಪನವರಿಗೆ ಪಾತ್ರ ಮಾಡಲು ಬರುತ್ತಿರಲಿಲ್ಲ. ಇಲ್ಲಿ ಓಬಳೇಶ್‌ಗೆ ವ್ಯವಹಾರ ಜ್ಞಾನಗೊತ್ತಿರಲಿಲ್ಲ. ಈ ಎರಡನ್ನೂ ಅರಿತ ಶಿವಣ್ಣ ಈ ಇಬ್ಬರನ್ನು ಒಂದುಗೂಡಿಸಲು  ಆ ಕಾಲದ ಹೆಸರಾಂತ ನಾಟಕಕಾರ ಮಾರುತೇಶ ಮಾಂತ್ರೆ ಅವರ ಮೊರೆ ಹೋಗುತ್ತಾರೆ. ಕಲಬುರ್ಗಿ ಕ್ಯಾಂಪ್ ವರುಷಗಟ್ಟಲೇ ಜಯಭೇರಿ

ಹೊಡೆಯಲು ಈ ಎಲ್ಲಾ ತಾರಾಮೇಳ ಒಂದಾಗುತ್ತದೆ. ಆಗಲೇ ಈ ಎಲ್ಲ ಹಳೆಯ ನಾಟಕಗಳ ಜತೆಗೆ  ಹೊಸನಾಟಕಗಳ ಹುಡುಕಾಟದಲ್ಲಿ ಓಬಳೇಶ್ ಮತ್ತು ಮಾಂಡ್ರೆ ಅವರ ಕ್ರಿಯಾಶೀಲಶಕ್ತಿ  ಕೆಲಸ ಮಾಡುತ್ತವೆ. ನಿತ್ಯವೂ ಈ ಇಬ್ಬರು ಗಂಭೀರವಾಗಿ ಚಿಂತನೆ ಮಾಡುತ್ತಿದ್ದ ಅಪ್ಪನಿಲ್ಲದ ಮಗನೊಬ್ಬನ ಸುತ್ತ ಜರುಗುವ ಕಥೆಯುಳ್ಳ ನಾಟಕ "ಮುಂಡೇಮಗ"ನಾಗಿ ಸಿದ್ದಗೊಳ್ಳುತ್ತದೆ. ಹಳೆಯ ಸಾಲ ತೀರಿಸಲು ಚಿತ್ತಾಪುರದ ಬಾಪುಗೌಡ ಪಾಟೀಲರು ಕಲಬುರ್ಗಿ ಶಹರದ ದೊಡ್ಡ ವ್ಯಾಪಾರಸ್ಥರು ಆಗ ಓಬಳೇಶ್ ನೆರವಿಗೆ ಬರುತ್ತಾರೆ.

'ಮುಂಡೇಮಗ' ನಾಟಕ ಆರಂಭ. ತಂದೆ ಧರ್ಮರಾಯನ ಪಾತ್ರದಲ್ಲಿ ಶಿವಣ್ಣ, ಮುಂಡೇಮಗನಾಗಿ ಓಬಳೇಶ್, ಮನೆ ಆಳು ದಾಸಪ್ಪನಾಗಿ ಸುರೇಶ್ ಕುಟ್ಟಿ. ಸ್ತ್ರೀಪಾತ್ರಗಳಲ್ಲಿ ಓಬಳೇಶ್ ಪತ್ನಿ ಯಶೋಧಮ್ಮ, ಶಿವಣ್ಣನ ಪತ್ನಿ ಕಮಲಮ್ಮ ಹೀಗೆ ಒಂದು ಪರಿಪೂರ್ಣ ರಂಗತಂಡ ಕಲಬುರ್ಗಿ ಮಾತ್ರವಲ್ಲ, ಕರ್ನಾಟಕದಲ್ಲೇ ಆಗ ಹೆಸರಾಗುತ್ತದೆ. ಓಬಳೇಶ್ ಅವರ ಮುಂಡೇಮಗ ಪಾತ್ರ ರಂಗಭೂಮಿ ಚರಿತ್ರೆಯಲ್ಲಿ ದಾಖಲಾಗುತ್ತದೆ. ಓಬಳೇಶ್ ರಂಗ ವ್ಯಕ್ತಿತ್ವವೇ ಅಂತಹದ್ದು.

ಓಬಳೇಶ್ ಮತ್ತು ಶಿವಣ್ಣನವರ ರಂಗಜೋಡಿ ಕರ್ನಾಟಕ ತುಂಬೆಲ್ಲ ಮನೆ ಮಾತಾಗುತ್ತದೆ. ಕಲಬುರ್ಗಿಯಲ್ಲಿ ಮುಂಡೇಮಗ ಶತಕ ಬಾರಿಸುತ್ತದೆ. 150ನೇ ಪ್ರಯೋಗ ಅದ್ಧೂರಿಯಾಗುತ್ತದೆ. ಅದೇ ಸಂದರ್ಭದಲ್ಲಿ ಓಬಳೇಶ್ 'ಖಾದಿಸೀರೆ' ನಾಟಕಕ್ಕೆ ನಾಂದಿ ಹಾಡುತ್ತಾರೆ. ಕಲಬುರ್ಗಿಯಲ್ಲಿ ಆಗ ಶ್ರೀ ಹಂಗರಕಿ ಎಂಬುವರು ನ್ಯಾಯಾಧೀಶರಾಗಿರುತ್ತಾರೆ. ನ್ಯಾಯಾಲಯದ ಸನ್ನಿವೇಶವನ್ನು ಅರ್ಥಪೂರ್ಣವಾಗಿ ಮಾಡಬೇಕೆಂಬುದು ಓಬಳೇಶ್ ಬಯಕೆ. ಆಗ ಅವರು ಶ್ರೀ ಹಂಗರಕಿಯವರ ಸಲಹೆ ಪಡೆದು ಅದನ್ನು ಪೂರ್ಣಗೊಳಿಸುತ್ತಾರೆ. ಕೋರ್ಟ್ ಸೀನ್ ನೋಡಲೆಂದೇ ಜನ ಮುಗಿ ಬೀಳುತ್ತಿದ್ದರು.

ಖಾದಿಸೀರೆ ನಾಟಕದಲ್ಲಿ ಎಂ.ಎಲ್.ಎ. ಶಾಮಲಾದೇವಿ ಪಾತ್ರದಲ್ಲಿ ಯಶೋಧರಮ್ಮ ದಾಖಲೆ ಮಾಡುತ್ತಾರೆ. ಭರಣ (ಹಾಸ್ಯಪಾತ್ರ)ನಾಗಿ ಓಬಳೇಶ್, ಶರಣಪ್ಪಯ್ಯ ಶಾಸ್ತ್ರಿಯಾಗಿ ಶಿವಣ್ಣ, ಶಾಂತಲೆಯಾಗಿ ಕಮಲಮ್ಮ ಈ ಎಲ್ಲ ಪಾತ್ರಗಳು ಖಾದಿಸೀರೆ ನಾಟಕದ ಮೂಲಕ ಕನ್ನಡ ರಂಗಭೂಮಿ ಚರಿತ್ರೆಗೆ ಹೊಸ ಆಯಾಮ ಕಲ್ಪಿಸುತ್ತವೆ. ನಾಟಕ ನೂರೈವತ್ತು ಪ್ರಯೋಗ ದಾಟಿ ಅತ್ಯಂತ ಸಂಭ್ರಮದಿಂದ ಮುನ್ನುಗ್ಗುತ್ತದೆ. ಮುಂಡೇಮಗ, ಖಾದಿ ಸೀರೆ ನಾಟಕಗಳು ಈ ಕಂಪನಿಗೆ ನೀರಾವರಿ ಆಸ್ತಿಯಾಗುತ್ತವೆ. ಸೃಜನಶೀಲನಟ, ನಾಟಕಕಾರ, ನೃತ್ಯಪಟು ಹೀಗೆ ಓಬಳೇಶ್ ಕನ್ನಡರಂಗಭೂಮಿಯ ದೈತ್ಯಶಕ್ತಿಯೇ ಆಗಿದ್ದರು.

ವರ್ಷವೊಪ್ಪತ್ತಿನಲ್ಲಿ ಕಲಬುರ್ಗಿ ಶಹರ ಮಾತ್ರವಲ್ಲ ಕರ್ನಾಟಕ ಪೂರ್ತಿ ಈ ಕಂಪನಿ ಹೆಸರು ಮಾಡುತ್ತದೆ. ಅರವತ್ತು ಮಂದಿ ಕಲಾವಿದರನ್ನು ಹೊಂದಿದ್ದ ಈ ಕಂಪನಿ ತನ್ನ ರಂಗ ಸಜ್ಜಿಕೆಗಳನ್ನು ಅಷ್ಟೇ ಅಚ್ಚುಕಟ್ಟಾಗಿ ಪುನರ್ ನಿರ್ಮಿಸಿಕೊಳ್ಳುತ್ತದೆ. ಅಂತೆಯೇ ಅವರು ಮಾರುತೇಶ್ ಮಾಂಡ್ರೆ ಕವಿಗಳಿಂದ ಶ್ರೀ ಶರಣ ಬಸವೇಶ್ವರ ಮಹಾತ್ಮೆ ಎಂಬ ಹೊಸ ನಾಟಕ ಬರೆಸುತ್ತಾರೆ. ಅದು ಓಬಳೇಶ್ ಕಂಪನಿಯ ವೈಭವದ ಕಾಲವಾಗುತ್ತದೆ.

ಶರಣಬಸವೇಶ್ವರ ಪಾತ್ರ ಮಾಡುವವರು ಯಾರೆಂಬ ಪ್ರಶ್ನೆ ಮಣಗಟ್ಟಲೇ ಎಲ್ಲರನ್ನೂ ಕಾಡತೊಡಗುತ್ತದೆ. ಸದೃಢಕಾಯರು, ರೂಪಸಂಪನ್ನರು, ಶಾರೀರ ಸಂಪನ್ನರು ಆಗಿದ್ದ ಶ್ರೀ ಸಿದ್ದರಾಜ ಉಜ್ಜಯಿನಿಮಠ ಈ ಎಲ್ಲ ಅರ್ಹತೆ ಉಳ್ಳವರಾಗಿದ್ದರು. ಅವರ ನಾಟಕ ಕಂಪನಿ ಕಲಬುರ್ಗಿಗೆ ಹತ್ತಿರದಲ್ಲಿರುವ ಶಹಬಾದ ಪಟ್ಟಣದಲ್ಲಿ ಕ್ಯಾಂಪ್ ಮಾಡಿ, ನಷ್ಟ ಅನುಭವಿಸುತ್ತಿತ್ತು. ಶ್ರೀ ಉಜ್ಜಯಿನಿಮಠ ಅವರನ್ನು ಶರಣ ಬಸವೇಶ್ವರ ಪಾತ್ರಕ್ಕೆ ಸೂಕ್ತ ಎಂಬುದನ್ನು ಶಿವಣ್ಣ ಮತ್ತು ಓಬಳೇಶ್ ನಿರ್ಧಾರ ಮಾಡಿಕೊಂಡು ಅವರನ್ನು ಕರೆಸುತ್ತಾರೆ. ಹೊಸ ನಾಟಕಕ್ಕೆ ಹೊಸ ಹೊಸ ಸೀನ್ಸು ರಚಿಸಲು ದೂರದ ಚಿತ್ರದುರ್ಗದಿಂದ ಶಿಲ್ಪಾಚಾರ್ ಪೇಂಟರ್ ಅವರನ್ನು ಕರೆಸಿ ವಾರಗಟ್ಟಲೇ ಸಮಯ ಪಡೆದು ಸಿದ್ಧತೆ ಭರದಿಂದ ಸಾಗುತ್ತದೆ. ನಾಟಕಕ್ಕೆ ನಿರ್ದೇಶಕರಾಗಿ ಮಾರುತೇಶ್ ಮಾಂಡ್ರೆ, ಸಂಗೀತ ನಿರ್ದೇಶನಕ್ಕೆಂದು ಹೆಸರಾಂತ ಹಿಂದೂಸ್ತಾನಿ  ಗಾಯಕ ಸಿದ್ದರಾಮ ಜಂಬಲದಿನಿ ಸಿದ್ಧವಾಗುತ್ತಾರೆ. ಪ್ರಚಾರದ ವ್ಯವಸ್ಥೆ ಮ್ಯಾನೇಜರ್ ಬಿ.ಪಿ. ಸಣ್ಣಪ್ಪ ಹಾಗೂ ಕೆಂಚಪ್ಪನವರದು. ಹೀಗೆ ಎಲ್ಲ ರಂಗಶಿಸ್ತುಗಳಿಂದ ಹೊಸನಾಟಕಕ್ಕೆ ನಾಂದಿ ಹಾಡುತ್ತಾರೆ.

ಪಾತ್ರಗಳ ಹಂಚಿಕೆ ಮತ್ತು ಸ್ಕ್ರಿಪ್ಟ್ ಓದಿ ಎಲ್ಲ ಪಾತ್ರಗಳಿಗೂ ಹೇಳಬೇಕು. ಆಗ ಹಾಸ್ಯ ಪಾತ್ರಗಳ ಡೈಲಾಗ್ಸ್ ತುಂಬಾ ಸಪ್ಪೆ ಅನಿಸಿದವು. ತಕ್ಷಣವೇ ಓಬಳೇಶ್ ಒಂದೇ ರಾತ್ರಿ ಕುಂತು ಎರಡು ಹೊಸ ಪಾತ್ರಗಳನ್ನು ಸೃಷ್ಟಿಸುತ್ತಾರೆ. ವಿಭೂತಿ ವೀರಯ್ಯ-ಕಂತಿ ಕಾಡಯ್ಯ ಎಂಬ ಹಾಸ್ಯಪಾತ್ರಗಳೇ ಹೊಸಪಾತ್ರಗಳು. ಹದಿನೈದು ದಿನ ತಾಲೀಮು ಮುಗಿದು ಇನ್ನೇನು ನಾಳೆ ರಂಗ ಪ್ರದರ್ಶನವಿತ್ತು. ಆಗ ಈ ಎರಡು ಹೊಸಪಾತ್ರಗಳು ಹುಟ್ಟಿಕೊಂಡಿದ್ದವು. ಅಷ್ಟೊತ್ತಿಗಾಗಲೇ ಕಲಬುರ್ಗಿ ನಗರ ಹಾಗೂ ಆಜುಬಾಜು ಹಳ್ಳಿಗಳಲ್ಲಿ ಜನ ಶರಣಬಸವೇಶ್ವರ ಮಹಾತ್ಮೆ ನಾಟಕದ ಆರಂಭಕ್ಕಾಗಿ ಚಾತಕ ಪಕ್ಷಿಗಳಂತೆ ಹಾತೊರೆದಿದ್ದರು. ಆ ರೀತಿಯಾಗಿ ಪ್ರಚಾರ ಕಾರ್ಯ ನಡೆದಿತ್ತು. ರಾತ್ರಿ ನಾಟಕ ಆಡಬೇಕು. ಶರಣಬಸಪ್ಪನ ಜಾತ್ರೆಗೆ ಬಂದಂತೆ ಜನ ಎತ್ತಿನಗಾಡಿಗಳನ್ನು ಕಟ್ಟಿಕೊಂಡು ಅಂದು ಮಧ್ಯಾಹ್ನಕ್ಕೇ ಬಂದು ರೊಟ್ಟಿಬುತ್ತಿ ಬಿಚ್ಚಿ ಸೊಗಸಾಗಿ ಎರಡು ಹೊತ್ತು ಊಟ ಮಾಡಿ ರಾತ್ರಿ ನಾಟಕ ನೋಡಲು ಹೆಣ್ಣು-ಗಂಡುಗಳೆನ್ನದೇ ಕುಟುಂಬಕ್ಕೆ ಕುಟುಂಬವೇ  ಬೀಡುಬಿಟ್ಟಿತು. ರಂಗಮಂದಿರ ತುಂಬಿ ತುಳುಕಿ ಅದರ

ಎರಡರಷ್ಟು ಪ್ರೇಕ್ಷಕರು ಹೊರಗಡೆ ಇರುವಂತಾಯಿತು. ಅದು ಕೇವಲ ಒಂದು ದಿನದ ಮಾತಲ್ಲ ತಿಂಗಳಾನುಗಟ್ಟಲೇ ಅಂತಹದ್ದೊಂದು ಸಮೂಹಸನ್ನಿ ವಾತಾವರಣದಂತೆ ದಾಖಲೆ ಮಾಡಿತು. ವಿಭೂತಿ ವೀರಯ್ಯ-ಕಂತಿಕಾಡಯ್ಯ (ಓಬಳೇಶ್ ಮತ್ತು ಶಿವಣ್ಣ) ಪಾತ್ರಗಳಂತು ಮನೆ ಮಾತಾದವು. ಈ ನಾಟಕದ ಪ್ರಭಾವ ವಿಧಾನಸೌಧದ ಮೂರನೇ ಮಹಡಿಗೂ ಮುಟ್ಟಿತು. ಅಷ್ಟಕ್ಕು ಮುಖ್ಯಮಂತ್ರಿ ಕಲಬುರ್ಗಿ ಕಡೆಯವರೇ ಆಗಿದ್ದರು.

ನೂರಾ ಒಂದನೇ ಪ್ರಯೋಗಕ್ಕೆ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಎಸ್. ನಿಜಲಿಂಗಪ್ಪ ಮುಖ್ಯಮಂತ್ರಿ ವೀರೇಂದ್ರ ಪಾಟೀಲ ಮುಖ್ಯ ಅತಿಥಿಗಳಾಗಿ ನಾಟಕಕ್ಕೆ ಆಗಮಿಸಿದರು. ಶ್ರೀಶರಣ ಬಸವೇಶ್ವರ ಸಂಸ್ಥಾನದ ಪೀಠಾಧಿಪತಿ ಶ್ರೀದೊಡ್ಡಪ್ಪ ಅಪ್ಪ ದಿವ್ಯ ಸಾನಿಧ್ಯ ವಹಿಸಿದರು. ಮಧ್ಯಾಹ್ನದಿಂದ ರಾತ್ರಿ ನಾಟಕ ಆರಂಭ ಮಾಡುವವರೆಗೂ ಕಂಪನಿ ಕಡೆಯಿಂದ ಸಾರ್ವಜನಿಕರಿಗೆ ಹೋಳಿಗೆ ಊಟದ ವ್ಯವಸ್ಥೆ ಮಾಡಲಾಯಿತು. ಹತ್ತುಸಾವಿರಕ್ಕೂ ಹೆಚ್ಚು ಮಂದಿ ಈ ರಂಗ ದಾಸೋಹದ ಹೋಳಿಗೆ ಸವಿಯುಂಡರು. ಎಂದಿನಂತೆ ನಾಟಕ ದಾಖಲೆ ಮಾಡಿ ಮುನ್ನಡೆಯಿತು. ಕಲಬುರ್ಗಿಯ ಮಹಾಜನತೆ, ಶರಣ ಬಸವೇಶ್ವರ ಸಂಸ್ಥಾನವು ಓಬಳೇಶ್ವರ ಹಾಗೂ ಶಿವಣ್ಣ ಮತ್ತು ಸಿದ್ಧರಾಜ ಇವರಿಗೆ ಬಂಗಾರದ ಪದಕಗಳನ್ನು ಉಡುಗೊರೆಯಾಗಿ ನೀಡಿ ಅದ್ದೂರಿಯಾಗಿ ಸನ್ಮಾನಿಸಿದರು. ಪ್ರಾಯಶಃ ಇಂತಹ ಜನಪ್ರೀತಿ ಅದುವರೆಗೂ ಆ ಭಾಗದಲ್ಲಿ ಯಾರಿಗೂ ಸಿಕ್ಕಿರಲಿಲ್ಲ. ನೂರು ಇನ್ನೂರು, ಇನ್ನೂರೈವತ್ತು ಪ್ರಯೋಗಗಳು ಮುಂದು ವರೆಯುತ್ತವೆ. ಅದು ಆ ಕಾಲದ ದೊಡ್ಡ ರಂಗೇತಿಹಾಸ.

ಈ ನಾಟಕ ಮಾತ್ರವಲ್ಲ ಓಬಳೇಶ್ವರರೇ ಬರೆದ ಹೋಳಿ ಹುಣ್ಣಿಮೆ ನಾಟಕ ನೂರು ಪ್ರಯೋಗ, ಗಾಂಧಿ ಟೋಪಿ ನೂರು ಪ್ರಯೋಗ, ಕಲಿತಕತ್ತೆ 75 ಪ್ರಯೋಗ, ಜಗಜ್ಯೋತಿ ಬಸವೇಶ್ವರ 75 ಪ್ರಯೋಗ ಕಾಣುತ್ತವೆ. ಹೀಗೆ ಅಲ್ಲಿ ಓಬಳೇಶ್-ಶಿವಣ್ಣ ಜೋಡಿ ದಾಖಲೆಗಳನ್ನೇ ನಿರ್ಮಿಸುತ್ತದೆ. ವರುಷಗಟ್ಟಲೆ ಕಲಬುರ್ಗಿಕ್ಯಾಂಪ್ ಶ್ರೀ ಓಂಕಾರೇಶ್ವರ ನಾಟಕ ಸಂಘದಡಿಯಲ್ಲಿ ಅತ್ಯಂತ ಶಿಸ್ತುಬದ್ಧವಾಗಿ ಪ್ರದರ್ಶಿಸಿದ ಹತ್ತಾರು ನಾಟಕಗಳನ್ನು ಇಂದಿಗೂ ಕಲಬುರ್ಗಿ ಜನ ನೆನಪಿಟ್ಟುಕೊಂಡಿದ್ದಾರೆ.

ನಾಕೈದು ವರ್ಷ ಓಬಳೇಶ್ ಜತೆಗಿದ್ದ ಶಿವಣ್ಣ ತನ್ನ ತಂದೆಯವರ ಅಪೇಕ್ಷೆ ಮೇರೆಗೆ 1969 ಫೆಬ್ರವರಿಯಲ್ಲಿ ಪುನಃ ತಮ್ಮ ಕಂಪನಿ ಆರಂಭಿಸುತ್ತಾರೆ. ಮದ್ದೂರು ಮರಿಯಪ್ಪ ಧೀರೇಂದ್ರ ಗೋಪಾಲ (ಆಗಿನ್ನು ಸಿನಿಮಾ ನಟ ಆಗಿರಲಿಲ್ಲ) ಮತ್ತು ಅವರ ಪತ್ನಿ ಸುನಂದ, ಲೋಲಾಕ್ಷಮ್ಮ, ನಂಜಮ್ಮ ಇನ್ನು ಅನೇಕರು ಕಂಪನಿಯ ಪುನಃಶ್ಚೇತನಕ್ಕೆ ನೆರವಾಗಿ ಪಾತ್ರ ಮಾಡುತ್ತಾರೆ. ಬೆಳ್ಳಿ ಬಂಗಾರ ನಾಟಕ ಮೈಲಾರ ಜಾತ್ರೆಯಲ್ಲಿ ಹಿಟ್ ಆಗುತ್ತದೆ. ಜಾತ್ರೆ ಮುಗಿಸಿಕೊಂಡು, ಹೊಳಲು, ಹೊನ್ನತ್ತಿ, ಕರ್ಜಗಿ

ಹರಪನಹಳ್ಳಿ ಕ್ಯಾಂಪ್ ಪರವಾಗಿಲ್ಲ ಎನ್ನುವಂತಾಯಿತು.

ಚನ್ನಗಿರಿಯಲ್ಲಿ ಆಗ ಚಿಂದೋಡಿ ವೀರಪ್ಪನವರ ಕಂಪನಿ ತೊಂದರೆಯಲ್ಲಿತ್ತು. ಶಿವಣ್ಣನವರ ತಂಡ ಅವರ ನೆರವಿಗೆ ಧಾವಿಸಿ 70-30 ಶೇಕಡವಾರು ಆದಾಯದಂತೆ ಪರಸ್ಪರ ಒಪ್ಪಂದ ಮಾಡಿಕೊಂಡು ಶಿವಣ್ಣನವರ ಕಂಪನಿ ಹೆಸರಿಂದಲೇ ಅಲ್ಲಿ ರಂಗ ಪ್ರಯೋಗಗಳು ಜರುಗುತ್ತವೆ. ಅದರಿಂದ ಚಿಂದೋಡಿಯವರಿಗೆ ಚೇತರಿಕೆ ಆಗುತ್ತದೆ.

ತಿಪ್ಪೇಸ್ವಾಮಿರೆಡ್ಡಿ, ಮಂಜುನಾಥ (ಶಿವಣ್ಣನ ತಮ್ಮ) ಕಮಲ, ಚಿತ್ರನಟಿ ಶ್ರೀಲಲಿತ, ಹಸನ್‌ಸಾಬ್, ಬಸವಲಿಂಗಶಾಸ್ತ್ರಿ ಮತ್ತು ಶಿವಣ್ಣ ಹೀಗೆ ಇವರ ರಂಗಬಳಗ, ಚಿಂದೋಡಿಯವರ ಸಾಂಗತ್ಯದಿಂದ ಹೊರಬರುವಂತಾದುದು, ಶಿವಣ್ಣನವರ ಗಮನಕ್ಕೆ ಬಾರದಂತೆ ಚಿತ್ರನಟ ಉದಯಕುಮಾರರ ಕಾರ್ಯಕ್ರಮ ಫಿಕ್ಸ್ ಮಾಡಿಕೊಂಡು ಬಂದು ಬೆನಿಫಿಟ್ ಶೋ ಮಾಡಿದ್ದು ಎಂಬ ಕಾರಣಕ್ಕೆ.

ಅಷ್ಟೊತ್ತಿಗಾಗಲೇ ಕಮಲಮ್ಮ ಎರಡನೇ ಮಗ ಕೊಟ್ರೇಶ್‌ಗೆ ಜನ್ಮ (27.1.1968) ನೀಡುತ್ತಾರೆ. ಇಬ್ಬರು ಮಕ್ಕಳನ್ನು ಕಟ್ಟಿಕೊಂಡು ಶಿವಮೊಗ್ಗ-ಭದ್ರಾವತಿ, ಕುಮುಟಾ, ಗೋಕಾಕ್, ಶಿರ್ಸಿ, ತಿಪಟೂರು, ತುಮಕೂರು, ಹಾಸನ, ರಾಯಚೂರು ಇನ್ನೂ ಬೇರೆ ಬೇರೆ ಊರುಗಳಲ್ಲಿ ಬೇರೆ ಬೇರೆ ನಾಟಕ ಕಂಪನಿಗಳಲ್ಲಿ ಗಂಡ-ಹೆಂಡತಿ ಇಬ್ಬರು ಅಗ್‌ದಿ ಸೋಜಾಗಿ ಪಾತ್ರ ಮಾಡುತ್ತಾರೆ.

ಕಮಲಮ್ಮ ಅನಕ್ಷರಸ್ಥೆಯಾದರೂ ಅನನ್ಯವಾದ ನೆನಪಿನಶಕ್ತಿಯುಳ್ಳವರಾಗಿದ್ದರು. ಚೋಪಡಿ ಅಕ್ಷರಗಳನ್ನೇ ನೋಡಿ ನೋಡಿ ಕಮಲಮ್ಮ ಓದಲು ಮಾತ್ರ ಕಲಿಯುತ್ತಾರೆ. ಕಮಲಮ್ಮ ಕುಡುಮಿಯಂತೆ ಪುಸ್ತಕದ ಹುಳುವಾಗುತ್ತಾರೆ. ತ್ರಿವೇಣಿ, ಆರ್ಯಾಂಭ ಪಟ್ಟಾಭಿ, ತ.ರಾ.ಸು. ಕಾದಂಬರಿಗಳೆಂದರೆ ಪಂಚಪ್ರಾಣವಾಗುತ್ತವೆ. ಪ್ರಜಾಮತ, ಕಸ್ತೂರಿ ನಿಯತಕಾಲಿಕೆಗಳ ನಿರಂತರ ಓದುಗಳು. ಸರಳ ಸಜ್ಜನಿಕೆಯ ಈ ಕಲಾವಿದೆ ಯಾವತ್ತು ಬೇಸರಗೊಂಡವರಲ್ಲ. ಸೊಗಸಾಗಿ ಅಭಿನಯಿಸಿ ಕಂಪನಿಯ ಎಲ್ಲರಿಗೂ ಅಡುಗೆ ಮಾಡಿ ಬಡಿಸುತ್ತಿದ್ದರು. ಅದರಲ್ಲು ಕಟ್ಟಿಗೆಯ ಒಲೆ ಊದಿ ಕಣ್ಣಲ್ಲಿ ನೀರು ಬರಿಸಿಕೊಂಡು ಅಡುಗೆ ಮಾಡುತ್ತಿದ್ದರು. ತನ್ನ ಪಾತ್ರ ಮಾತ್ರವಲ್ಲ ಒಂದು ನಾಟಕದ ಸಮಗ್ರ ಪಾತ್ರಗಳ ಮಾತು ಅಭಿನಯಗಳನ್ನು ಲೀಲಾಜಾಲವಾಗಿ ಆಡಿ-ಮಾಡಿ ತೋರಿಸುವಷ್ಟು ಪ್ರತಿಭಾಶಾಲಿ ಆಗಿದ್ದರು.

ಶಿವಣ್ಣನ ಜ್ಞಾಪಕಶಕ್ತಿಯೂ ಅಷ್ಟೇ ಅಗಾಧವಾಗಿತ್ತು. ಅಷ್ಟೇ ಯಾಕೆ ಎಂಬ ತ್ತೊಂದರ ಈ ಇಳಿ ವಯಸ್ಸಿನಲ್ಲೂ ತನ್ನ ಆರೇಳು ವಯಸ್ಸಿನಲ್ಲಿ ನಡೆದ ಸಣ್ಣಪುಟ್ಟ ಸಂಗತಿಗಳನ್ನು ಅರ್ಧಗಂಟೆ ಕೆಳಗೆ ಮಾತ್ರ ನಡೆದಷ್ಟು ಹಚ್ಚ ಹಸಿರಾಗಿ ಸರಳ-ಸುಂದರವಾಗಿ ಮನವರಿಕೆ ಆಗುವಂತೆ ವರ್ಣಿಸಬಲ್ಲರು.

# ಓಬಳೇಶ್ ಕಂಪನಿಯಲ್ಲಿ ರಂಗವಿಪ್ಲವ

ನಿಸ್ಸಂದೇಹವಾಗಿ ವೃತ್ತಿರಂಗಭೂಮಿ ಕಲಾವಿದರಷ್ಟು ಪ್ರತಿಭಾಶಾಲಿಗಳು ಬೇರಾವ ರಂಗ ಪ್ರಕಾರಗಳಲ್ಲಿ ಇರಲಾರರು. ಅಷ್ಟೇ ಪ್ರಮಾಣದ ತಿಕ್ಕಲುತನ, ಅನಿಶ್ಚತತೆ, ಅಶಿಸ್ತು, ಅಲೆಮಾರಿತನವೂ ಇವರಿಗಿರುತ್ತವೆ. ಆಗ ಬಿ. ಓಬಳೇಶ್ ಕಂಪನಿಯಲ್ಲಿ ಉತ್ತಮ ಕಾಲವಿದರೇ ಇರುತ್ತಾರೆ. ಹಾಸನದಲ್ಲಿ ಕ್ಯಾಂಪ್, ಓಬಳೇಶ್ ಶ್ರೇಷ್ಠ ನಟ ಮಾತ್ರವಲ್ಲ ಶ್ರೇಷ್ಠ ನಾಟಕಕಾರ ಕೂಡಾ ಆಗಿದ್ದರು. ಸ್ತ್ರೀಪಾತ್ರ ಸೇರಿದಂತೆ ನಾಯಕ ನಟನಾಗಿ, ಖಳನಟನಾಗಿ, ವಿನೋದವಾರಿಧಿಯಾಗಿ ಇಡೀ ಕರ್ನಾಟಕದ ಮನಸ್ಸು ಗೆದ್ದವರು ಓಬಳೇಶ್. ಅವರ ತಾರಾಪತ್ನಿ ಆರ್.ಎಚ್. ಯಶೋಧರಮ್ಮ ಮರಾಠಿ ಚಿತ್ರರಂಗದ ಲಲಿತಾ ಪವಾರ ಎತ್ತರದಷ್ಟೇ ಪ್ರತಿಭಾ ಪೂರ್ಣೆ. ಇವರ ಓಂಕಾರೇಶ್ವರ ನಾಟ್ಯಸಂಘದಲ್ಲಿ ಹೆಸರಾಂತ ಕಲಾವಿದರ ತಂಡವೇ ಇರುತ್ತದೆ. ಹಾಸನದಲ್ಲಿ ಕ್ಯಾಂಪ್ ಮಾಡಿದಾಗ ಓಬಳೇಶ್ ಕಂಪನಿ ತಕ್ಕಮಟ್ಟಿಗೆ ಒಳ್ಳೆಯ ಆದಾಯವನ್ನೇ ಕಂಡಿತು. ಹಾಗಿರುವಾಗ ಕೆಲವು ಒಳಹುನ್ನಾರದ ಸಾಂಸ್ಕೃತಿಕ ರಾಜಕಾರಣ (ಆಕಾಲದಲ್ಲೂ)ವು ಕಂಪನಿಯನ್ನು ಇಬ್ಭಾಗ ಮಾಡಿತು. ಈ ಹಿಂದೆ ಓಬಳೇಶ್ ಕಂಪನಿಯಲ್ಲಿದ್ದ ಶಿವಣ್ಣಗೆ ಈ ಎಲ್ಲ ವಿದ್ಯಮಾನಗಳು ಬೇಗನೆ ತಲುಪುತ್ತಿದ್ದವು. ಶಿವಣ್ಣ ಮತ್ತು ಓಬಳೇಶ್ ದೈಹಿಕವಾಗಿ ದೂರವಿದ್ದರೂ ಮಾನಸಿಕವಾಗಿ ಪರಸ್ಪರ ಹತ್ತಿರವೇ ಇದ್ದರು. ಶಿವಣ್ಣನಿಗೆ ಓಬಳೇಶ್ ಹಿರಿಯ ಸನ್ಮಿತ್ರನೇ ಆಗಿದ್ದರು. ಸುಸಂಸ್ಕೃತ ರಂಗಭೂಮಿಯ ಸೋಪಜ್ಞತೆ ಮತ್ತು ಉನ್ನತ ಪರಂಪರೆ ಕುರಿತು ಇಬ್ಬರಿಗೂ ಸಾಕಷ್ಟು ತಿಳಿವಳಿಕೆಗಳಿದ್ದವು. ಶಿವಣ್ಣನೇ ಹೇಳುವಂತೆ ಓಬಳೇಶ್ ತನಗೆ ರಂಗಭೂಮಿಯ ಮಹಾನ್ ಗುರು.

ಅಷ್ಟು ಮಾತ್ರವಲ್ಲ ಆಯಾ ಕಾಲದ ಸಾಂಸ್ಕೃತಿಕ ತಲ್ಲಣಗಳನ್ನು ಅರಿತು ರಂಗಪ್ರಯೋಗಗಳನ್ನು ಹರಿತಗೊಳಿಸುವಲ್ಲಿ ಓಬಳೇಶ್ ಅಪಡೇಟ್ ಆಗಿರುತ್ತಿದ್ದರು. ದಿನಾಲೂ ವರ್ತಮಾನ ಪತ್ರಿಕೆಗಳನ್ನು ಓದಿ ರಾಜಕೀಯ ಏರು-ಪೇರುಗಳನ್ನು ಅಂದಂದಿನ ನಾಟಕಗಳಲ್ಲೇ ಟೀಕಿಸಿ ಬಿಡುವಷ್ಟು ಶ್ಯಾಣೇತನವಿತ್ತು. ಇದೆಲ್ಲವನ್ನು ಶಿವಣ್ಣ ಅರ್ಥಮಾಡಿಕೊಂಡಿದ್ದು, ಅಕ್ಷರಶಃ ಓಬಳೇಶ್ ಶಿವಣ್ಣನವರಿಗೆ ರಂಗ ಗುರು. ಆದರೆ ಇದೇ ಓಬಳೇಶ್ 1946ರಷ್ಟು ಹಿಂದೆ ಇವರ ತಾತನ ಮಾಲೀಕತ್ವದಲ್ಲಿ ಸಂತೆಬೆನ್ನೂರಲ್ಲಿ ಪ್ರದರ್ಶನಗೊಳ್ಳುತ್ತಿರುವ ಕ್ಯಾಂಪ್‌ನಲ್ಲಿ ಮೊದಲು ರಂಗಪ್ರವೇಶ ಪಡೆದದ್ದು.

ಈ ಎಲ್ಲ ಚಾರಿತ್ರಿಕ ಸಂಗತಿಗಳಿಂದಾಗಿ ಇಬ್ಬರಲ್ಲೂ ಸಾಕಷ್ಟು ಹೊಂದಾಣಿಕೆಯ ತಿಳಿವಳಿಕೆಗಳಿದ್ದವು. ಶಿವಣ್ಣ ಹೆಂಡತಿಯೊಂದಿಗೆ ಮರಳಿ ದಾವಣಗೆರೆಗೆ ಬರುತ್ತಾರೆ. ಕಮಲಮ್ಮ 4.1.1971ರಂದು ಹೆಣ್ಣು ಮಗುವಿಗೆ ಜನ್ಮ ನೀಡುತ್ತಾರೆ. ಎಂದಿನಂತೆ ಶಿವಣ್ಣಗೆ ಆರ್ಥಿಕ ಸಂಕಟ.

ಹಾವೇರಿಯಲ್ಲಿ ಸುಳ್ಳದ ಮಲ್ಲಪ್ಪ ದೇಸಾಯಿಯರ ಶ್ರೀಶೈಲ ಮಲ್ಲಿಕಾರ್ಜುನ ನಾಟಕ ಸಂಘದ ಮೊಕ್ಕಾಂ. ಆ ಕಾಲದ ಸುಪ್ರಸಿದ್ಧ ನಟರಾದ ಎಲಿವಾಳ ಸಿದ್ದಯ್ಯಸ್ವಾಮಿ (ಶಿವಣ್ಣನ ಮಾವ) ದುರ್ಗಾದಾಸ್, ವಂಸತಸಾ ನಾಕೋಡ, ಅಬ್ದುಲ್‌ಸಾಬ ಅಣ್ಣಿಗೇರಿ, ಫ್ಲೋರೀನಾದಾಸ್, ಪುಷ್ಪಮಾಲಾ ಅಣ್ಣಿಗೇರಿ, ಪಾಪಮ್ಮ, ಎಲ್.ವಿ. ಶಾರದಾ, ಸತ್ಯಭಾಮಾ, (ಚಿತ್ರನಟಿಯರು), ಸವದತ್ತಿ ಸೋಮಯ್ಯಸ್ವಾಮಿ ಹೀಗೆ ಭಾರೀ ಹೆಸರಾಂತ ತಾರಾಗಣದಿಂದ ರಕ್ತರಾತ್ರಿ, ಕಿತ್ತೂರು ಚೆನ್ನಮ್ಮ ನಾಟಕಗಳು ನಡೆಯುತ್ತಿದ್ದರೂ ಕಲೆಕ್ಷನ್ ಆಗಿರಲಿಲ್ಲ.

ದೇಸಾಯಿಯರು ದಾವಣಗೆರೆಗೆ ಬಂದು ಶಿವಣ್ಣನನ್ನು ಕರೆದುಕೊಂಡು ಹೋಗಿ 'ನನ್ನ ಹೆಂಡತಿ ಜಾಣೆ' ಎಂಬ ಸಾಮಾಜಿಕ ನಾಟಕ ಕೂಡಿಸುತ್ತಾರೆ. ತಿಂಗಳಿಗೆ ಒಂದು ಸಾವಿರ ರೂಪಾಯಿ ಸಂಬಳ ಮಾತಾಡುತ್ತಾರೆ. ಆ ನಾಟಕದಲ್ಲಿ ಹಳ್ಳಿ ಹುಂಬ ಶಿವಣ್ಣನ ಪಾತ್ರ ಶಿವಣ್ಣನದು. ಅದುವರೆಗೆ ನಷ್ಟದಲ್ಲಿದ್ದ ಕಂಪನಿ ನಿತ್ಯವೂ ರಂಗಮಂದಿರ ತುಂಬಿತುಳುಕಿ ನೂರು ಪ್ರಯೋಗ ಕಂಡು ಹಣ ಗಳಿಕೆಯಾಗುತ್ತದೆ. ಆ ಮೂಲಕ ಶಿವಣ್ಣಗೆ ಒಳ್ಳೆಯ ಹೆಸರು ಬರುತ್ತದೆ. ಆದರೆ ಓಬಳೇಶ್ ಕಂಪನಿ ಮತ್ತೆ ಕೊಡವಿಕೊಂಡು ಏಳಲೇಇಲ್ಲ.

# ವರದಾ ನದಿಯ ಆಚೆ ಈಚೆ

ಹೀಗೆ ಶಿವಣ್ಣನವರು ಉತ್ತರ ಕರ್ನಾಟಕದ ಎಲ್ಲ ಪ್ರಸಿದ್ಧ ನಾಟಕ ಕಂಪನಿಗಳಲ್ಲಿ ನಾಯಕನಟನ ಪಾತ್ರಗಳ ಮೂಲಕ ಸುಪ್ರಸಿದ್ಧರಾಗುತ್ತಾರೆ. ಗುಳೇದಗುಡ್ಡದ ಕರನಂದಿ ರಾಚಪ್ಪನವರೊಂದಿಗೆ ಒಸ್ಸೆ ಮೇಲೆ ಹೊಸರಿತ್ತಿಯಲ್ಲಿ ಕೆಲಕಾಲ ಕ್ಯಾಂಪ್. ಅಷ್ಟೊತ್ತಿಗಾಗಲೇ ಮಹಾಜನ್ ಮಾಸ್ತರರ ಮೃತ್ಯುಂಜಯ ನಾಟಕ ಸಂಘದ ಮೇನ್ ಬೋರ್ಡ್ ಬಸ್‌ಸ್ಟಾಂಡಿನಲ್ಲೇ ಕಟ್ಟಿರುತ್ತಾರೆ. ವರದಾ ನದಿಯ ಆಚೆ ಈಚೆ ಹೊಸರಿತ್ತಿ ಮತ್ತು ಕೊರಡೂರು ಗ್ರಾಮಗಳು. ಗ್ರಾಮದ ಪ್ರಮುಖರಾದ ಬಾಬಣ್ಣನವರು, ನಾಟಕ ಪ್ರದರ್ಶಿಸದೇ ಹೋಗೋದುಬೇಡ ಬಂದವರು ಬಂದಿದ್ದೀರಿ ಎರಡೂ ಕಂಪನಿಗಳು ಇದ್ದರಿರ್ಲಿ ಅಂತಾರೆ ಆಗಲೇ ಮೃತ್ಯುಂಜಯ ಸಂಘದವರಿಗೇ ಕಲೆಕ್ಷನ್ ಇರ್ಲಿಲ್ಲ. ಇದರಿಂದ ಇವರ ಕಂಪನಿ ಕಲಾವಿದರು ಕ್ಯಾಂಪ್ ಬೇಡವೆನ್ನುತ್ತಾರೆ. ಆದರೆ ಮಾಡಿಕೊಂಡ ಸಾಲ ಮತ್ತು ಕರನಂದಿಯವರೊಂದಿಗಿನ ಅರ್ಧ ಹಿಸ್ಸೆ ಒಪ್ಪಂದ ? ಎದುರು ಕಂಪನಿಯಲ್ಲಿದ್ದ ಹಾವೇರಿ ಬಾಬಣ್ಣ ಮತ್ತು ಗುಡ್ಡಪ್ಪಮರೋಳ ಈ ರಂಗಕರ್ಮಿಗಳನ್ನು ಶಿವಣ್ಣ ಭೇಟಿ ಮಾಡಿದ ಪರಿಣಾಮ ಒಂದೇ ರಂಗಮಂದಿರದಲ್ಲಿ ನಾಟಕ ಪ್ರದರ್ಶನಕ್ಕೆ ವ್ಯವಸ್ಥೆ. ಗುರುಸಿದ್ದಯ್ಯಸ್ವಾಮಿ ಸುತಗಟ್ಟಿಯಂತಹವರಿಗೆ ಗೇಟ್‌ನಲ್ಲಿ ನಿಲ್ಲಿಸುವುದನ್ನು ಹೇಗೆಂಬುದೇ ಶಿವಣ್ಣನಿಗೆ ಆಗ ಮರೆಯಲಾಗದ ನೋವಿನಸಂಗತಿ. ಅದು ಬೆಳ್ಳಿಬಂಗಾರ ನಾಟಕ. ಎರಡು ಕಂಪನಿಯ ಆಯ್ದ ಪ್ರತಿಭಾವಂತ ಕಲಾವಿದರಿಂದಾಗಿ 1200ರೂಪಾಯಿ ಆ ಕಾಲದ ಭರ್ಜರಿ ಕಲೆಕ್ಷನ್. ಧಾರವಾಡದಿಂದ ಬಂದಿದ್ದ ಮಹಾಜನ್ ಮಾಸ್ತರ ಶಿವಣ್ಣನ ಅಭಿನಯಕ್ಕೆ ಮಾರುಹೋಗುತ್ತಾರೆ. ಸಾಲ ತೀರುವ ಎಲ್ಲ ಲಕ್ಷಣಗಳು ಸಂಗ್ರಹವಾಗುವ ಕಲೆಕ್ಷನ್ ಮೂಲಕ ಸಾಬೀತಾಗುತ್ತದೆ.

ಅಷ್ಟಕ್ಕು ಆ ಎಲ್ಲ ನಾಟಕಗಳು ತಾನು ಓಬಳೇಶ್ ಕಂಪನಿಯಲ್ಲಿ ಸಾಮು ತೆಗೆದು ಬಂದ ಸಾಧನೆಯ ಪ್ರತಿಫಲ. ಬೆಳ್ಳಿಬಂಗಾರ, ಮುಂಡೇಮಗ, ದೇವದಾಸಿ, ವರನೋಡಿ ಹೆಣ್ಣುಕೊಡು ನಾಟಕಗಳು ಅದ್ಧೂರಿಯಾಗಿ ಪ್ರಯೋಗ ಕಂಡವು. ಎಲಿವಾಳ ಸಿದ್ದಯ್ಯ

ಬಂದು ಪಾರ್ಟಿ ಮಾಡುತ್ತಾರೆ. ಹೀಗೆ ಕೈತುಂಬ ಹಣ ಕಾಣುವಂತಾಗಿ ಮಳೆಗಾಲ ಪ್ರಯುಕ್ತ ಕ್ಯಾಂಪ್ ಮುಗಿಸಿ ಶಿರಹಟ್ಟಿ ಫಕ್ಕೀರೇಶ್ವರ ಜಾತ್ರೆಗೆ ಕ್ಯಾಂಪ್ ಸ್ಥಳಾಂತರ ವಾಗುತ್ತದೆ. ಜಾತ್ರೆ ಅವರಿಗೆ ಕೈಕೊಡುತ್ತದೆ. ಕಲೆಕ್ಷನ್ ಫುಲ್ ಡಲ್.

ಇಲಕಲ್ಲಿಗೆ ಪ್ರಯಾಣ. ಇಲಕಲ್ಲ ಕಲಾವಿದರ, ಕವಿಗಳ, ಪೇಂಟರ್‌ಗಳ ಊರು. ಅಲ್ಲೂ ಕಲೆಕ್ಷನ್ ಕಮ್ಮಿ. ಹೀಗೆ ಕ್ಯಾಂಪು ಬದಲಾದಾಗೆಲ್ಲ ಸಾಲದ ಹೆಚ್ಚಳ. ಅದು ಬೇಲೂರು ಅನ್ನದಾನೇಶ್ವರ ಮಠದ ಕ್ಯಾಂಪ್. ಆಗ ಅಲ್ಲಿ ಬಸವರಾಜ ಮಾಸ್ತರರ ಸಹಾಯ ಸಹಕಾರ. ಸಂಘ ಮುಂದುವರೆಸಲೇಬೇಕೆಂಬುದು ಆ ಮಾಸ್ತರರ ಪ್ರೀತಿ. ಈ ಮಾಸ್ತರರ ಮಿತ್ರ ರಾಘಣ್ಣ ಎಂಬುವವರು "ತನಗೆ ಮಂತ್ರಾಲಯ ಗುರುಗಳ ಅಪ್ಪಣೆಯಾಗಿದೆ. ನೀವು ಕಂಪನಿ ನಿಲ್ಲಿಸಬಾರದೆಂದು" ಸ್ವಪ್ನ ಸಂದೇಶ ಕೊಡುತ್ತಾರೆ. ಅಲ್ಲಿಂದ ಗುಡೂರಿಗೆ ಸರ್ಕಾರಿ ಬಸ್‌ಲ್ಲಿ ಬಸವರಾಜ ಮಾಸ್ತರರೊಂದಿಗೆ ಪ್ರಯಾಣ. ಆ ಬಸ್ಸಿನ ಕಂಡಕ್ಟರ್ ಟಿಕೆಟ್ ಹರಿಯುತ್ತಾನೆ. ಆದರೆ ಶಿವಣ್ಣನ ಬಳಿ ಹಣ ಕೇಳುವುದಿಲ್ಲ. ನೀವು ದೊಡ್ಡ ಕಲಾವಿದರು ನಿಮ್ಮ ಟಿಕೆಟ್ ಹಣ ನಾನೇ ಕೊಡುತ್ತೇನೆಂದು ಅತ್ಯಂತ ವಿನೀತನಾಗಿ ಹೇಳಿದಾಗ ಶಿವಣ್ಣನಿಗೆ ತನ್ನ ಬಗ್ಗೆ ತನಗೇ ಎಲ್ಲಿಲ್ಲದ ಸಮಾಧಾನ. ಗುಡೂರಲ್ಲಿ ಆ ಕಾಲದ ಪ್ರಸಿದ್ಧ ನಾಟಕಕಾರರಾದ ಶ್ರೀ ಟಿ.ಕೆ. ಮಹ್ಮದ್ ಅಲಿಯವರ ಪರಿಚಯವಾಗಿ ಶಿವಣ್ಣನವರನ್ನು ರಂಗಮಂದಿರದಲ್ಲೇ ನಾಟಕದ ಮಧ್ಯ ಹಾರಹಾಕಿ ಸಭಿಕರಿಗೆ ಪರಿಚಯಿಸುತ್ತಾರೆ. ಓರ್ವ ಪ್ರೇಕ್ಷಕ ಎದ್ದು ಬಂದು ರಂಗಪಾರ್ಟಿ ಬಳಿ ಶಿವಣ್ಣನನ್ನು ನೋಡಿ "ನನ್ನ ಹೆಸರು ರಾಮಣ್ಣ ಇಲ್ಲೇ ಬಸ್ ಸ್ಟಾಂಡಿನಲ್ಲಿ ನನ್ನ ಹೋಟೆಲ್ ಇದೆ. ನಾಳೆ ಮುಂಜಾನೆ ನನ್ನ ಹೋಟೆಲ್‌ಗೆ ನಾಸ್ಟಾಕ್ಕೆ ಬರಬೇಕೆಂದು" ಆಮಂತ್ರಿಸುತ್ತಾರೆ.

ಆ ಪ್ರಕಾರ ಶಿವಣ್ಣ ಮುಂಜಾನೆ ರಾಮಣ್ಣನ ಹೋಟೆಲ್‌ಗೆ ಹೋದಾಗ ಅಲ್ಲಿ ಅವರಿಗೆ ಅದ್ದೂರಿ ಆತಿಥ್ಯ. ಶಿವಣ್ಣನಿಗೆ ಕ್ಯಾಂಪ್ ಖಾಯಂ ಆಗುತ್ತದೆ. ಮಠದ ಸ್ವಾಮಿಗಳ ದರ್ಶನ ಮಾಡಿಸಿದ ರಾಮಣ್ಣ ಮುಂಗಡ ಹಣವಿಲ್ಲದೇ ಎರಡು ಬಾಡಿಗೆ ಮನೆ, ಕಂಪನಿ ಹಾಕಲು ಜಾಗ, ಕಿರಾಣಿ ಅಂಗಡಿ ಪರಿಚಯ. ಇದೆಲ್ಲ ಕೇವಲ ತಾಸೊಪ್ಪತ್ತಿನಲ್ಲೇ ಹೊಸ ಅಭಿಮಾನಿ ರಾಮಣ್ಣ ಪವಾಡದಂತೆ ಮಾಡಿಕೊಡುತ್ತಾರೆ. ಅಂದರೆ ಅಷ್ಟೊತ್ತಿಗಾಗಲೇ ಶಿವಣ್ಣನಿಗೆ ಉತ್ತರಕರ್ನಾಟಕ ಭಾಗದಲ್ಲಿ ಸ್ಟಾರ್ ವ್ಯಾಲ್ಯು ಬಂದಿರುತ್ತದೆ. ಅಷ್ಟು ಮಾತ್ರವಲ್ಲ ರಾಮಣ್ಣನವರು ಶಿವಣ್ಣನವರೊಂದಿಗೆ ಬಂದಿದ್ದ ಬಸವರಾಜ ಮಾಸ್ತರ ಬಳಿ ಮಾತಾಡಿ ಸರ್ ಕ್ಯಾಂಪ್‌ಗೆ ಎಷ್ಟು ಹಣ ಮುಂಗಡ ಬೇಕಾಗುತ್ತದೆಂದು ಕೇಳುತ್ತಾರೆ. ಅಂದಾಜು ಮೂರು ಸಾವಿರ ಆಗಬಹುದು ಎಂದಾಗ ಥಟ್ಟಂತ್ ಮೂರು ಸಾವಿರ ಕೊಡುತ್ತಾರೆ. ಇದೆಲ್ಲ ಪವಾಡ ಸದೃಶವಾಗಿ ಶಿವಣ್ಣನಿಗೆ ನಂಬಿಕೆಯೇ ಬಾರದಂತಾಗುತ್ತದೆ. ಗುಡೂರಿಗೆ ಹೋಗುವಾಗ ಒಣ ಮೋರೆಯೊಂದಿಗೆ ಹೋಗಿದ್ದವರಿಗೆ ಮರಳಿ ಗುಳೇದಗುಡ್ಡಕ್ಕೆ ಬಂದು ಕರನಂದಿರಾಚಪ್ಪನವರಿಗೆ ಎಲ್ಲ

ವಿವರ ನೀಡಿ ಅವರಲ್ಲಿದ್ದ ರಂಗ ಸಜ್ಜಿಕೆಗಳನ್ನು ಎರಡು ಲಾರಿಗಳಲ್ಲಿ ಹೇರಿಸಿಕೊಂಡು ಗುಡೂರಿನೆಡೆಗೆ ಪ್ರಯಾಣ. ಬೇಲೂರಿನಿಂದ ಕಲಾವಿದರು ಗುಡೂರಿಗೆ ಬರುತ್ತಾರೆ. ಗುಡೂರಿನಲ್ಲಿ ಜಯಲಕ್ಷ್ಮಿ ನಾಟಕ ಸಂಘದ ಅದ್ದೂರಿ ಆರಂಭ. ಮುಂಡೇಮಗ ನಾಟಕ. ಜಯಭೇರಿ ಪ್ರಯೋಗಗಳು. ನಂತರ ಖಾದಿಸೀರೆ, ಹೆಸರಾಮತ ಹಾಡುನಟಿ ಜುಬೇದಾಬಾನು, ಚಂದ್ರಮ್ಮ ನಟಿಯರ ಆಗಮನ. ಹೀಗೆ ಕ್ಯಾಂಪ್ ಹೆಸರು-ಹಣ ಮಾಡಿತು. ರಾಮಣ್ಣನವರು ಮಾಡಿದ ಸಹಾಯ ಮತ್ತು ಅವರ ಸಾಲತೀರಿಸಿದ ಧನ್ಯತೆ ಇಂದಿಗೂ ಶಿವಣ್ಣನವರಿಗಿದೆ.

ಅದೇ ಕ್ಯಾಂಪಿಗೆ ಚಿತ್ರನಟ ಉದಯಕುಮಾರ್, ಬಿ. ಜಯಾ ಅವರನ್ನು ಮದರಾಸಿನಿಂದ ಕರೆಸಿ 'ದೇವದಾಸಿ' ಮದುವೆ ಮಾರ್ಕೆಟ್ ಆಡಿಸುತ್ತಾರೆ. ಆ ಕಾಲದಲ್ಲಿ ಅವರಿಗೆ ದಿನವೊಂದಕ್ಕೆ ಐದುನೂರು ಸಂಭಾವನೆ. ಗುಡೂರು ಕ್ಯಾಂಪಿನಲ್ಲಿ ಹಳೆಯ ಸಾಲವೆಲ್ಲ ತೀರುತ್ತದೆ. ಆಗ ಇವರ ಕಂಪನಿಯ ಬಂಪರ್ ಕಲೆಕ್ಷನ್ ಕುರಿತು ಬನಶಂಕರಿ ಜಾತ್ರೆಯಲ್ಲಿದ್ದ ಗುಡಗೇರಿ ಬಸವರಾಜ ಕಿವಿಗೆ ಬೀಳುತ್ತದೆ. ಬಸವರಾಜ ಕ್ಯಾಂಪ್ ಗುಡೂರಿಗೆ. ಅಲ್ಲಿಂದ ಹುನಗುಂದಕ್ಕೆ ಶಿವಣ್ಣ ಕ್ಯಾಂಪ್ ಸ್ಥಳಾಂತರ. ಅದಕ್ಕೆ ಮೊದಲು ಗುಡಗೇರಿ ಬಸಣ್ಣನೊಂದಿಗೆ ಸಣ್ಣಪುಟ್ಟ ತಕರಾರುಗಳನ್ನು ಶ್ರೀ ಕರನಂದಿ ಸರಿಪಡಿಸುತ್ತಾರೆ. ಬಸವರಾಜ ತುಸು ಸಿಟ್ಟಿನ ಮನುಷ್ಯ. ಸಿಟ್ಟಿದ್ದವರ ಬಳಿ ಹಿಡಿ ಹಿಟ್ಟಿರುತ್ತದೆಯಂತೆ. ಹೀಗೆ ಗುಡೂರು ಕ್ಯಾಂಪ್ ಖುಷಿಯಿಂದಲೇ ಮುಕ್ತಾಯವಾಗಿ ಹುನಗುಂದಕ್ಕೆ ಪ್ರಯಾಣ. ಅಲ್ಲಿ ಶ್ರೀ ನಾವದಗಿ ವಕೀಲರ ಸಹಕಾರ ಅಲ್ಲಿಂದ ನರಗುಂದಕ್ಕೆ ಕ್ಯಾಂಪ್ ಪ್ರಯಾಣ.

ನರಗುಂದದಲ್ಲಿ ಖಾದಿಸೀರೆ. ಮುರುಗೋಡು ರೇಣುಕಮ್ಮಗೆ ಎಂ.ಎಲ್.ಎ. ಪಾತ್ರ. ಯಂಕಂಚಿ ಜೆಟ್ಟಪ್ಪನವರ ತಮ್ಮ ಶಿವಾಜಿ ಹೀರೋ. ಒಳ್ಳೆಯ ಕಲೆಕ್ಷನ್, ಆ ಸಂದರ್ಭದಲ್ಲಿ ಈಗಿನ ಚಿತ್ರನಟಿ ಎಂದು ಹೆಸರಾಗಿರುವ ಗಿರಿಜಾಲೋಕೇಶ್ (ಆಗಿನ್ನು ಮದುವೆ ಆಗಿರಲಿಲ್ಲ) ಬರೀ ಗಿರಿಜಾ ಆಗಿದ್ದರು. ಅವರನ್ನು ಮತ್ತು ಚಿತ್ರನಟ ದಿನೇಶ್ ಅವರನ್ನು ಅಲ್ಲಿನ ಕ್ಯಾಂಪಿಗೆ ಕರೆಸಿ ದೇವದಾಸಿ ಹಾಗೂ ಮದುವೆ ಮಾರ್ಕೆಟ್ ನಾಟಕಗಳ ಪ್ರಯೋಗ. 25 ಸಾವಿರ ರೂಪಾಯಿಗಳ ಕಲೆಕ್ಷನ್. ಈ ನಾಟಕ ಕಂಟ್ರ್ಯಾಕ್ಟರ್ ಮಾಡಿದವರು ಶಿವಣ್ಣನಿಗೆ ಮೋಸ ಮಾಡುತ್ತಾರೆ. ಶಿವಣ್ಣನಿಂದಾಗಿ ಚಿತ್ರ ಕಲಾವಿದರು ಬಂದಿರುತ್ತಾರೆ. ಸುಮ್ಮನೆ ಕೋರ್ಟು-ಕಚೇರಿ ಅಲೆದಾಟ ಬೇಡವೆಂದು ನವಲಗುಂದಕ್ಕೆ ಕ್ಯಾಂಪ್ ಶಿಫ್ಟ್ ಮಾಡುತ್ತಾರೆ. ಅಷ್ಟೊತ್ತಿಗಾಗಲೇ ಇವರ ಜಯಲಕ್ಷ್ಮಿ ನಾಟಕ ಸಂಘಕ್ಕೆ ಮತ್ತು ಶಿವಣ್ಣನವರಿಗೆ ಆ ಭಾಗದಲ್ಲಿ ಒಳ್ಳೆಯ ಹೆಸರು ಬಂದಾಗಿರುತ್ತದೆ ಅದು ಅವರ ತಾತನ ಹೆಸರಿಗೆ ದಕ್ಕಿದ ಪರಂಪರೆಯ ಹಿರಿಮೆ.

ಅಲ್ಲಿ ಲಂಕಾದಹನ ನಾಟಕ. ಬ್ಯಾಡಗಿ ಸಾವಿತ್ರಮ್ಮನವರಿಗೆ 'ಆಂಜನೇಯ'ನ ಪಾತ್ರ ದಿಂದಾಗಿ ಆಗಲೇ ಸ್ಟಾರ್ ಕೀರ್ತಿ ಬಂದಾಗಿತ್ತು. ಹೀಗಾಗಿ ಅವರನ್ನು ನಂಬಿಕೊಂಡೇ ಲಂಕಾದಹನ ನಾಟಕ. ಇವರಿಗೆ ಅಲ್ಲಿ ಶ್ರೀ ಅಕ್ಕಿ ವಕೀಲರು ಮತ್ತು ಶ್ರೀ ಕಲಾಲ್ ಅವರ ಪೂರ್ಣ ಸಹಕಾರವಿರುತ್ತದೆ. ಇನ್ನೇನು ನಾಟಕ ಆರಂಭಿಸಬೇಕು. ಹಳೇ ಕ್ಯಾಂಪಿನ ಕಂಟ್ರ್ಯಾಕ್ಟ್‌ದಾರರು ಸಬ್‌ಇನ್ಸ್‌ಪೆಕ್ಟರ್ ಸಮೇತ ಆಗಮಿಸಿ ಶಿವಣ್ಣಗೆ ಧಮಕಿ ಹಾಕುತ್ತಾರೆ. ಶ್ರೀ ಅಕ್ಕಿ ವಕೀಲರು ಅದೆಲ್ಲ ಬಗೆಹರಿಸಿ ನೀವು ಬೇಕಾದರೆ ಕೋರ್ಟಿಗೆ ಕೇಸ್ ಹಾಕಿ ನಾನು ಶಿವಣ್ಣನ ಪರವಾಗಿ ವಾದಿಸುತ್ತೇನೆ. ಈಗ ನಾಟಕಕ್ಕೆ ಅಡ್ಡಿ ಮಾಡಬಾರದೆಂದು ತಾಕೀತು ಮಾಡುತ್ತಾರೆ. ಆಗ ಅವರು ಹೊಂದಾಣಿಕೆ ಮಾಡಿ ಕೊಳ್ಳುತ್ತಾರೆ. ಅವರಿಗೆ ಸ್ಟೇಜ್‌ನಲ್ಲಿ ಹಾರ ಹಾಕಿ ಕಳಿಸಿಕೊಡುತ್ತಾರೆ. ಆ ಕಂಟ್ರ್ಯಾಕ್ಟರ್ ತಂದಿದ್ದ ಲಾರಿಯ ಟೈರ್ ಗಳನ್ನು ಶಿವಣ್ಣನ ಅಭಿಮಾನಿ ಹುಡುಗರು ಬಿಚ್ಚಿ ಬಿಸಾಕಿ ಬಿಟ್ಟಿರುತ್ತಾರೆ. ಅದೆಲ್ಲ ಶ್ರೀ ಕಲಾಲ್ ಕಡೆಯವರ ಕಮಾಲ್ ಆಗಿರುತ್ತದೆ.

ಮಳೆಗಾಲದ ಕ್ಯಾಂಪ್ ಕ್ಲೋಸ್ ಮಾಡಿ ಗುಳೇದಗುಡ್ಡಕ್ಕೆ ಕರನಂದಿ ರಾಚಪ್ಪನವರಿಗೆ ರಂಗಸಜ್ಜಿಕೆ ತಲುಪಿಸಲು ಹೋದಾಗ ಕೇವಲ ಮೂರು ಸಾವಿರ ರೂಪಾಯಿಗಳಿಗೆ ರಂಗಸಜ್ಜಿಕೆ ಕೊಡುವುದಾಗಿ ಕರನಂದಿ ಹೇಳುತ್ತಾರೆ. ಶಿವಣ್ಣಗೆ ಧೈರ್ಯ ಸಾಲದೇ ಸುಮ್ಮನಾಗುತ್ತಾರೆ. ಮಳೆಗಾಲದಲ್ಲೇ ಸೌದತ್ತಿ ಕ್ಯಾಂಪ್. ಅಲ್ಲಿನ ದೊಡ್ಡ ಉದ್ಯಮಿ ಶ್ರೀ ಹಂಪಣ್ಣ ಅವರ ಜಿನ್ನಿಂಗ್ ಫ್ಯಾಕ್ಟರಿಯ ಗೋಡೌನ್ ಅನ್ನೇ ರಂಗಮಂದಿರ ಮಾಡಿಕೊಂಡು ಕ್ಯಾಂಪ್. ತಿಂಗಳಿಗೆ ನಾಲ್ಕುನೂರು ರೂಪಾಯಿ ಬಾಡಿಗೆ. ಬೆಳವಾಡಿ ಯಿಂದ ಸೀನ್ಸ್, ಮೈಕ್, ಲೈಟ್‌ಗಳನ್ನು ಬಾಡಿಗೆಗೆ ತರುತ್ತಾರೆ. ನಾಟಕವೊಂದಕ್ಕೆ ಮುನ್ನೂರು ರೂಪಾಯಿ ಬಾಡಿಗೆ. ಫಾಯದೆ ಏನೂ ಇಲ್ಲ. ಕ್ಯಾಂಪ್ ಮುಗಿಸಿ ಹುಬ್ಬಳ್ಳಿಯಲ್ಲಿ ಕ್ಯಾಂಪ್ ಮಾಡಿದ್ದ ಗುಡಿಗೇರಿ ಬಸವರಾಜರ ಶ್ರೀ ಸಂಗಮೇಶ್ವರ ನಾಟಕ ಸಂಘಕ್ಕೆ ಸೇರ್ಪಡೆ. ಮುಂಗಡವೆಂದು ಎನ್. ಬಸವರಾಜ ಶಿವಣ್ಣನಿಗೆ ನಾಲ್ಕು ಸಾವಿರ ರೂಪಾಯಿ ಕೊಡ್ತಾರೆ. ವರ ನೋಡಿ ಹೆಣ್ಣು ಕೊಡು ನಾಟಕದಲ್ಲಿ ಶಿವಣ್ಣನಿಗೆ ನಾಯಕ ನಟನ ಪಾತ್ರ. ಅಲ್ಲಿನ ಕೆಲವು ಕುಹಕಿ ಪಿಸುಣರ ಮತ್ಸರದ ಮಾತು ಗಳಿಂದಾಗಿ ಶಿವಣ್ಣನ ಸ್ವಾಭಿಮಾನ ಅಲ್ಲಿರಲು ಬಿಡುವುದಿಲ್ಲ. ಗುಲಾಮಗಿರಿಯೆಂದರೆ ಶಿವಣ್ಣಗೆ ಆಗಿ ಬರುತ್ತಿರಲಿಲ್ಲ. ಕೆಲವು ಕಲಾವಿದರು ಮಾಲೀಕರೊಂದಿಗೆ ಚಮಚಾಗಿರಿ ಮಾಡುತ್ತಿದ್ದುದು ಸರಿ ಬರಲಿಲ್ಲ. ಶಿವಣ್ಣ ಮರಳಿ ದಾವಣಗೆರೆಗೆ ಬರುತ್ತಾರೆ.

ಆಗ ಬೀರಲಿಂಗೇಶ್ವರ ಮೈದಾನದಲ್ಲಿ ಕಾಕನೂರು ಎಲ್ಲಪ್ಪನವರ ಶ್ರೀ ಮಹಾಕೂಟೇಶ್ವರ ನಾಟ್ಯ ಸಂಘ ಮತ್ತು ದೊಗ್ಗಳ್ಳಿ ಕಂಪೌಂಡಿನಲ್ಲಿ ಅಬ್ಬಾಸಅಲಿ, ಶಂಕರಯ್ಯಸ್ವಾಮಿಗಳ ನಾಟಕ ಸಂಘಗಳ ಭರ್ಜರಿ ಕ್ಯಾಂಪ್. ಶಿವಣ್ಣನವರ ಆಪ್ತಮಿತ್ರನೆಂದೇ ಖ್ಯಾತರಾಗಿದ್ದ ದೊಡ್ಡಬಾತಿ ಜಯಣ್ಣ, ಶಿವಣ್ಣನ ಎಲ್ಲಾ ಏಳಿಗೆಗಳಲ್ಲಿ ಸಹಾಯ ನೀಡುತ್ತಾರೆ. ಈ ಸಹಕಾರ ಜಯಣ್ಣನವರ ಸಾವಿನವರೆಗೂ ಇರುತ್ತದೆ. ಕಾಕನೂರು ಕಂಪನಿಯಲ್ಲಿ ಶಿವಣ್ಣನ ಸಹಾಯಾರ್ಥ ನಾಟಕ ಪ್ರದರ್ಶನ ಮಾಡಿ ಗುಡಿಗೇರಿ ಬಸಣ್ಣನ ನಾಲ್ಕು ಸಾವಿರ ಸಾಲ ತೀರಿಸ್ತಾರೆ.

# ನಿರುದ್ಯೋಗಿ ಪರ್ವದ ಕ್ರೂರ ಬೇಸರ

ಶಿವಣ್ಣನವರ ಮನೆಯಲ್ಲಿ ಎಂಟು ಜನಸದಸ್ಯರು. ಅಪ್ಪ, ಅಮ್ಮ, ತಮ್ಮ, ತಂಗಿ, ಹೆಂಡತಿ ಮಕ್ಕಳು ಸಂಸಾರ ಸರಿತೂಗಿಸುವುದು ದುಸ್ತರವಾಯಿತು. ಶಿವಣ್ಣನಿಗೆ ನಾಟಕ ಕಂಪನಿ, ಪಾತ್ರ ಮಾಡುವುದು ಬಿಟ್ಟರೆ ಬೇರೇನೂ ಗೊತ್ತಿಲ್ಲ ದಾವಣಗೆರೆಯಲ್ಲಿ ಜೀವನ  ನೂಕುವುದು ಮಾತ್ರವಲ್ಲ. ಟೈಂಪಾಸ್ ಮಾಡುವುದೇ ಘನಘೋರವೆನಿಸಿತು. ಹಳೇ ಬಸ್‌ನಿಲ್ದಾಣ (ಆಗ ಅದೊಂದೇ ಇತ್ತು)ದ ಬಳಿ ಇರುವ ತನ್ನ ಆಪ್ತಮಿತ್ರ ಬಾತಿ ಜಯಣ್ಣನ ಹೋಟೆಲ್‌ನಲ್ಲಿ ತಿಂಡಿ-ಚಹ, ಬೇರೊಬ್ಬ ಕಂಪನಿ ಮಾಲೀಕರು ಇವರನ್ನು ಕರೆಯಲು ಹಿಂದೇಟು ಹಾಕತೊಡಗಿದರು. ರಾತ್ರಿಯಾದೊಡನೆ ಕಾಕನೂರು ಯಲ್ಲಪ್ಪನ ಕಂಪನಿಯಲ್ಲಿ ನಾಟಕ ನೋಡುವುದು, ಈ ದಿನಚರಿ ಅದೆಷ್ಟು ದಿನ ಸಾಗೀತು?

ಹೊಳಲ್ಕೆರೆ ತಾಲ್ಲೂಕು ರಾಮಗಿರಿಯಲ್ಲಿ ರಾಜಪ್ಪ ಎಂಬುವರ ಬಳಿ ರಂಗಸಜ್ಜಿಕೆಗಳು ಮಾರಾಟಕ್ಕಿವೆ ಎಂದು ಆಪ್ತಮಿತ್ರ ಬಾತಿ ಜಯಣ್ಣ ಹೀಗೊಂದು ದಿನ ಹೇಳುತ್ತಾರೆ. ಕವಲಿ ಚನ್ನಬಸಪ್ಪನವರು ನಲ್ಲೂರು ಕ್ಯಾಂಪ್‌ನಲ್ಲಿ ನಷ್ಟ ಅನುಭವಿಸಿ ರಾಜಪ್ಪನವರಿಗೆ ಒಪ್ಪಿಸಿ ಹೋದದ್ದು ತಿಳೀತು. ಮಾರನೇ ದಿನವೇ ಶಿವಣ್ಣ ಮತ್ತು ಅವರ ತಂದೆ ಬಸವಣ್ಣೆಪ್ಪ ಮತ್ತು ರಂಗಮಿತ್ರ ತಿಪ್ಪೇಸ್ವಾಮಿ ಸಮೇತ ರಾಮಗಿರಿಗೆ ಹೋಗಿ ಮೂರು ಸಾವಿರ ರೂಪಾಯಿಗಳಿಗೆ ಕಂತಿನ ಮೇಲೆ ಹಣ ಸಂದಾಯ ಮಾಡುವಂತೆ ಮಾತುಕತೆ ಆಡಿ ಭರಮಸಾಗರಕ್ಕೆ ಕ್ಯಾಂಪ್ ಮಾಡುತ್ತಾರೆ.

ಹೇಮರೆಡ್ಡಿ ಮಲ್ಲಮ್ಮ ನಾಟಕ ಇವರ ಕಂಪನಿಯ ಅಗ್‌ದಿ ಪೇಟೆಂಟ್ ನಾಟಕ ಅದನ್ನೇ ಆಡುತ್ತಾರೆ. ದಾವಣಗೆರೆಯಲ್ಲಿದ್ದ ಮಹಾಕೂಟೇಶ್ವರ ನಾಟಕದಲ್ಲಿ ಅಭಿನಯಿಸಿ ಲಾರಿ ಹಿಡಕೊಂಡು ಭರಮಸಾಗರಕ್ಕೆ ಬಂದು ಶ್ರೀಯಂಕಂಚಿ ಚಿಟ್ಟೆಪ್ಪ ವೇಮಣ್ಣನ ಪಾತ್ರ ಮಾಡುತ್ತಾರೆ. ನಾಟಕ ಓಡುವುದಿಲ್ಲ. ಧಿರೇಂದ್ರಗೋಪಾಲ ಆಗತಾನೇ

ಮುದುಕನ ಮದುವೆ ನಾಟಕದಿಂದ ಹೆಸರು ಮಾಡುತ್ತಿರುತ್ತಾರೆ. ಅವರನ್ನು ಕರೆಸಿ ಮುದುಕನ ಮದುವೆ ಆಡುತ್ತಾರೆ. ಕಲೆಕ್ಷನ್ ಮುನ್ನೂರು ನಾನೂರು. ಅದೇ ವೇಳೆಗೆ ಬಿದರಕೆರೆಯಲ್ಲಿ (ಓಬಳೇಶ್ ಹುಟ್ಟೂರು) ಸಹಾಯಾರ್ಥ ಇದೇ ನಾಟಕ ಪ್ರಯೋಗಿಸಬೇಕೆಂಬ ಕುಮಾರಸ್ವಾಮಿ (ಓಬಳೇಶ್ ತಂಗಿಯ ಗಂಡ) ಕೋರಿಕೆ ಮೇರೆಗೆ ಶಿವಣ್ಣ ಅದನ್ನು ಮಾಡುತ್ತಾರೆ. ಯುಗಾದಿ ಹಬ್ಬದ ದಿನವೇ ಕೇವಲ ಆರು ನೂರು ರೂಪಾಯಿ ಸಹಾಯಾರ್ಥ ಸಂಗ್ರಹದಲ್ಲಿ ರಂಗ ಪ್ರದರ್ಶನ ಮಾಡಿ ಕುಮಾರಸ್ವಾಮಿಗೆ ನೆರವಾಗುತ್ತಾರೆ. ತದನಂತರ ಕಲ್ಲೇದೇವರಪುರಕ್ಕೆ ಕ್ಯಾಂಪ್. ಖಾದಿ ಸೀರೆ ಮಳೆಯಿಂದಾಗಿ ನಡೆಯಲಿಲ್ಲ. ದಾವಣಗೆರೆಗೆ ಬರುತ್ತಾರೆ ಶಿವಣ್ಣ. ಮತ್ತೆ ತಾತ್ಕಾಲಿಕವಾಗಿ ಕಂಪನಿಗೆ ರಜೆ. ಹೀಗೆ ಹತ್ತಾರು ಬಾರಿ ಕಂಪನಿಯನ್ನು ನಿಲ್ಲಿಸುವುದು, ನಡೆಸುವುದು ನಡೆದೇ ಇರುತ್ತದೆ. ಇತ್ತ ದಾವಣಗೆರೆಯಲ್ಲಿ ದೊಗ್ಗಳ್ಳಿ ಕಂಪೌಂಡ್‌ನಲ್ಲಿದ್ದ ಕಂಪನಿಯಲ್ಲಿ ಏರುಪೇರುಗಳು ಜರುಗಿ ಬಳ್ಳಾರಿ ಕೀರ್ತೆಪ್ಪ ಮತ್ತು ಅಬ್ಬಾಸಅಲಿ ಹೊರಬರುತ್ತಾರೆ. ಶಿವಣ್ಣನ ಜತೆ ಸೇರಿ ಎಚ್.ಎನ್. ಹೂಗಾರರ ತಾಳತಪ್ಪಿದ ಬಾಳು ಎಂಬ ಹೊಸನಾಟಕವನ್ನು ಆಡುತ್ತಾರೆ. ಶಿವಣ್ಣನಿಗೆ ಹಾಸ್ಯಪಾತ್ರ ನಂತರ ಮತ್ತೊಂದು ಹೊಸ ನಾಟಕ ಹೊಸಬೆಳಕು. ಚಿತ್ರನಟ ಸುಧೀರ್ ಮತ್ತು ಅವರ ಪತ್ನಿ ಮಾಲತಿ ಅಭಿನಯ. ಶಿವಣ್ಣನಿಗೆ ಖಾದಿಮಾಮ ಎಂಬ ರಾಜಕಾರಣಿಯ ಹೊಸವೇಷ. ಹೀಗೆ ಮೂರ್‍ನಾಲ್ಕು ತಿಂಗಳು ದಾವಣಗೆರೆ ಮೊಕ್ಕಾಂ.

ಈ ನಡುವೆ ಶಿವಣ್ಣನ ತಂಗಿಯ (ಮಂಜುಳಾ) ಮದುವೆ. ಅದಕ್ಕಾಗಿ ಸಹಾಯಾರ್ಥ ನಾಟಕ ಪ್ರದರ್ಶನ. ಆಗ ವಿನೋದ ವಿದ್ಯಾನಿಧಿ ಶಾಂತಕುಮಾರ ಹಾಗೂ ಕುಸುಬಿ ಶಿವಣ್ಣ, (ಕವಲಿ ಚನ್ನಬಸಪ್ಪರ ಅಳಿಯ) ಮುಂತಾದವರು ನೆರವಾಗುತ್ತಾರೆ. ತಂಗಿಯ ಮದುವೆ ನಂತರ ಶಿವಣ್ಣನ ಪತ್ನಿ ಮತ್ತು ಮಕ್ಕಳು (ನಟರಾಜ, ಕೊಟ್ರೇಶ್, ಮಂಗಳಾ) ಇವರನ್ನು ಬಿಟ್ಟು ಇವರ ಸಹೋದರರಿಬ್ಬರು ಮತ್ತು ಅಪ್ಪ ಅಮ್ಮ ಬೇರೆಯಾಗುತ್ತಾರೆ. ಶಿವಣ್ಣನವರಿಗೆ ವನವಾಸದ ದಿನಗಳು ಹೊಸವೇನಲ್ಲ. ಕೂಡು ಕುಟುಂಬವಿದ್ದಾಗ ಮಕ್ಕಳ ವಿದ್ಯಾಭ್ಯಾಸ ಇತರೆ

ಅನಾನುಕೂಲಗಳೇನೆಂಬುದು ತಿಳಿಯುತ್ತಿರಲಿಲ್ಲ. ಈ ಕಷ್ಟದಲ್ಲೂ ದೊಡ್ಡಬಾತಿ ಜಯಣ್ಣನ ಸೋದರ ದೇವೇಂದ್ರಪ್ಪನವರಲ್ಲಿ 250ರೂಪಾಯಿ ಸಾಲಪಡೆದು ಶಿವಣ್ಣ ಮಂತ್ರಾಲಯಕ್ಕೆ ಹೋಗಿ ಬರುತ್ತಾರೆ. ಏನೋ ಸಮಾಧಾನ ವೆಂಬಂತೆ. ನಂತರದ ದಿನಗಳಲ್ಲಿ ಜಿ.ವಿ. ಕೃಷ್ಣ ಹಾಗೂ ಅವರ ಪತ್ನಿಯರಾದ ರಾಧಾ–ರುಕ್ಮಿಣಿ ದಾವಣಗೆರೆಗೆ ಬಂದು ಕ್ಯಾಂಪ್ ಮಾಡುತ್ತಾರೆ. ವರನೋಡಿ ಹೆಣ್ಣು ಕೊಡು ನಾಟಕ. ಶಿವಣ್ಣನಿಗೆ ಎಂದಿನಂತೆ ನಾಯಕ ನಟನ ಪಾತ್ರ, ದಿನಕ್ಕೆ 25ರೂಪಾಯಿ ಸಂಭಾವನೆ ಕೆಲಕಾಲ ಸಮಸ್ಯೆ ಬಗೆಹರಿದಂತಾಯ್ತು.

ತದನಂತರ ದಾವಣಗೆರೆ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಶಿವಣ್ಣ ಮತ್ತೆ ಮತ್ತೆ ಕ್ಯಾಂಪ್ ಮಾಡುತ್ತಾರೆ. ಅವರ ತಾತನ ಹುಟ್ಟೂರಾದ ಕಂಚಿಕೇರಿಯಲ್ಲೂ ಕೆಲಕಾಲ ಕ್ಯಾಂಪ್. ಆಗ ಅವರದೇ ಬೆಳ್ಳೂಡಿ ಮನೆತನದವರಿಂದ ಸಹಾಯ ದೊರಕುತ್ತದೆ. ಕಂಚಿಕೇರಿಯಲ್ಲಿ ಇವತ್ತಿಗೂ ನಾಟಕದಕಟ್ಟೆ, ಬೆಲ್ಲದ ಮನೆಯೆಂದು ಕರೆಯುತ್ತಿರುವ ಜಾಗಗಳು ಇವರ ತಾತನ ನೆನಪುಗಳೆಂದು ಶಿವಣ್ಣ ಅತ್ಯಂತ ಪ್ರೀತಿಯಿಂದ ಹೇಳುತ್ತಾರೆ. ಇವರ ಮನೆತನಕ್ಕೆ ಸೇರಿದ ಬಂಧುಗಳು ಇವತ್ತಿಗೂ ಕಂಚಿಕೇರಿಯಲ್ಲಿ ಬೆಳ್ಳೂಡಿ ಮನೆತನದಲ್ಲಿದ್ದಾರೆ.

ತಾತನ ಹುಟ್ಟೂರಿನಲ್ಲಿ ತಾತನಿಗೆ ಪ್ರಿಯವಾಗಿದ್ದ ಹೇಮರೆಡ್ಡಿ ಮಲ್ಲಮ್ಮ ಅರ್ಥಾತ್ ಗಾಳಿಪಟದ ಮಲ್ಲಮ್ಮ ನಾಟಕವನ್ನು ವಾರವೊಪ್ಪತ್ತು ಪ್ರದರ್ಶನ ಮಾಡಿದ ಧನ್ಯತೆ ಶಿವಣ್ಣನವರದು. ಆಗ ಶಿವಮೂರ್ತೆಪ್ಪನವರು ತಮಗೆ ಗ್ಯಾಸ್‌ಲೈಟ್ ಬಾಡಿಗೆಗೆ ನೀಡಿದ್ದು, ಜಗಳೂರು ಮಲ್ಲಪ್ಪನವರ ಟೆಂಟ್ ಬಾಡಿಗೆಗೆ ತಂದದ್ದು ಅವುಗಳನ್ನೇ ತಾವು ಆರುನೂರು ರೂಪಾಯಿಗೆ ಖರೀದಿ ಮಾಡುತ್ತಾರೆ.

ತದನಂತರ ದಾವಣಗೆರೆ, ಚನ್ನಗಿರಿ, ಹರಿಹರ, ತಾಲ್ಲೂಕುಗಳ ದೊಡ್ಡ ದೊಡ್ಡ ಹಳ್ಳಿಗಳಲ್ಲಿ ಕ್ಯಾಂಪ್ ಮಾಡುವ ಮೂಲಕ ಗ್ರಾಮೀಣ ರಂಗಭೂಮಿಯನ್ನು ಅವಲಂಬಿಸುತ್ತಾರೆ. ಆಗ ಗ್ರಾಮೀಣ ಪ್ರದೇಶಗಳಲ್ಲಿ ಇವರಿಗೆ ಸೂಕ್ತ ನೆರವು ದೊರೆಯುತ್ತದೆ. ಎರಡೆರಡು ಪಾರ್ಟಿಗಳಿರುವ ಕಡೆ ಇವರಿಗೆ ಮುಜುಗರವೂ ಆಗುತ್ತದೆ. ಅದೆಲ್ಲವನ್ನು ನಿಭಾಯಿಸುವುದು ಕಷ್ಟವಾಗುತ್ತದೆ. ದೇವರ ಬೆಳಕೆರೆಯಲ್ಲಿ ನಾಟಕ ನಡೆಯುವಾಗ ಅಂತಹದ್ದೊಂದು ಪ್ರಸಂಗ ಜರುಗಿ ಕಲ್ಲುತೂರಾಟವಾಗಿ ಗಾಯಗಳಾಗಿ ಆಸ್ಪತ್ರೆ ಸೇರುವ ಪ್ರಸಂಗಗಳು ಜರುಗುತ್ತವೆ. ಪೊಲೀಸ್ ಸ್ಟೇಷನ್, ಕೋರ್ಟು ಕಟಕಟೆ ಎಲ್ಲವನ್ನು ಅನುಭವಿಸುವ ಪ್ರಸಂಗಗಳು ಜರುಗುತ್ತವೆ.

# ಮೆಡ್ಲೇರಿಯಲ್ಲಿ ಪವಾಡ ಸದೃಶ ಮಳೆ

ಅಲ್ಲಿಂದ ರಾಣೆಬೆನ್ನೂರು ತಾಲ್ಲೂಕು ಮೆಡ್ಲೇರಿಗೆ ಕ್ಯಾಂಪ್ ಸ್ಥಳಾಂತರ. ಶಿವಣ್ಣ ಉತ್ತರ ಕರ್ನಾಟಕದ ಯಾವುದೇ ಊರಿಗೆ ಹೋದರೂ ಅವರಿಗೆ ಅಲ್ಲಿ ಒಬ್ಬರಾದರೂ ಒಳ್ಳೆಯ ಗೆಳೆಯರು ಇರ್ತಿದ್ರು. ಮೆಡ್ಲೇರಿಯಲ್ಲಿ ಬಸಂತಯ್ಯ ಮಾಸ್ತರ ಎಂಬ ಹಳೆಯ ಗೆಳೆಯರಿದ್ದರು. ಈ ಮಾಸ್ತರ ಹವ್ಯಾಸಕ್ಕಾಗಿ ತಾನೇ ನಾಟಕದ ಸೀನರಿಗಳನ್ನು ಸ್ವತಃ ತಯಾರಿಸಿಟ್ಟುಕೊಂಡಿದ್ದರು. ಅವುಗಳ ಮೂಲಕ ಶಿವಣ್ಣನವರ ಕಂಪನಿಗೆ ನಾಟಕ ಪ್ರದರ್ಶನಕ್ಕೆ ಅನುವಾಗುತ್ತದೆ.

ಓಬಳೇಶ್ ಮತ್ತು ಅವರ ಪತ್ನಿ ಯಶೋಧಮ್ಮ ಇವರ ನಡುವೆ ಭಿನ್ನಾಭಿಪ್ರಾಯ ಗಳುಂಟಾಗಿ ಕೆಲವು ದಿನಗಳವರೆಗೆ ಯಶೋಧಮ್ಮ ತನ್ನಿಬ್ಬರು ಹೆಣ್ಣು ಮಕ್ಕಳೊಂದಿಗೆ ಬೇರೆ ಹೋಗುತ್ತಾರೆ. ಹಾಗಿರುವಾಗ ಅವರು ಮೆಡ್ಲೇರಿ ಕ್ಯಾಂಪ್‌ಗೆ ಬಂದು ಶಿವಣ್ಣನವರ ಕಂಪನಿಯಲ್ಲಿ ಖಾದಿಸೀರೆ ನಾಟಕದಲ್ಲಿ ಪಾತ್ರ ಮಾಡುತ್ತಾರೆ. ನಾಟಕ ಅತ್ಯಂತ ಅದ್ಧೂರಿಯಾಗಿ ಜರುಗುತ್ತದೆ. ಆದರೆ ಆಗ ಅನಾವೃಷ್ಟಿ ಕಾಲವಾಗಿತ್ತು.

ಪ್ರತಿದಿನ ನಾಟಕದ ಕೊನೆಯಲ್ಲಿ ಶಿವಣ್ಣನಿಂದ ನಾಲ್ಕು ಮಾತುಗಳು. ನಾಳಿನ ಪ್ರದರ್ಶನ ಕುರಿತು ಪ್ರಾಸ್ತಾವಿಕ ನುಡಿಗಳನ್ನಾಡುತ್ತಿದ್ದಾಗ ರೇಣುಕಾದೇವಿ ನಾಟಕ ಆಡಿದರೆ ಮಳೆ ಬರಬಹುದೆಂಬುದು ಪ್ರಸ್ತಾಪವಾಗುತ್ತದೆ. ಆಗಲಿ ಎಂದು ಒಂದೆರಡು ದಿನಗಳಲ್ಲಿ ರೇಣುಕಾ ದೇವಿ ಮಹಾತ್ಮೆ ನಾಟಕ ಆಡಬೇಕೆಂಬ ಒತ್ತಾಯ ಪ್ರೇಕ್ಷಕರಿಂದ ಬರುತ್ತದೆ. ಅದುವರೆಗೆ ಅವರು ಆ ನಾಟಕ ಆಡಿರಲಿಲ್ಲ. ಜನರ ಒತ್ತಡಕ್ಕೆ ವಾರವೊಪ್ಪತ್ತು ಅವಕಾಶ ಪಡೆದು ಜಮದಗ್ನಿ ಪಾತ್ರಕ್ಕೆ ಹೊಳಗುಂದಿ ಸೋಮಣ್ಣನನ್ನು, ರೇಣುಕಾದೇವಿ ಪಾತ್ರಕ್ಕೆ ಅವರ ಪತ್ನಿ ಕಸ್ತೂರಮ್ಮನವರನ್ನು ಕರೆಸುತ್ತಾರೆ. ಭರ್ಜರಿ ಸಿದ್ಧತೆಗಳು ಜರುಗುತ್ತವೆ.

ರೇಣುಕಾದೇವಿ ಪ್ರದರ್ಶನದ ದಿನ ಮೇಡ್ಲೇರಿ ತುಂಬಾ ಹಬ್ಬದ ವಾತಾವರಣ. ಊರಿನ ಹೆಣ್ಣು ಮಕ್ಕಳು ಬಂದು ರಂಗಮಂದಿರವನ್ನು ತೊಳೆದು ಮಡಿಗೊಳಿಸುತ್ತಾರೆ. ರಂಗೋಲಿ ಹಾಕಿ ಶೃಂಗಾರ ಮಾಡುತ್ತಾರೆ. ತರುಣರು ಬಾಳೇಕಂದು, ತಳಿರು ತೋರಣಗಳಿಂದ ರಂಗಮಂದಿರವನ್ನು ಸಡಗರ ಸಂಭ್ರಮಗಳಿಂದ ಸಿದ್ಧಗೊಳಿಸುತ್ತಾರೆ.

ಶುಭ್ರವಾದ ಆಕಾಶ, ಆಕಾಶದ ತುಂಬೆಲ್ಲಾ ನಕ್ಷತ್ರಗಳ ಲಕಲಕ. ಹಿಟ್ಟು ಚೆಲ್ಲಿದಂತಹ ಚಂದಿರನ ಬೆಳಕು. ನಾಟಕ ನೋಡುವ ಪ್ರೇಕ್ಷಕರೆಲ್ಲರಿಗೂ ಮುಗಿಲ ಕಡೆಗೆ ಧ್ಯಾಸ. ಮಳೆಯ ಧ್ಯಾನ, ರಂಗಮಂದಿರ ಹಾಗೂ ಹೊರಗೂ ಜನಜಾತ್ರೆ. ಪತಿಯ ಪೂಜೆಗೆಂದು ರೇಣುಕೆ ಮಡಿ ನೀರು ತುಂಬಿಕೊಂಡು ಹೋಗುವ ಸನ್ನಿವೇಶ. ಬಾ ಬಿಂದಿಗೆ ಎಂಬ ಮಧುರ ಹಾಡಿನೊಂದಿಗೆ ರೇಣುಕೆಯ ಪ್ರವೇಶವಾದದ್ದೇ ತಡ. ಈಶಾನ್ಯ ಮೂಲೆಯಿಂದ ಇದ್ದಕ್ಕಿದ್ದಂತೆ ಮೋಡ ಹುರಿಗಟ್ಟಿ ಗುಡುಗು ಮಿಂಚು. ಧೋ ಧೋ ಎಂದು ಮಳೆ ಸುರಿಯಲಾರಂಭಿಸಿತು. ಎಲ್ಲರೂ ಬೆರಗಾಗಿ ಹೋದರು. ಶಿವಣ್ಣ ಮೂಕವಿಸ್ಮಿತನಾಗಿ ಬಿಟ್ಟರು. ದೇವಿಯನ್ನು ಕೊಂಡಾಡುತ್ತಾ ಜನ ಕೈಮುಗಿದರು. ಹೀಗೆ ಮೂರು ದಿವಸ ಸರಿಯಾಗಿ ಅದೇ ಸನ್ನಿವೇಶ ಬರುತ್ತಲೇ ಮಳೆ ಬರುತ್ತಿತ್ತು. ಜನರಲ್ಲಿ ಕಾಕತಾಳೀಯ ಎಂಬಂತೆ ದೇವಿಯ ಮೇಲೆ ಅಪಾರ ನಂಬಿಕೆ ಹುಟ್ಟಿ ಶಿವಣ್ಣನವರಿಗೆ ಆರ್ಥಿಕವಾಗಿ ಸುಧಾರಣೆ ಆಯಿತು.

ದಸರೆಯ ಸಂದರ್ಭದಲ್ಲಿ ಶ್ರೀಶೈಲ ಜಗದ್ಗುರುಗಳಾದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಆಗಮಿಸಿ ಆಶೀರ್ವದಿಸಿದರು. ಆ ದಿನ ಹೇಮರೆಡ್ಡಿ ಮಲ್ಲಮ್ಮ ನಾಟಕವಿತ್ತು. ಆ ದಿನದ ಕಲೆಕ್ಷನ್ ಪೂರ್ತಿ ಜಗದ್ಗುರುಗಳಿಗೆ ಅರ್ಪಿಸಿ ಶಿವಣ್ಣ ಹಾಗೂ ಹತ್ತು ದಿನದ ಬಾಣಂತಿಯಾದ ಅವರ ಪತ್ನಿ ಕಮಲಮ್ಮ, ನಮಿಸುತ್ತಾರೆ. ಹತ್ತು ದಿನದ ಆ ಕೂಸನ್ನು ಶ್ರೀಗಳವರೇ ಎತ್ತಿಕೊಂಡು 'ಮಲ್ಲಿಕಾರ್ಜುನ' ಎಂದು ನಾಮಕರಣ ಮಾಡುತ್ತಾರೆ.

ಹೀಗೆ ಮೇಡ್ಲೇರಿಯಲ್ಲಿ ಜಯಲಕ್ಷ್ಮಿನಾಟಕ ಸಂಘ ಬಹಳ ವರ್ಷಗಳ ತರುವಾಯ ನೆಮ್ಮದಿ ಉಸಿರು ಬಿಡುವಂತಾಗುತ್ತದೆ. ಮೆಡ್ಲೇರಿಗೆ ಕೇವಲ ಒಂದು ಕಿಲೋಮೀಟರ್ ದೂರದಲ್ಲಿ ತುಂಗಭದ್ರಾನದಿ. ನದಿದಾಟಿದರೆ ಆ ಕಡೆ ಒಂದು ಕಿಲೋಮೀಟರ್ ದೂರದಲ್ಲಿ ಹಲವಾಗಲು ಗ್ರಾಮ. ಅದು ಹರಪನಹಳ್ಳಿ ತಾಲ್ಲೂಕಿನ ಆಗಿನ ಬಳ್ಳಾರಿ ಜಿಲ್ಲೆ, ಹಲುವಾಗಲು ಎಂಬ ಹಳ್ಳಿಗೆ ಶಿವಣ್ಣನವರ ರಂಗತಂಡದ ಪ್ರಯಾಣ.

ಹಲವಾಗಲು ಗ್ರಾಮದಲ್ಲಿ ತಿಂಗಳೊಪ್ಪತ್ತು ಕಾಲ ನೂಕುವಂತಾಯಿತು. ಅಲ್ಲಿಂದ ತೆಲಗಿಗೆ ಕ್ಯಾಂಪ್ (ತೆಲಗಿ ಉರುಸ್) ಬದಲಾವಣೆ. ಆಗಲೇ ಇವರ ಹಿರಿಯಮಗ ನಟರಾಜ ಪಾತ್ರ ಮಾಡಲು ಆರಂಭಿಸಿದ್ದ. ಕಮಲ ತಿಂಗಳ ಬಾಣಂತಿ ಆದರೂ ಖಾದಿಸೀರೆ ನಾಟಕದಲ್ಲಿ ಕಮಲಮ್ಮಗೆ ಪಾತ್ರ ಯಶೋಧರಮ್ಮ ಎಂದಿನಂತೆ ಎಂಎಲ್ಎ ಪಾತ್ರ ಮಾಡುತ್ತಿದ್ದರು. ಹಿಂದು-ಮುಸ್ಲಿಂ ಭಾವೈಕ್ಯತೆಯ ಉರುಸು ತೆಲಗಿಯಲ್ಲಿ ತಿಂಗಳ ಕಾಲ. ಈಡಿಗರ ಶಿವಪ್ಪ ಎಂಬುವರು ನಾಟಕಗಳನ್ನು ಗುತ್ತಿಗೆ ಮಾಡಿಕೊಂಡ

ಒಪ್ಪಂದದ ಮೇರೆಗೆ ಸಾಧಾರಣ ಕಲೆಕ್ಷನ್ ಆಯಿತು.

ದಿನೇ ದಿನೇ ಕಲೆಕ್ಷನ್ ಏರುತ್ತಿರಬೇಕಾದರೆ ಅವಗಡ ಗತಿಸಿತು. ಚಿತ್ರದುರ್ಗದ ಕುಮಾರಸ್ವಾಮಿ ಬೆಂಗಳೂರು ಬಳಿ ವಿಜಯಪುರದಲ್ಲಿ ಕ್ಯಾಂಪ್ ಮಾಡಿದ್ದು ಅವರಿಗೆ ಕಲಾವಿದರ ಕೊರತೆಯಾಗಿ ಅವರ ಕಂಪನಿ ಮ್ಯಾನೇಜರ್ ಮನೋಹರ ಎಂಬುವರು ಒಂದು ರಾತ್ರಿ ನಾಟಕ ಮುಗಿದು ಕಲಾವಿದರು ಅವರವರ ಮನೆಗಳಿಗೆ ಹೋಗುತ್ತಿದ್ದಂತೆ ನಡುರಾತ್ರಿಯೇ ಇವರ ಕಂಪನಿಯ ಕಲಾವಿದರನ್ನು ಹೆಚ್ಚು ಸಂಬಳದ ಆಸೆ ತೋರಿಸಿ ಬೆಂಗಳೂರಿಗೆ ಕರೆದೊಯ್ದರು. ಮರುದಿನ ಶಿವಣ್ಣನವರಿಗೆ ವಂಚನೆಯ ವಿಷಯ ಗೊತ್ತಾಗಿ ತೆಲಗಿ ಕ್ಯಾಂಪ್ ಸ್ಥಗಿತಗೊಳಿಸಿ ಗುಂಡಗತ್ತಿಗೆ ಪ್ರಯಾಣ.

ಪ್ರಾಯಶಃ 1978ರ ಜನವರಿ ತಿಂಗಳು. ಗುಂಡಗತ್ತಿ ಕರೆಂಟ್ ಕಾಣದ ಊರು. ನಾಯಕರಿಗು ಲಿಂಗಾಯಿತರಿಗೂ ಅಷ್ಟಕ್ಕಷ್ಟೇ. ನಾಯಕರ ಬಲದಿಂದ ಮತ್ತು ತಾತ ಕಂಚಿಕೇರಿ ಕೊಟ್ರಬಸಪ್ಪನವರ ಹೆಸರಿನಿಂದಾಗಿ ಅಲ್ಲಿ ಕಂಪನಿ ಆರಂಭ. ಅಲ್ಲಿ ಕೆಲ ನಾಯಕರಲ್ಲಿ ಹವ್ಯಾಸಿ ರಂಗಕಲಾವಿದರು ಅಭಿನಯದಲ್ಲಿ ನಿಪುಣರಾಗಿರುವುದನ್ನು ಅರಿತ ಶಿವಣ್ಣ ಅವರುಗಳನ್ನು ಸೇರಿಸಿಕೊಂಡೇ ನಾಟಕ ಆರಂಭಿಸುತ್ತಾರೆ. ಮಲ್ಲಮ್ಮ ನಾಟಕಕ್ಕೆ ದುರ್ಗಾದಾಸ ಮತ್ತು ಹೆಸರಾಂತ ಗಾಯಕಿ ಜುಬೇದಾ ಬೇಗಂ ಪಾತ್ರ ಮಾಡಲು ಬರುತ್ತಾರೆ. ತೆಲಗಿಯಿಂದ ಗ್ಯಾಸ್ ಲೈಟ್ ತರಿಸಿ ಮೂರು ತಿಂಗಳ ಕಾಲ ಎರಡು ದಿನಕ್ಕೊಂದರಂತೆ ರಂಗ ಪ್ರಯೋಗಗಳು ಜರುಗುತ್ತವೆ.

ಅಲ್ಲಿಂದ ದಾವಣಗೆರೆಗೆ ಬಂದು ಪಿ. ಹಾಲೇಶ್ ನಡೆಸುತ್ತಿದ್ದ ವಸ್ತು ಪ್ರದರ್ಶನದಲ್ಲಿ ಇವರ ಗೆಳೆಯ ಬಾತಿ ಜಯಣ್ಣ ನಡೆಸುತ್ತಿದ್ದ, ಅಂಗಡಿ ದೆಸೆಯಿಂದಾಗಿ ಶಿವಣ್ಣನಿಗೆ ನಾಟಕ ಪ್ರದರ್ಶನಕ್ಕು ಅವಕಾಶ ದೊರಕುತ್ತದೆ. ಪ್ರತಿನಾಟಕಕ್ಕೆ 300 ರೂಪಾಯಿ ಸಂಭಾವನೆ. ಅದರಿಂದ ತಿಂಗಳೊಪ್ಪತ್ತು ಕಾಲ ಸಂಕಟ ನಿವಾರಣೆ. ಅದರಿಂದ ಉಸಿರಾಡುವಂತಾಯಿತು.

ಓಬಳೇಶ್ವರ ಮತ್ತು ವಕ್ಕುಂದ ಮಲ್ಲನಗೌಡರು ಭಾಗಸ್ಥರಾಗಿ ರಾಮದುರ್ಗ (ಬೆಳಗಾವಿ ಜಿಲ್ಲೆ)ದಲ್ಲಿ ವಸ್ತಿ ಮಾಡಿರುತ್ತಾರೆ. ಬೆಳ್ಳಿಬಂಗಾರ ನಾಟಕಕ್ಕೆ ಓಬಳೇಶ್ ಅವರಿಂದ ಶಿವಣ್ಣನಿಗೆ ಕರೆಬಂದು ಅವರಿಬ್ಬರೂ ಜೋಡಿಯಾಗಿ ಈ ಭಾಗದಲ್ಲಿ ಮೋಡಿ ಮಾಡಿಬಿಡುತ್ತಾರೆ.

ಬೆಲಹೊಂಗಲದಲ್ಲಿ ದ್ಯಾವಣ್ಣಗೌಡ ಎನ್ನುವವರು ನಾಟಕ ಕಂಪನಿಗಳಿಗೆ ಸಾಲಕೊಡುತ್ತಿದ್ದರು. ಸಾಲವಸೂಲಿ ಮಾಡುವಲ್ಲಿಯೂ ಅವರು ನಿಸ್ಸೀಮರಾಗಿದ್ದರು. ಗುಡಿಗೇರಿ ಬಸಣ್ಣನಂಥವರು ಗೌಡರ ಬಳಿ ಸಾಲ ಪಡೆದು ಎರಡೆರಡು ಕಂಪನಿ ನಡೆಸುತ್ತಿದ್ದರು. ಓಬಳೇಶ್ ಕೂಡಾ ದ್ಯಾವಣ್ಣಗೌಡರ ಹತ್ತಿರ ಮೂರು ಸಾವಿರ ರೂಪಾಯಿ ಸಾಲಮಾಡಿದ್ದರು. ಇದ್ದಕ್ಕಿದ್ದಂತೆ ಗೌಡರ ಗ್ಯಾಂಗ್ ಸಾಲವಸೂಲಿಗೆ

ಬರುತ್ತದೆ. ಒಂದೆರಡು ವಾರ ಟೈಂ ಕೇಳಿ ಶಿವಣ್ಣನೇ ಮಧ್ಯಸ್ಥಿಕೆ ವಹಿಸುತ್ತಾರೆ. ಆಗ ನವಿಲು ತೀರ್ಥದಲ್ಲಿ ಅಣೆಕಟ್ಟೆ ಮತ್ತು ಕಾಲುವೆಗಳ ನಿರ್ಮಾಣ ಕಾರ್ಯ ಭರದಿಂದ ಸಾಗುತ್ತಿರುತ್ತದೆ. ಅಲ್ಲಿನ ನೌಕರದಾರರು ನಾಟಕಪ್ರಿಯರಾಗಿರುತ್ತಾರೆ. ಆಗ ಸಹಾಯಾರ್ಥ ನಾಟಕ ಪ್ರದರ್ಶಿಸಿ 4500/-ರೂಪಾಯಿ ಹಣ ಸಂಗ್ರಹವಾಗುತ್ತದೆ. ಆ ಹಣವನ್ನೇ ಗೌಡರ ಸಾಲ ತೀರಿಸಲು ಸಾಧ್ಯವಾಗುತ್ತದೆ. ಆ ದಿನಗಳಲ್ಲಿ ಓಬಳೇಶ್ ಅವರು ಶಿವಣ್ಣನವರಿಗೆ ದಿನಕ್ಕೆ ಐದುರೂಪಾಯಿ ಖರ್ಚಿಗೆಂದು ಮತ್ತು ವಾರಕ್ಕೆ ನೂರು ರೂಪಾಯಿ ಸಂಭಾವನೆ ಕೊಡುತ್ತಾರೆ. ಸಂಭಾವನೆ ಹಣ ದಾವಣಗೆರೆ ಮನೆಗೆ ಶಿವಣ್ಣ ಕಳಿಸುತ್ತಾರೆ. ಶಿವಣ್ಣನಿಗೆ ರಂಗ ಪ್ರೀತಿಯಷ್ಟೇ ಪ್ರಮುಖವಾದುದು ಕುಟುಂಬ ಪ್ರೀತಿ.

ನಂತರದ ದಿನಗಳಲ್ಲಿ ಶಿವಣ್ಣನವರಿಗೆ ಗಣೇಶ ಉತ್ಸವದ ನಾಟಕಗಳೇ ಅವರ ಪಾಲಿನ ಅನ್ನದ ಪಾತ್ರೆಗಳು. ದಾವಣಗೆರೆ-ಹರಿಹರ ಇನ್ನೂ ಅನೇಕ ಊರುಗಳಲ್ಲಿ ಗಣೇಶ ಉತ್ಸವಗಳಲ್ಲಿ ಬಗೆಬಗೆಯ ನಾಟಕಗಳನ್ನು ಪ್ರದರ್ಶಿಸಿ ರಂಗ ನಿರಂತರತೆಯನ್ನು ಕಾಪಿಟ್ಟುಕೊಳ್ಳುತ್ತಾರೆ. 1950ರ ಸುಮಾರಿಗೆ ತುಂಗಭದ್ರ ನದಿಗೆ ಅಣೆಕಟ್ಟೆ ಕಟ್ಟುವ ನಿರ್ಮಾಣದ ಸಂದರ್ಭ ಅದನ್ನು ನೋಡಲು ಶಿವಣ್ಣ ಡ್ಯಾಂ ಸೈಟಿಗೆ ಅವರ ಸೋದರಮಾವ ಏಕಾಂಬರನಾಥ ಜತೆಗೆ ಹೋಗುತ್ತಾರೆ. ಅವರ ಮಾವನವರಿಗೆ ನಾಟಕದ ಹುಚ್ಚು. ಡ್ಯಾಂ ಸೈಟ್ ನೋಡಿಯಾದ ಮೇಲೆ ಕೂಡ್ಲಿಗಿಯಲ್ಲಿ ಜರುಗುತ್ತಿದ್ದ ಚಿತ್ರಾಂಗದ ನಾಟಕ ನೋಡಲು ಶಿವಣ್ಣನನ್ನು ಕರಕೊಂಡು ಹೋಗುತ್ತಾರೆ. ಅಲ್ಲಿ ಕಲ್ಮನಿ ರಹಿಮಾನವ್ವನವರ ಪಾತ್ರ ನೋಡಿ ಶಿವಣ್ಣ ಬೆಕ್ಕಸಬೆರಗಾಗುತ್ತಾರೆ. ರಹಿಮಾನವ್ವ ಸ್ತ್ರೀ ಪಾತ್ರ ಮಾತ್ರವಲ್ಲ ಪುರುಷ ಪಾತ್ರ, ದುಃಖದ ಪಾತ್ರ, ಹಾಸ್ಯ ಪಾತ್ರ ಹೀಗೆ ಎಲ್ಲಬಗೆಯ ಪಾತ್ರಗಳನ್ನು ಮಾಡುತ್ತಿರುತ್ತಾರೆ. ಅಷ್ಟಕ್ಕು ಅಲ್ಲಿ ರಹಿಮಾನವ್ವ ಅರ್ಜುನನ ಪಾತ್ರ ಮಾಡಿರುತ್ತಾರೆ. ಅವರ ಪಾತ್ರ ಶಿವಣ್ಣನ ಭಾವ ಪ್ರಪಂಚದಲ್ಲಿ ಅಭಿನಯವೆಂದರೆ, ನಾಟಕವೆಂದರೆ ಏನೆಂದು ಆ ಪಾತ್ರ ಸಾಬೀತುಪಡಿಸುತ್ತದೆ. ರಹಿಮಾನವ್ವ ಕಲ್ಮನಿ ರಂಗಭೂಮಿಯ ಧ್ರುವತಾರೆ.

ಇಂತಹ ಹಳವಂಡಗಳಿಟ್ಟುಕೊಂಡಿದ್ದ ಶಿವಣ್ಣನಿಗೆ ರಹಿಮಾನವ್ವ ಅವರ ಮಗ ಕುಕನೂರ ಬಾಬಣ್ಣನವರಿಂದ ಕರೆ ಬರುತ್ತದೆ. ಅವರು ಆಗ ಕುಡತಿನಿಯಲ್ಲಿ ಕ್ಯಾಂಪ್ ಮಾಡಿರುತ್ತಾರೆ. ಅದು 'ತಾಯಿ ಕರಳು' ನಾಟಕ – ರಹಿಮಾನವ್ವ ಅವರಿಗೆ ಗಂಡನಾಗಿ ಅಭಿನಯಿಸಬೇಕಿತ್ತು. ಅದು ಅವರ ಮಗ ಹೆಸರಾಂತ ರಂಗನಟ ಬಾಬಣ್ಣನ ಮನಸ್ಸಾಕ್ಷಿ ಸುತಾರಾಂ ಒಪ್ಪುವುದಿಲ್ಲ. ಹೀಗಾಗಿ ಬಾಬಣ್ಣ ಶಿವಣ್ಣನಿಗೆ ತನ್ನ ತಾಯಿಯ ಪತಿಯ ಪಾತ್ರ ಮಾಡಲು ಅಲವತ್ತುಗೊಳ್ಳುತ್ತಾರೆ. ಅಷ್ಟಕ್ಕು ಶಿವಣ್ಣನಿಗೆ ಬಾಬಣ್ಣನಷ್ಟೇ ಕಿರಿದಾದ ವಯಸ್ಸು. ಆದರೂ ಶಿವಣ್ಣ ಒಪ್ಪಿಕೊಂಡು ರಹಿಮಾನವ್ವ ಕುಕನೂರು ಅವರು ತಾಯಿ ಕರಳು ನಾಟಕದಲ್ಲಿ ವಹಿಸಿದ ಪಾತ್ರದ ಪತಿಯಾಗಿ ಸ್ವತಃ ರಹಿಮಾನವ್ವ ಅವರಿಗೆ ಒಪ್ಪಿಗೆಯಾಗುವಂತೆ ಪಾತ್ರ ಪೋಷಿಸುತ್ತಾರೆ. ಇದು ಶಿವಣ್ಣನವರ ಅಭಿನಯ ಬದುಕಿನಲ್ಲಿ ಮರೆಯಲಾಗದ ಘಟನೆ.

# ಎಂ.ಪಿ. ಪ್ರಕಾಶ್‌ಗೂ ಕೇರ್‌ಮಾಡದ ಅಧಿಕಾರಿಗಳು

ಆಪ್ತಮಿತ್ರ ಜಯಣ್ಣನವರ ಪ್ರೀತಿಯೊಂದಿಗೆ ರಂಗಸಜ್ಜಿಕೆಗಳ ಮಾಲೀಕ ಶ್ರೀ ಎಚ್.ಎನ್. ಮಲ್ಲಿಕಾರ್ಜುನಸ್ವಾಮಿಗಳ ಅದ್ಧೂರಿಯಾದ ಜಗಮಗಿಸುವ ಸೀನ್ಸ್‌ಗಳೊಂದಿಗೆ ಸೋಗಿಯಲ್ಲಿ ಶಿವಣ್ಣನ ಕಂಪನಿಯ ವಸ್ತಿ. ಅಲ್ಲಿನ ಹವ್ಯಾಸಿ ಕಲಾವಿದರು ಚಿತ್ರನಟಿ ಶಶಿಕಲಾ ಅವರನ್ನು ಕರೆಸಿ ಅಷ್ಟೊತ್ತಿಗಾಗಲೇ ನಾಟಕದ ತಾಲೀಮು ಶುರು ಹಚ್ಚಿಕೊಂಡಿರುತ್ತಾರೆ. ಮೈಕ್ ಮೂಲಕ ವೀರಭದ್ರೇಶ್ವರ ಸ್ವಾಮಿ ಜಾತ್ರೆಯಲ್ಲಿ ಭಾರೀ ಪ್ರಚಾರ ಮಾಡುತ್ತಿರುತ್ತಾರೆ. ಶಿವಣ್ಣನ ಕಂಪನಿ ವಿದ್ಯುಚ್ಛಕ್ತಿ ಪರವಾನಗಿ ಸಿಗದೇ ಹೂವಿನ ಹಡಗಲಿಯಲ್ಲಿ ಕರೆಂಟ್‌ಗಾಗಿ ತಹಶೀಲ್ದಾರ ಕಚೇರಿಯಲ್ಲಿ ಠಿಕಾಣಿ ಹಾಕುತ್ತಾರೆ ಶಿವಣ್ಣ. ಎಂ.ಪಿ. ಪ್ರಕಾಶರು ಪ್ರಸಿದ್ಧ ವಕೀಲರು ಮತ್ತು ನಾಟಕ ಪ್ರೇಮಿಗಳು. ಶಿವಣ್ಣ ಎಂ.ಪಿ. ಪ್ರಕಾಶ ಮೊರೆ ಹೋಗುತ್ತಾರೆ. ಪವರ್ ಆಫೀಸಿನಲ್ಲಿ ಕೊಟ್ಟೂರಿನ ಜಾಗಟಗೇರಿ ಮನೆತನದವರು ಆಫೀಸರ್ ಆಗಿದ್ದು ಆ ಮೊದಲೇ ಸೋಗಿಯ ಹವ್ಯಾಸಿ ಕಲಾವಿದರು ಅವರನ್ನು ಸರಿಮಾಡಿ ಕೊಂಡಿರುತ್ತಾರೆ.

ಹೀಗಾಗಿ ಎಂ.ಪಿ. ಪ್ರಕಾಶ್ ವಕೀಲರು ಮದ್ದಾಂ ಬಂದು ಮನವಿ ಮಾಡಿದರೂ ಅಧಿಕಾರಿಗಳು ಕೇರ್ ಮಾಡುವುದಿಲ್ಲ. ಸೋಗಿಯ ವೀರಭದ್ರಸ್ವಾಮಿ ತೇರು ಎಳೆಯುವ ಹೊತ್ತಾದರೂ ಕರೆಂಟ್ ಆಫೀಸಿನಿಂದ ಶಿವಣ್ಣನಿಗೆ ಪರವಾನಗಿ ಸಿಗಲಿಲ್ಲ ಹೀಗಾಗಿ ಅಂದು ರಾತ್ರಿ ಶಿವಣ್ಣನ ಕಂಪನಿ ನಾಟಕ ಪ್ರದರ್ಶಿಸಲಿಲ್ಲ.

ಮರುದಿನ ಪರವಾನಗಿ ಸಿಕ್ಕು 'ವರನೋಡಿ ಹೆಣ್ಣು ಕೊಡು' ನಾಟಕ ಅತ್ಯಂತ ಸೊಗಸಾಗಿ ಸಾಗುತ್ತದೆ. ಎಂ.ಪಿ. ಪ್ರಕಾಶ್ ವಕೀಲರು ತಪ್ಪದೇ ನಾಟಕ ನೋಡಲು ಬರುತ್ತಾರೆ. ಪ್ರತಿ ನಾಟಕ ನೋಡಿದಾಗಲೂ 25ರೂಪಾಯಿಗಳ ಆಯೇರಿ ಮಾಡಿ ತಮ್ಮ ಪ್ರೀತಿ-ಪ್ರೋತ್ಸಾಹ ವ್ಯಕ್ತಪಡಿಸುತ್ತಾರೆ. ಒಂದೆರಡು ತಿಂಗಳ ಕಾಲ ಅದೇ ಊರಲ್ಲಿ ನಾಕೈದು ಬೇರೆ, ಬೇರೆ ನಾಟಕಗಳು ಪ್ರದರ್ಶನಗೊಂಡು ಅಲ್ಲಿಂದ ಹತ್ತಿರದ ಉತ್ತಂಗಿ ಗ್ರಾಮಕ್ಕೆ ಇವರ ನಾಟಕ ಕಂಪನಿ ಪ್ರಯಾಣ ಬೆಳೆಸುತ್ತದೆ. ಆ ಊರಲ್ಲಿ ಕೇವಲ 20ದಿವಸಗಳ ಕ್ಯಾಂಪ್ ಅಲ್ಲಿಂದ ಇಟಗಿಗೆ ಪ್ರಯಾಣ.

ಈ ಊರಲ್ಲಿ ನಿರುದ್ಯೋಗಿಗಳು, ಇಸ್ಪೀಟ್ ಆಟದಲ್ಲೇ ಕಾಲ ಕಳೆಯುವವರು ಜಾಸ್ತಿ. ಬೋರ್ಡಿಂಗ್ ಖರ್ಚಿಗೂ ಕಲೆಕ್ಷನ್ ಆಗಲಿಲ್ಲ. ಶಿವಣ್ಣನ ಪತ್ನಿ ಕಮಲ ತುಂಬು ಗರ್ಭಿಣಿ. 5ನೇ ಮಗುವಿಗೆ ಜನ್ಮ ನೀಡುತ್ತಾಳೆ. ಗಂಡು ಕೂಸು ಹುಟ್ಟಿದ ಮೂರನೇ ದಿನಕ್ಕೆ ತೀರಿಕೊಳ್ಳುತ್ತದೆ.

ಕಲಾವಿದರಿಗೆ ಊಟಕ್ಕೂ ಕಷ್ಟವಾಗುತ್ತದೆ. ಆ ಊರಲ್ಲಿ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಕ್ಯಾಂಪ್ ಹಾಕಿರುವುದನ್ನು ತಿಳಿದುಕೊಂಡ ಮೂರು ದಿವಸದ ಹಸಿಹಸಿ ಬಾಣಂತಿ ಕಮಲಮ್ಮ ಶಿವಣ್ಣನಿಗೆ ಗೊತ್ತಿಲ್ಲದಂತೆ ಹೋಗಿ ಸಂತಾನಶಕ್ತಿ ಹರಣ ಆಪರೇಷನ್ ಮಾಡಿಸಿಕೊಂಡು ಅದರಿಂದ ಬಂದ ನೂರಿಪ್ಪತ್ತು ರೂಪಾಯಿಗಳನ್ನು ತಂದು ಗಂಡನ ಕೈಗಿಟ್ಟು 'ತಗೋ ಬೋರ್ಡಿಂಗ್ ನಡೆಸು' ಅಂತಾರೆ. ಅಲ್ಲಿಂದ ಕಮಲಮ್ಮನ ಆರೋಗ್ಯದಲ್ಲಿ ಏರುಪೇರು ಶುರುವಿಟ್ಟುಕೊಂಡಿತು. ಕಮಲಮ್ಮ ರಕ್ತಹೀನತೆಯಿಂದ ನರಳತೊಡಗುತ್ತಾರೆ.

ಅಲ್ಲಿಂದ ಇವರ ಕ್ಯಾಂಪ್ ಕೋಗಳಿ ಗ್ರಾಮಕ್ಕೆ ಶಿಫ್ಟ್ ಆಗುತ್ತದೆ. ಕೋಗಳಿ ಕಲಾವಿದರ ಗ್ರಾಮ. ಹಾರ್ಮೋನಿಯಂ, ಪಿಟೀಲು, ತಬಲಾ ನುಡಿಸುವವರು, ಹಾಡುಗಾರರು, ನಟನಟಿಯರಿಂದ ತುಂಬಿದ ಕಲಾಗ್ರಾಮ. ಎಂ.ಎಲ್.ಎ. ಮರುಳಸಿದ್ಧನಗೌಡರು ಕಂಪನಿ ಆರಂಭಿಸಲು ಎಲ್ಲ ನೆರವು ನೀಡುತ್ತಾರೆ. ಎಸ್.ಎಂ. ವಿಶ್ವನಾಥಯ್ಯನವರ ಮಾತುಗಳೆಂದರೆ ಊರಿಗೆಲ್ಲ ವೇದವಾಕ್ಯ.

ವ್ಯವಸ್ಥಿತವಾಗಿಯೇ ಕ್ಯಾಂಪ್ ಶುರುಮಾಡಲು ವಾರವೊಪ್ಪತ್ತು ಸಿದ್ಧತೆಗಳು, ಅದಕ್ಕಾಗಿ ಊರಿನ ಪ್ರಮುಖರನ್ನು ಕರೆಸಿದ ವಿಶ್ವನಾಥಯ್ಯ, ಪಂಪಾಪತಿ ಇನ್ನೂ ಅನೇಕರು ಸೇರಿ ಒಂದು ಚೀಲ ಬಿಳಿಜೋಳ ಒಣ ಮೆಣಸಿನಕಾಯಿ, ಬೇಳೆ, ತರಕಾರಿ ತರಿಸಿ ಬೋರ್ಡಿಂಗ್‌ಗೆ ಯಾವುದೇ ಕೊರತೆಯಾಗದಂತೆ ನೋಡಿಕೊಳ್ಳುತ್ತಾರೆ. ಒಂದಲ್ಲ ಎರಡಲ್ಲ ಆರು ತಿಂಗಳ ಕಾಲ ಕೋಗಳಿ ಗ್ರಾಮ ಇವರ ಕಂಪನಿಯನ್ನು ಸಲಹುತ್ತದೆ. (ವಿಶ್ವನಾಥಯ್ಯ ಶಿವಣ್ಣನ ತಾತನಿಗೆ 1918ರಲ್ಲಿ ಕಂಪನಿ ಆರಂಭಿಸಲು ನೆರವಾದ ಶಬ್ದ ಮಣಿ ಕೊಟ್ರಯ್ಯನವರ ಮಗ) ಗಾಳಿಪಟದ ಮಲ್ಲಮ್ಮನೆಂದೇ ಖ್ಯಾತಿ ಗಳಿಸಿದ ಹೇಮರೆಡ್ಡಿ ಮಲ್ಲಮ್ಮ ನಾಟಕದ ಮೂಲಕವೇ ಕ್ಯಾಂಪ್ ಆರಂಭ. ಎಂ.ಎಲ್.ಎ. ಮರುಳಸಿದ್ಧನಗೌಡ ಹಾಗೂ ಅವರ ಸಹಧರ್ಮಿಣಿ ಅನ್ನಪೂರ್ಣಮ್ಮ ನಾಟಕ ಮುಗಿಯುವವರೆಗೂ ನೋಡಿ ಸಂಭ್ರಮಿಸುತ್ತಾರೆ. ಎಂ.ಎಲ್.ಎ. ಅವರು ಸಂತಸದಿಂದ ಆಗಿನ ಕಾಲದಲ್ಲಿ (1981)ಐದುನೂರು ರೂಪಾಯಿ ಆಯೇರಿ ಮಾಡುತ್ತಾರೆ.

ಶಿವಣ್ಣನ ತಮ್ಮ ಮಂಜುನಾಥ ಮಲ್ಲಮ್ಮನ ಪಾತ್ರದಲ್ಲಿ, ಶಿವಣ್ಣ ಹುಚ್ಚು ಭರಮರೆಡ್ಡಿಯಾಗಿ, ಕಮಲಮ್ಮ ನಾಗಮ್ಮನಾಗಿ, ಕಲಾಕಿನ್ನರ ಡಿ. ದುರ್ಗಾದಾಸ ಮಲ್ಲಿಕಾರ್ಜುನ ಮತ್ತು ವೇಮನನಾಗಿ ನಾಟಕವನ್ನು ಕಳೆಗಟ್ಟಿಸುತ್ತಿದ್ದರು. ಅಷ್ಟುಮಾತ್ರವಲ್ಲ ದೊಡ್ಡವಾಡಸಿದ್ದಯ್ಯನವರ ಪತ್ನಿ ಶಾಂತಾಬಾಯಿ, ಕೆ.ಎನ್. ಸಾಳುಂಕೆಯವರ ಪತ್ನಿ ನೀಲಮ್ಮ, ಶಿರಹಟ್ಟಿ ವೆಂಕೋಬರಾಯರ ಕಂಪನಿಯ ಹಿರಿಯ ಕಲಾವಿದ ರಾಮಣ್ಣ ತಮ್ಮ 89ನೇ ವಯಸ್ಸಿನಲ್ಲೂ ಸೊಗಸಾಗಿ ಅಭಿನಯಿಸುತ್ತಿದ್ದರು. ಖಾದಿಸೀರೆ, ಮುಂಡೇಮಗ, ಲಂಕಾದಹನ ಮುಂತಾದ ನಾಟಕಗಳಿಗೆ ಖಾಜಾಮಿಯ ಮಾಸ್ತರ, ಸುರೇಶ್‌ಕುಟ್ಟಿ, ಕೊಟ್ಟೂರು ಚನ್ನಬಸವಣ್ಣ, ಜುಬೇದಾ ಬೇಗಂ ಆಗಮಿಸಿ ಕ್ಯಾಂಪ್ ಕಳೆಗಟ್ಟಿಸಿದರು. ನಾಟಕವಿಲ್ಲದ ರಾತ್ರಿ ಜುಬೇದಾ ಬೇಗಂ ಅವರಿಂದ ಸಂಗೀತ ಕಛೇರಿ. ಕೋಗಳಿ ಕ್ಯಾಂಪ್‌ನಲ್ಲಿ ಈ ಎಲ್ಲ ಹಿರಿಯ ಕಲಾವಿದರಿಗೆ ಕೈತುಂಬ ಸಂಬಳ, ಗೌರವ, ಸತ್ಕಾರಗಳು ಲಭಿಸಿದವು. ಸುರೇಶ್ ಕಟ್ಟಿಯವರ ಆಂಜನೇಯನ ಪಾತ್ರ, ಖಾಜಾಮಿಯಾ ಮಾಸ್ತರರ ವಿಶ್ವಾಮಿತ್ರ ಪಾತ್ರಗಳು ಅಲ್ಲಿನ ಕ್ಯಾಂಪ್‌ಗೇ ಮುಕ್ತಾಯ. ಅದಾದ ಕೆಲವೇ ದಿನಗಳಲ್ಲಿ ಈ ಇಬ್ಬರು ರಂಗಚೇತನ ತೀರಿಕೊಳ್ಳುತ್ತಾರೆ.

ಆ ಊರಿನಿಂದ ನಾಲ್ಕು ಚಕ್ಕಡಿ ಗಾಡಿಗಳಲ್ಲಿ ಈ ಎಲ್ಲ ಕಲಾವಿದರನ್ನು ಬೀಳ್ಕೊಡುವಾಗ ಮೊಸರು ಬುತ್ತಿ ಕಟ್ಟಿ ಊರಿನ ಜನರೆಲ್ಲ ಅತ್ಯಂತ ಹಾರ್ದಿಕವಾಗಿ ಕಣ್ಣೀರು ಹಾಕುತ್ತಾರೆ. ಆ ಸುಸಂಸ್ಕೃತ ಗ್ರಾಮದ ಹೃದಯಸ್ಪರ್ಶಿ ಅನುಭವಗಳನ್ನು ಶಿವಣ್ಣನ ರಂಗತಂಡ ಜೀವನ ಪರ್ಯಂತ ಮರೆಯಲಾರರು. ತುಂಬ ಅಪರೂಪದ ಆರ್ದ್ರತೆಯ ಅನುಭವ ಶಿವಣ್ಣ ಇವತ್ತಿಗೂ ಕೃತಜ್ಞತೆಯಿಂದ ನೆನೆಯುತ್ತಾರೆ.

ಹಾಗೆ ನೋಡಿದರೆ ಆ ಕಾಲದ ಬಳ್ಳಾರಿ ಜಿಲ್ಲೆಯ ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಶಿವಣ್ಣನವರ ಜಯಲಕ್ಷ್ಮಿ ನಾಟಕ ಸಂಘದ ಮೊಕ್ಕಾಂಗಳು ಆಗುತ್ತವೆ. ಆ ಮೂಲಕ ಇವರ ಕಂಪನಿಯು ಗ್ರಾಮೀಣ ರಂಗಭೂಮಿಗೆ ಅಗಾಧವಾದ ರಂಗಸೇವೆ ಸಲ್ಲಿಸಿದ ರಂಗ ಸಂಸ್ಥೆಯಾಗಿ ತನ್ನ ಕ್ರಿಯಾಶೀಲ ಚಟುವಟಿಕೆಗಳನ್ನು ನಿರಂತರವಾಗಿ ಮೆರೆಯುತ್ತಲೇ ಸಾಗುತ್ತದೆ. ಅವರ ಪತ್ನಿ, ತಮ್ಮ, ಮೂವರು ಮಕ್ಕಳು ಕೂಡಾ ಕಲಾವಿದರೇ ಆಗಿರುತ್ತಾರೆ. ತಮ್ಮ ಮಂಜುನಾಥನ ಪತ್ನಿ ರಾಜೇಶ್ವರಿ ಕೂಡಾ ಉತ್ತಮ ಅಭಿನೇತ್ರಿಯೇ ಆಗಿರುವುದು ಸಂಘಕ್ಕೆ ಪ್ಲಸ್ ಪಾಯಿಂಟ್. ಅಲ್ಲಿಂದ ಶಿವಣ್ಣನವರ ಪ್ರಯಾಣ ಮತ್ತೀಹಳ್ಳಿ ಪಂಚಾಯ್ತಿ ಕಡೆಗೆ ನಡೆಯುತ್ತದೆ. ಅಲ್ಲಿನ ಛೇರ್ಮನ್ ಇವರಿಗೆ ನೇರವಾಗಿ ಕಂಪನಿ ಚಾಲೂ ಮಾಡಲು ಪೂರ್ಣ ಪ್ರಮಾಣದ ಸಹಾಯ ಮಾಡುತ್ತಾರೆ. ಆದರೆ ಅಲ್ಲೋರ್ವ ಡಾಕ್ಟರ್ ತುಂಬಾ ಎಡವಟ್ಟು ಆತ ನಾಟಕದ ವಿರೋಧಿ ಮನುಷ್ಯ ನಾಟಕದವರೆಂದರೆ ಅಸ್ಪೃಶ್ಯರು. ಸಂಸ್ಕೃತಿ

ನಾಶಮಾಡುವವರು ಸಮಾಜ ಹಾಳು ಮಾಡುವವರು ನಾಟಕ ನೋಡುವುದರಿಂದ ನಿದ್ರೆಗೆಟ್ಟು ಜನರ ಬದುಕುಬಾಳ್ವೆ ಆರೋಗ್ಯ ಹಾಳಾಗುತ್ತದೆ. ಯುವಕರು ನಾಟಕದ ನಟಿಯರನ್ನು ನೋಡಿ ಅವರ ಬೆನ್ನುಹತ್ತಿ ಹೋಗುತ್ತಾರೆ. ರಾತ್ರಿ ನಾಟಕವಾಡುತ್ತಿದ್ದರೆ ಕಳ್ಳಕಾಕರ ಹಾವಳಿ ಹೆಚ್ಚಾಗುತ್ತದೆ. ಕಂಪನಿ ಹಾಕಿದ ಕಣದ ಜಾಗ ಹಾಳಾಗುತ್ತದೆ. ಹೊರಗಡೆಯಿಂದ ಬಂದವರು ನಮ್ಮ ಊರಿನ ಹಣ ಲೂಟಿ ಹೊಡೆದುಕೊಂಡು ಹೋದರೆ ಊರು ಆರ್ಥಿಕವಾಗಿ ಹಿಂದುಳಿಯುತ್ತದೆ. ಇಂತಹ ಅನೇಕ ಬಗೆಯ ಹತ್ತು ಹಲವು ನಾಟಕ ವಿರೋಧಿ ಅಭಿಪ್ರಾಯಗಳನ್ನು ತೋರ್ಪಡಿಸುತ್ತಿದ್ದರು ಆ ಡಾಕ್ಟರ್.

ಇಂತಹ ವಿರೋಧಾಭಾಸಗಳ ನಡುವೆ ಎರಡು ದಿನಕ್ಕೊಮ್ಮೆಯಾದರೂ ಪ್ರದರ್ಶನ ಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರಕಲಿಲ್ಲ. ಕ್ಯಾಂಪ್ ಸಾಸ್ವೆಹಳ್ಳಿ, ಕುಣೇ ಮಾದಿಹಳ್ಳಿಗಳಲ್ಲಿ ಕೆಲವು ದಿನ ಕ್ಯಾಂಪ್ ಮಾಡಿ ಮಾದಿಹಳ್ಳಿಗೆ ಹೋದಾಗ ಅಲ್ಲಿನ ಯುವಕರು ಉತ್ಸುಕ ರಾಗಿದ್ದರು. ಅಷ್ಟೊತ್ತಿಗಾಗಲೇ ನಾಟಕವೊಂದರ ಸಿದ್ಧತೆಯಲ್ಲಿದ್ದ ಯುವಕರಿಗೆ ನಟಿಯೊಬ್ಬರ ಕೊರತೆ ಇತ್ತು. ಶಿವಣ್ಣನವರ ಪತ್ನಿ ಆ ಕೊರತೆ ನೀಗಿಸಿದರು. ಕಮಲಮ್ಮನವರಿಗೆ ಒಳ್ಳೆಯ ಸಂಭಾವನೆಯೂ ಸಿಗುತ್ತದೆ. ಅಲ್ಲಿಂದ ಜಗಳೂರು ತಾಲ್ಲೂಕಿಗೆ ರಂಗ ಪಯಣ.

ಜಗಳೂರು ತಾಲ್ಲೂಕಿನ 'ಸೊಕ್ಕೆ' ದೊಡ್ಡಗ್ರಾಮವೇ. ಅಲ್ಲಿ ಲಿಂಗವಂತರ ಪ್ರಾಬಲ್ಯ. ಈ ಗ್ರಾಮದಲ್ಲಿ ಶಿವಣ್ಣನವರ ಕ್ಯಾಂಪ್. ತುರುವನೂರಿನ ಪೇಂಟರ್ ತಿಪ್ಪೇಸ್ವಾಮಿ ತಮ್ಮ ಮಗಳು ರಾಜೇಶ್ವರಿ ಅಭಿನಯ ಕಲಿಯಲೆಂದು ಶಿವಣ್ಣನ ಕಂಪನಿಯಲ್ಲಿ ಅವರ ಪತ್ನಿ ಕಮಲಮ್ಮನವರ ಬಳಿ ಬಿಟ್ಟಿದ್ದರು. ಅಕ್ಷರಶಃ ರಾಜೇಶ್ವರಿ ಅಭಿನಯ ಕಲಿಯುವು ದರೊಂದಿಗೆ ಶಿವಣ್ಣನವರ ತಮ್ಮ ಮಂಜುನಾಥನಲ್ಲಿ ಅನುರಕ್ತಳಾಗಿ ಮುಂದಿನ ಕಾಂಪು ಗಳಲ್ಲಿ ಇಬ್ಬರೂ ಸಂಗಾತಿಗಳಾದರು. ಆ ಮೂಲಕ ಶ್ರೀ ಜಯಲಕ್ಷ್ಮಿ ನಾಟಕ ಸಂಘಕ್ಕೆ ಆಸ್ತಿ ಆದರು.

ಸೊಕ್ಕೆ ಕ್ಯಾಂಪಿನಲ್ಲಿ ದೀಟೂರು ಹಾಲಪ್ಪ ಇವರ ಕಂಪನಿ ಮ್ಯಾನೇಜರ್ ಆಗಿದ್ದರು. ಸೊಕ್ಕೆ ಕ್ಯಾಂಪ್ ಚೆನ್ನಾಗಿ ನಡೆಯುತ್ತಿತ್ತು. ಅಲ್ಲಿನ ಲೈನ್‌ಮನ್‌ಗೆ ಪ್ರತಿದಿನ ಹತ್ತು ರೂಪಾಯಿಕೊಟ್ಟು ಅಕ್ಕಪಕ್ಕದ ಮನೆಗಳಿಂದಲೋ ಡೈರೆಕ್ಟ್ ಆಗಿಯೋ ಕರೆಂಟ್ ಪಡೆಯುತ್ತಿದ್ದರು. ಅದೇ ತಾಲ್ಲೂಕಿನ ಶ್ರೀ ಜಿ.ಎಚ್. ಅಶ್ವತ್ಥರೆಡ್ಡಿ ಆಗ ಇಂಧನ–ವಿದ್ಯುಚ್ಛಕ್ತಿ ಮಂತ್ರಿಗಳಾಗಿದ್ದರು. ಕಾರ್ಯನಿಮಿತ್ತ ಸೊಕ್ಕೆಯ ಕಾರ್ಯಕ್ರಮಕ್ಕೆ ಆಗಮಿಸಿದ ಸಚಿವರಿಗೆ ಶಾಲಾ ಉಪಾಧ್ಯಾಯರೊಬ್ಬರು ಶಿವಣ್ಣ ಈ ರೀತಿ ಕರೆಂಟ್ ಪಡೆಯುತ್ತಿರುವ ವಿವರಗಳನ್ನು ತಿಳಿಸಿಬಿಟ್ಟರು. ಸಚಿವರು ಶಿವಣ್ಣನನ್ನು ಕರೆಕಳಿಸಿದರು. ಹೌದು ನಮ್ಮದು ಬಡಕಂಪನಿ ಹೀಗೆ ಮಾಡಿದೆವೆಂದು ಒಪ್ಪಿಕೊಳ್ಳುತ್ತಾರೆ. ರಂಗಕಲಾವಿದರ ಕಷ್ಟಗಳನ್ನರಿತ ಸಚಿವ ಅಶ್ವತ್ಥರೆಡ್ಡಿ ಒಂದು ಸಾವಿರ ರೂಪಾಯಿ ಶಿವಣ್ಣನ ಕೈಗಿಟ್ಟು ಕಾನೂನು ಮತ್ತು ಕ್ರಮಬದ್ಧವಾಗಿ ವಿದ್ಯುಚ್ಛಕ್ತಿ ಬಳಸಿಕೊಳ್ಳಲು ತಿಳಿಸುತ್ತಾರೆ.

ಅಲ್ಲಿಂದ ತೂಲಹಳ್ಳಿ ಬಹಳ ಹತ್ತಿರ. ಹೀಗಾಗಿ ಅಲ್ಲಿನ ಹಿಟ್ಟಿನ ಗಿರಣಿ ಮಾಲೀಕರಾದ ಶಿವಮೂರ್ತೆಪ್ಪ ಎಂಬುವರು ತಮ್ಮ ಕಣದಲ್ಲಿ ಬಂದು ದಿನಬಿಟ್ಟು ದಿನ ನಾಟಕ ಪ್ರದರ್ಶಿಸಲು ಕೋರುತ್ತಾರೆ. ಆ ಊರಲ್ಲಿ ಲಿಂಗವಂತರ ಒಳಪಂಗಡಗಳ ನಡುವೆ ವೈಮನಸ್ಸು, ಹೀಗೆ ಒಂದಿನ ಸೊಕ್ಕೆ ಒಂದಿನ ತೂಲಹಳ್ಳಿಯಲ್ಲಿ ನಾಟಕ ಆಡುತ್ತಾರೆ. ತೂಲಹಳ್ಳಿಯ ಶಿವಮೂರ್ತೆಪ್ಪ ಕೊಟ್ಟೂರಲ್ಲಿ ಮನೆ ಮಾಡಿಕೊಂಡಿರುತ್ತಾರೆ. ಅವರ ಆಸ್ತಿಪಾಸ್ತಿಯೆಲ್ಲ ತೂಲಹಳ್ಳಿಯಲ್ಲೇ.

ಪಂಚಾಯ್ತಿ ಅಧ್ಯಕ್ಷರೊಂದು ದಿನ ತಮ್ಮ ಪಟಾಲಂ ಜತೆಗೆ ನಾಟಕ ನೋಡಲು ಬರುತ್ತಾರೆ. ಹಾಗೆ ಬಂದವರು "ನಾಳೆ ನಿಮ್ಮ ಕ್ಯಾಂಪ್ ಕ್ಲೋಜ್ ಮಾಡಬೇಕೆಂದು" ಆಜ್ಞಾಪಿಸುತ್ತಾರೆ. ಹೊಟ್ಟೆಪಾಡು ಕೇಳಬೇಕಲ್ಲ ಎಂದಿನಂತೆ ಬಣ್ಣ ಬಳಿದುಕೊಂಡು ನಾಟಕ ಶುರು ಮಾಡುತ್ತಾರೆ. ಹಿಂದಿನ ರಾತ್ರಿ ಛೇರ್ಮನ್ ಸಾಹೇಬರು ಆಜ್ಞಾಪಿಸಿದರೂ ಮತ್ತೆ ನಾಟಕ ಶುರು ಮಾಡುತ್ತಿದ್ದಾರೆಂಬ ಸುಳಿವು ಸಿಕ್ಕು ಯಾರೊಬ್ಬ ಪ್ರೇಕ್ಷಕರು ಬಾರದಂತೆ ಛೇರ್ಮನ್ ಆದೇಶವನ್ನು ಅವರ ಬಲಗೈ ಬಂಟರು ಜಾರಿ ಮಾಡುತ್ತಾರೆ. ಎಲ್ಲ ಪ್ರಸಾದನ ಕಳಚಿ ಬಣ್ಣ ಒರೆಸಿಕೊಂಡು, ಮಾಡಿಟ್ಟುಕೊಂಡಿದ್ದ ಚಿತ್ರಾನ್ನ ತಿಂದು ನಿದ್ರೆ ಬಾರದೇ, ನಾಟಕವಿಲ್ಲದೇ ಆ ರಾತ್ರಿಯನ್ನು ಕರಾಳವಾಗಿ ಕಳೆಯಬೇಕಾಗಿ ಬರುತ್ತದೆ. ಹಳ್ಳಿಯ ಫ್ಯೂಡಲ್ ದೊರೆಯ ಸಣ್ಣ ಉದಾಹರಣೆ ಇದು. ಅಲ್ಲಿಂದ ಹರಪನಹಳ್ಳಿ ತಾಲ್ಲೂಕು ಚಿಗಟೇರಿಗೆ ಕ್ಯಾಂಪ್ ಶಿಫ್ಟ್. ಅಲ್ಲಿ ಒಂದೂವರೆ ತಿಂಗಳ ಕಾಲ ಆಶಾದಾಯಕ ಫಲಿತಾಂಶ. ಅಲ್ಲಿನ ಶಾಂತವೀರನಗೌಡ ಹಾಗೂ ಅವರ ಸೋದರ ಮಲ್ಲನಗೌಡ ಸಹಕರಿಸುತ್ತಾರೆ. ಶಾಂತವೀರಪ್ಪನವರು ಕೆಲ ವರ್ಷಗಳ ನಂತರ ದಾವಣಗೆರೆ ಜಿಲ್ಲಾ ಪಂಚಾಯ್ತಿ ಅಧ್ಯಕ್ಷರಾಗುತ್ತಾರೆ. ಅಲ್ಲಿನ ಉತ್ಸಾಹಿ ತರುಣ ಯುನಸ್, ಆತನ ಸ್ನೇಹಿತರು ಇವರಿಗೆ ತುಂಬಾ ನೆರವಾಗುತ್ತಾರೆ. ಚಿಗಟೇರಿ ನಾರದ ಮುನೇಶ್ವರ ಜಾತ್ರೆ, ಆಗ ಎರಡೆರಡು ಪ್ರದರ್ಶನಗಳಾಗುತ್ತವೆ. ಖಾದಿಸೀರೆ ನಾಟಕದ ಭರ್ಜರಿ ಪ್ರಯೋಗ. ಎಂ.ಎಲ್.ಎ. ಶಾಮಲಾದೇವಿ ಪಾತ್ರದಲ್ಲಿ ಓಬಳೇಶ್ ಪತ್ನಿ ಯಶೋಧರಮ್ಮ, ಭರಣನಾಗಿ ಶಿವಣ್ಣ, ಶಾಸ್ತ್ರಿಯಾಗಿ ಮಂಜುನಾಥ ಕಿರಣನಾಗಿ ನಟರಾಜ ಹೀಗೆ ನಾಟಕಗಳು ಸುಗಮವಾಗಿ ಸಾಗಿ "ರೇಣುಕಾಮಹಾತ್ಮೆ" ನಾಟಕಕ್ಕೆ ನಾಂದಿ ಹಾಡುತ್ತಾರೆ.

ರೇಣುಕೆಯ ಪಾತ್ರಕ್ಕೆ ಜುಬೇದಾಬೇಗಂ, ಜಮದಗ್ನಿ ಪಾತ್ರಕ್ಕೆ ಇಟಗಿ ಚಿದಾನಂದಪ್ಪ, ಪರಶುರಾಮನ ಪಾತ್ರಕ್ಕೆ ಎಲಿವಾಳ ಸಿದ್ದಯ್ಯ, ವ್ಹಾ ! ಎನ್ನುವಂತೆ ನಾಟಕ ತುಂಬಿದ ರಂಗಮಂದಿರದಲ್ಲಿ ವಾರಗಟ್ಟಲೇ ನಡೆಯುತ್ತದೆ. ನಿತ್ಯವೂ ರಾತ್ರಿ 9.30ರ ಬಸ್ಸಿಗೆ ಹರಪನಹಳ್ಳಿಯಿಂದ ಇಟಗಿ ಚಿದಾನಂದಪ್ಪ ಬಂದು ಜಮದಗ್ನಿ ಪಾತ್ರ

ಮಾಡುತ್ತಿರುತ್ತಾರೆ. ಒಂದಿನ ಬಸ್ ಬಾರದೇ ಚಿದಾನಂದಪ್ಪ ಬರುವುದಿಲ್ಲ. ಹತ್ತೂವರೆಯಾದರೂ ಬಾರದಿರುವುದಕ್ಕೆ ಎಲ್ಲರಲ್ಲೂ ಆತಂಕ ! ಟಿಕೆಟ್ ಪಡೆದು ತುಂಬಿದ ಸಭಾಂಗಣ.

ನಾಟಕ ಯಾವುದೇ ಕಾರಣಕ್ಕು ನಿಲ್ಲಿಸಲಾಗುವುದಿಲ್ಲ. ಆದರೆ ಜಮದಗ್ನಿ ಪಾತ್ರ ? ಶಿವಣ್ಣನ ಹಿರಿಯಮಗ ಹದಿನೇಳು ವರುಷದ ನಟರಾಜ ಆ ಪಾತ್ರ ಮಾಡಲು ಮುಂದೆ ಬರುತ್ತಾನೆ. ಹಿರಿಯ ರಂಗನಟಿ ಜುಬೇದಾಬೇಗಂ ರೇಣುಕೆಯ ಪಾತ್ರ, ರೇಣುಕೆಗೆ ಗಂಡನಾಗಿ ಇಷ್ಟು ಎಳೆಯ ವರುಷದ ಹುಡುಗ ಪಾತ್ರ ಮಾಡುವುದು ಹೇಗೆಂಬ ಆತಂಕ ಶಿವಣ್ಣ, ಎಲಿವಾಳ ಸಿದ್ದಯ್ಯ, ಜುಬೇದಾಬೇಗಂ ಎಲ್ಲರಲ್ಲೂ ! ಆದರೆ ಪವಾಡ ಸದೃಶವಾಗಿ ಪುಟ್ಟ ಹುಡುಗ ನಟರಾಜ ಜಮದಗ್ನಿಯಾಗಿ ಸ್ವತಃ ಶಿವಣ್ಣ ಮತ್ತು ಎಲಿವಾಳ ಸಿದ್ದಯ್ಯನವರೂ ಮೆಚ್ಚುವಂತೆ ಕಬ್ಬಿಣದ ಕಡಲೆಯಂತಹ ಸಂಭಾಷಣೆಗಳನ್ನು ಅತ್ಯಂತ ಅಚ್ಚುಕಟ್ಟಾಗಿ ಹೇಳುವುದಲ್ಲದೇ ಅರ್ಥಪೂರ್ಣವಾಗಿ ಶರೀರ–ಶಾರೀರ ಭಾಷೆಗಳೊಂದಿಗೆ ನಟರಾಜ ಪ್ರೇಕ್ಷಕರ ಮನಸು ಗೆಲ್ಲುತ್ತಾನೆ. ನಾಲ್ಕೈದು ದಿವಸ ನಟರಾಜನೇ ಜಮದಗ್ನಿ ಪಾತ್ರ ಮಾಡುತ್ತಾನೆ. ಎಷ್ಟಾದರೂ ಕಲಾವಿದರ ಮಕ್ಕಳಲ್ಲವೇ ? ಎಂದು ಜನ ಮೆಚ್ಚುಗೆ ತೋರುತ್ತಾರೆ. ಅಲ್ಲಿಂದ ಕುಂಚೂರು ನೀಲಗುಂದ, ಬೆಣ್ಣೆಹಳ್ಳಿ ಮುಂತಾದ ಹಳ್ಳಿಗಳಲ್ಲಿ ಮೊಕ್ಕಾಂ ಮಾಡಿ ಪದ್ಮಾಕೂಡ್ಲಿಗಿ, ಮನಸೂರ ಸುಭದ್ರಮ್ಮ, ಡಿ.ದುರ್ಗಾದಾಸ, ಹೊಳಗುಂದಿ ಸೋಮಣ್ಣ, ಕಸ್ತೂರಮ್ಮ ಇನ್ನೂ ಅನೇಕ ಹೆಸರಾಂತರು ಕಂಪನಿಗೆ ಅತಿಥಿ ನಟರಾಗಿ ಆಗಮಿಸಿ ಕಂಪನಿಗೆ ಮತ್ತು ಶಿವಣ್ಣನಿಗೆ ನೆರವಾಗುತ್ತಾರೆ. ಕುಂಚೂರಲ್ಲಿ ಇಮಾಮ್ ಎಂಬುವರು ಇವರಿಗೆ ಸೌದೆ, ಜೋಳ, ಬೇಳೆ ತಂದು ಕೊಟ್ಟು ಕಂಪನಿಯ ಬೋರ್ಡಿಂಗ್‌ಗೆ ನೆರವಾಗುತ್ತಾರೆ. ಅಷ್ಟೇ ಯಾಕೆ ಎತ್ತಿನ ಗಾಡಿಗಳಲ್ಲಿ ಕಂಪನಿಯ ಸಾಮಾನು ಸರಂಜಾಮುಗಳನ್ನು ಇವರ ತಾಯಿಯ ತವರೂರು ಕಡತಿಗೆ ಕೊಂಡೊಯ್ಯುವಲ್ಲಿ ಇಮಾಮ್ ಮಾಡಿದ ಸಹಾಯವನ್ನು ಶಿವಣ್ಣ ಇಂದಿಗೂ ನೆನಪಿಟ್ಟುಕೊಂಡಿದ್ದಾರೆ.

ಅದೇ ವೇಳೆಗೆ ಎ. ಭದ್ರಪ್ಪನವರು ದಾವಣಗೆರೆಯ ಅರುಣ ಚಿತ್ರಮಂದಿರದ ಬಳಿ ಕೆ.ಬಿ.ಆರ್. ಡ್ರಾಮಾ ಕಂಪನಿಯಲ್ಲಿ ಸರ್ವಮಂಗಳ ನಾಟಕ ಸಂಘ ಎಂಬ ಹೆಸರಿನ ನಾಟಕ ಸಂಘ ಆರಂಭಿಸಿ 'ರೂಪವತಿ' ಎಂಬ ನಾಟಕವನ್ನು ಶಿವಣ್ಣನವರ ಸಹಕಾರದೊಂದಿಗೆ ದಿ. 24–10–1984ರಂದು ಪ್ರದರ್ಶಿಸುತ್ತಾರೆ. 20ಕ್ಕೂ ಹೆಚ್ಚು ಪ್ರಯೋಗಗಳಾಗುತ್ತವೆ.

ಕುಂಚೂರಿನಲ್ಲಿದ್ದ ಶಿವಣ್ಣನ ಕಂಪನಿಯ ಎಲ್ಲ ಕಲಾವಿದರು ಭದ್ರಪ್ಪನವರ ಸರ್ವ ಮಂಗಳ ಸಂಘಕ್ಕೆ ಆಗಮಿಸಿ ಬೆಳ್ಳಿ ಬಂಗಾರ ನಾಟಕದ ಮೂಲಕ ಅವರಿಗೆ ಕೆಲಕಾಲ ನೆರವಾಗುತ್ತಾರೆ.

ನಂತರ ಚಿಂದೋಡಿಯವರ ಕೆ.ಬಿ.ಆರ್. ಕಂಪನಿಯಲ್ಲೇ ಶಿವಣ್ಣನ ತಂಡ ಸ್ವತಂತ್ರವಾಗಿ ತಮ್ಮ ಕಂಪನಿಯ ಪೆಟೆಂಟ್ ನಾಟಕ 'ಮುಂಡೇಮಗ' ಆರಂಭಿಸುತ್ತಾರೆ. ಶಿವಣ್ಣನವರ ಕ್ಲಾಸ್‌ಮೇಟ್ ಎಚ್.ಎನ್. ಷಡಾಕ್ಷರಪ್ಪ ಸಂಪಾದಕತ್ವದ ಜನತಾವಾಣಿ ಪತ್ರಿಕೆಯಲ್ಲಿ ಫ್ರೀಯಾಗಿ ಮುಂಡೇಮಗ ನಾಟಕದ ಜಾಹೀರಾತು ಹಾಕುತ್ತಾರೆ. ಕಿಕ್ಕಿರಿದು ರಂಗ ಮಂದಿರ ತುಂಬಿ ಬೇರೆ ಬೇರೆ ರಂಗ ಪ್ರಯೋಗಗಳು ಜರುಗುತ್ತವೆ. ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳು ದಿನಾಲು ನಾಟಕ ನೋಡಲು ಬರುವಷ್ಟು ಪ್ರಯೋಗಗಳು ಜನಪ್ರಿಯವಾಗುತ್ತವೆ. ಇವರ ನಾಟಕಗಳ ಭರ್ಜರಿ ಪ್ರಯೋಗದಿಂದಾಗಿ ಬೆಳಗಾವಿ ಯಲ್ಲಿದ್ದ ಚಿಂದೋಡಿ ಲೀಲಾ ಅವರು 40–60 ಪರ್ಸಂಟೇಜ್ ಒಪ್ಪಂದಕ್ಕೆ ತಕರಾರು ತೆಗೆದು 70 ಭಾಗ ತಮಗೆ 30 ಭಾಗ ಶಿವಣ್ಣನಿಗೆ ಕೊಡುವುದಾಗಿ ಹೇಳುತ್ತಾರೆ. ಹೀಗಾಗಿ ಕ್ಯಾಂಪ್ ಸ್ಥಗಿತಗೊಳಿಸಿದ ಶಿವಣ್ಣ ತನ್ನ ತಾಯಿಯ ಊರು ಕಡತಿಯಲ್ಲಿಟ್ಟಿದ್ದ ರಂಗಸಜ್ಜಿಕೆಗಳನ್ನು ತರಿಸಿ ಅವುಗಳಿಗೆ ಪುನರ್ ಪೇಂಟ್ ಮಾಡಿಸಿ ವ್ಯವಸ್ಥಿತ ವಾಗಿಸಿಕೊಳ್ಳುತ್ತಾರೆ. ಮುಂದಿನ ವಸ್ತಿಗಳಿಗೆ ಅನುವು ಮಾಡಿಕೊಳ್ಳುತ್ತಾರೆ.

# ಅಗಲಿದ ಆಪ್ತಮಿತ್ರ-ಗಡಿನಾಡಲ್ಲಿ ಮಡುಗಟ್ಟಿದ ದುಃಖ ...

ಚಿಂದೋಡಿ ಶಿವಣ್ಣನವರ ಸುಪರ್ದಿಯಲ್ಲೇ ಕೆಲಕಾಲ ತಮ್ಮ ಕಂಪನಿಯ ರಂಗ ಪರಿಕರಗಳನ್ನು ಜತನವಾಗಿಟ್ಟು ಮತ್ತೆ ನಿರುದ್ಯೋಗ ಪರ್ವ ಆಚರಣೆ. ಅದನ್ನು ಮನಗಂಡ ಶಿವಣ್ಣನ ಆಪ್ತಮಿತ್ರ ಬಾತಿ ಜಯಣ್ಣ ಚಳ್ಳಕೆರೆ ತಾಲ್ಲೂಕು ಪರಶುರಾಂಪುರದ ವಾಸವಿ ಮಹಲ್ ಹುಡುಕಿ ನಾಟಕ ಆರಂಭಿಸಲು ದಾರಿ ತೋರುತ್ತಾರೆ. ಐರಣಿ ಮಲ್ಲಿಕಾರ್ಜುನ ಸಹಕರಿಸುತ್ತಾರೆ. ತಿಂಗಳೊಪ್ಪತ್ತು ಅಲ್ಲಿ ಅಡ್ಡಿ ಇಲ್ಲ ಎನ್ನುವಷ್ಟು 'ಬಂಜೆ ತೊಟ್ಟಿಲು' ನಾಟಕ ಪ್ರದರ್ಶನಗೊಳ್ಳುತ್ತವೆ.

ಲಘು ಹೃದಯಾಘಾತಕ್ಕೊಳಗಾಗಿ ಚೇತರಿಸಿಕೊಂಡ ಚಡ್ಡಿದೋಸ್ತ್ ಬಿ. ಓಬಳೇಶ್ ಚಿತ್ರದುರ್ಗದ ಕುಮಾರಸ್ವಾಮಿ ನಾಟಕ ಸಂಘದಲ್ಲಿ ಮತ್ತೆ ಪಾತ್ರ ಮಾಡುತ್ತಿದ್ದಾರೆಂಬ ಸುದ್ದಿಕೇಳಿ ಶಿವಣ್ಣ, ಓಬಳೇಶ್ ಅವರನ್ನು ಮಾತಾಡಿಸಿಕೊಂಡು ಬರಲು ಬರುತ್ತಾರೆ. ಓಬಳೇಶ್ ಬತ್ತಿ ಬಸವಳಿದಿರುವುದನ್ನು ಕಂಡ ಶಿವಣ್ಣನ ಕರುಳು ಹಿಂಡಿ ಹೋಗುತ್ತದೆ. ಓಬಳೇಶ್ ತನಗೆ ಅಭಿನಯದ ಗುರು ಮಾತ್ರವಲ್ಲ ರಂಗಭೂಮಿಯ ಎಲ್ಲ ಪಟ್ಟು-ಮಟ್ಟು-ಜೀವಾಳಗಳನ್ನೇ ತನಗೆ ಧಾರೆ ಎರೆದ ಪರಮಾಪ್ತ ಮಿತ್ರನ ದೈಹಿಕ ಸ್ಥಿತಿ ಕಂಡು ಶಿವಣ್ಣ ಮಮ್ಮಲ ಮರುಗುತ್ತಾರೆ. ಆದರೆ ಓಬಳೇಶ್‌ಗೆ ತಾನು ಯಾವ ರೀತಿಯಿಂದಲೂ ಸಹಾಯ ಮಾಡಲು ಸಾಧ್ಯವಾಗುತ್ತಿಲ್ಲವೆಂದು ಮನದೊಳಗೇ ಸಂಕಟ ಪಡುತ್ತಾರೆ. 1985ರ ಮೇ ತಿಂಗಳು ಅದಾಗಿದ್ದೀತು ! ಇಬ್ಬರೂ ಚಿತ್ರದುರ್ಗದ ಕುಮಾರಸ್ವಾಮಿ ನಾಟಕ ಕಂಪನಿಯ ಬೋರ್ಡಿಂಗ್‌ನಲ್ಲಿ ಊಟ ಮಾಡುತ್ತಾರೆ. ಶಿವಣ್ಣನಿಗೆ ಹೇಳಲಾಗದ ಮತ್ತು ಹೇಳದಿರಲಾಗದ ಒಂದು ಅಗೋಚರ ಸಂಕಟ. ಅದು ಅವರಿಬ್ಬರ ಕೊನೆಯ ಭೇಟಿ ಎಂಬುದು ಅವರಿಗೆ ತಿಳಿಯಲಾರದ ಅದೇನೋ ಅವ್ಯಕ್ತ ಅನುಭವ !

ಅದಾದ ಕೆಲವೇ ದಿನಗಳಲ್ಲಿ ಓಬಳೇಶ್ ತೀರಿಹೋಗುತ್ತಾರೆ. ಅವರು ತೀರಿಹೋದ ಸುದ್ದಿ ಒಂದೆರಡು ದಿನ ತಡವಾಗಿ ಶಿವಣ್ಣನ ಕಂಪನಿ ಕ್ಯಾಂಪ್ ಮಾಡಿದ ಹಳ್ಳಿ ಕ್ಯಾದಿ ಗುಂಟೆಗೆ ಬರುವ ಖಾಸಗಿ ಬಸ್ಸಿನಲ್ಲಿ ಕಂಡಕ್ಟರ್ ಕೈಯಲ್ಲಿ ಕಳಿಸಿದ ಪತ್ರವೊಂದರಿಂದ ಓಬಳೇಶ್ ತೀರಿಹೋದ ಸುದ್ದಿ ತಿಳಿದು ಶಿವಣ್ಣ ಅಕ್ಷರಶಃ ಗೋಳೋ ಎಂದು ಕಣ್ಣೀರಿಡುತ್ತಾರೆ. ನಲವತ್ತು ವರುಷಗಳ ಕಾಲ ಕೂಡಿ ರಂಗಭೂಮಿಯಲ್ಲಿ ಆಡಿ-ಹಾಡಿ ನಲಿದ ರಂಗಮಿತ್ರನ ಎಲ್ಲ ಒಡನಾಟಗಳು ರಂಗಸಜ್ಜಿಕೆಯಲ್ಲಿನ ನಾಟಕದ ಪಾತ್ರಗಳಾಗಿ ಕಾಡುವುದಿಲ್ಲ. ಜೀವದ ಗೆಳೆಯ, ಗುರು, ಆಪ್ತಮಿತ್ರ, ಶ್ರೇಷ್ಠ ರಂಗಪರಂಪರೆಯ ಕೊಂಡಿಯೇ ಕಳಚಿಕೊಂಡ ಆಘಾತಕಾರಿ ನೋವು ಶಿವಣ್ಣನನ್ನು ಗಾಢವಾಗಿ ಕಾಡುತ್ತದೆ. ಆ ನೋವಿನಿಂದ ಬಹಳ ಕಾಲ ಚೇತರಿಸಿಕೊಳ್ಳಲು ಶಿವಣ್ಣಗೆ ಸಾಧ್ಯವಾಗುವುದಿಲ್ಲ. ಅವರಿಬ್ಬರ ಗೆಳೆತನವೇ ಅಂತಹದ್ದು. ಇವತ್ತಿಗೂ ಶಿವಣ್ಣ, ಓಬಳೇಶ್ ಅವರನ್ನು ನೆನಪಿಸಿಕೊಳ್ಳದ ದಿನಗಳೇ ಇಲ್ಲ. ಶಿವಣ್ಣನ ರಂಗಚರಿತ್ರೆ ಓಬಳೇಶರನ್ನು ಉಲ್ಲೇಖಿಸದೇ ಪೂರ್ಣವಾಗದು. ರಂಗಮಾತೆಯ ಕಿರೀಟದಲ್ಲಿ ಹೊಳೆಯುತ್ತಿದ್ದ ಅನರ್ಘ್ಯ ರತ್ನಮಣಿಯೊಂದು ಕಳಚಿ ಬಿತ್ತೆಂದು ಶಿವಣ್ಣ ಇಂದಿಗೂ ನಾಟಕದ ಸಂಭಾಷಣೆಯಂತೆ ದುಃಖ ತುಂಬಿಕೊಂಡು ಓಬಳೇಶ ಅಗಲಿಕೆಯನ್ನು ಬಣ್ಣಿಸುತ್ತಾರೆ.

ಚಳ್ಳಕೆರೆ ಹಾಗೂ ಹಿರಿಯೂರು ತಾಲ್ಲೂಕಿನ ಆಂಧ್ರದ ಗಡಿಭಾಗದ ಹಳ್ಳಿಗಳಲ್ಲಿ ಬೇತೂರು, ಪಾಳ್ಯ ಆಂಧ್ರದ 'ವಲಸೆ' ಎಂಬ ಹಳ್ಳಿಯಲ್ಲಿ ಕ್ಯಾಂಪ್ ಮಾಡುತ್ತಾರೆ ಅಲ್ಲಿಂದ ಮಸ್ಕಲ್ ಮಟ್ಟಿ ಎಂಬ ತೆಲುಗು ಕ್ಯಾಂಪ್‌ಗಳಲ್ಲಿ ನಾಟಕ ಆಡುತ್ತಿರಬೇಕಾದರೆ ಅವರು ತೆಲುಗು ನಾಟಕ ಪ್ರದರ್ಶಿಸಬೇಕೆಂಬ ಒತ್ತಾಯಗಳು ಬರುತ್ತವೆ. ವೇಣುಕಲ್ಲುಗುಡ್ಡ ಖಂಡೇನ ಹಳ್ಳಿ ಹರಿಯಬ್ಬೆ, ಧರ್ಮಪುರ, ಅಬ್ಬಿನಹೊಳೆ, ಬೇಡರ ಹಳ್ಳಿ ಹೀಗೆ ..ಅರ್ಧ ಹಿರಿಯೂರು ತಾಲ್ಲೂಕನ್ನೇ ಪೂರೈಸುವಂತೆ ರಂಗ ಪ್ರದರ್ಶನಗಳು ಪೂರೈಸುತ್ತವೆ. ಹರಿಯಬ್ಬೆಯಲ್ಲಿ ಇನ್ನೇನು ನಾಟಕ ಶುರುಮಾಡಬೇಕೆನ್ನುವಾಗ ಗಂಗಾಧರಪ್ಪ ಎಂಬ ಮುಖಂಡ ನಾಟಕವನ್ನು ಬಂದ್ ಮಾಡಿಸ್ತಾರೆ. ಕಾರಣ ಆತನ ಅನುಮತಿ ಪಡೆಯದೇ ಆರಂಭಿಸಿದ್ದು.

ಪರಮೇನಹಳ್ಳಿ ಪಟೇಲರಿಗೆ ಪೌರಾಣಿಕ ನಾಟಕಗಳಲ್ಲಿ ಪಾತ್ರ ಮಾಡುವ ಹವ್ಯಾಸ ಆ ಕಾರಣಕ್ಕಾಗಿ 'ಹರಿಶ್ಚಂದ್ರ' ನಾಟಕದಲ್ಲಿ ಅವರು ಹರಿಶ್ಚಂದ್ರನ ಪಾತ್ರ ಮಾಡಿದರು. ವಿಶ್ವಾಮಿತ್ರನಿಗೆ ರಾಜ್ಯವನ್ನೆಲ್ಲ ಒಪ್ಪಿಸಿ ಹೋಗುವ ದೃಶ್ಯವದು. ಶಿವಣ್ಣನದು ಸೇವಕನ ಪಾತ್ರ, ಹರಿಶ್ಚಂದ್ರನ ಮೈಮೇಲೆ ಜರೀಪಂಚೆ, ಉತ್ತರೀಯ ವಡವೆಗಳಾವು ಇದ್ದಿಲ್ಲ. ಇದು ಸ್ವಾಭಾವಿಕ ಆದರೆ ತಲೆಗೆ ಹಾಕಿಕೊಂಡಿದ್ದ ವಿಗ್ ಇರಲಿಲ್ಲ. ಬೋಳುತಲೆ, ಸನ್ನಿವೇಶ ಮುಗಿದಾದ ಮೇಲೆ ಪರಮೇನಹಳ್ಳಿ ಪಟೇಲರನ್ನು ಕೇಳಿದ್ದಕ್ಕೆ ಹರಿಶ್ಚಂದ್ರ ಎಲ್ಲವನ್ನು ಕಳೆದುಕೊಂಡಿರುತ್ತಾನಲ್ಲ ಅದಕ್ಕೆ ವಿಗ್ ಸಹಿತ ನಾನು ಒಪ್ಪಿಸಿಬಿಟ್ಟೆ ಎನ್ನುತ್ತಾರೆ.

ಸ್ಮಶಾನ ದೃಶ್ಯದಲ್ಲಿ ಮಗನನ್ನು ಕಳೆದುಕೊಂಡ ತಾರಾಮತಿ ದುಃಖಿಸುತ್ತಿರುವಾಗ "ಚೇತರಿಸಿಕೋ ದೇವಿ" ಎಂದು ಹರಿಶ್ಚಂದ್ರ ಸಾಂತ್ವನ ಹೇಳುವ ಮಾತು. ರಾತ್ರಿಯ ಎರಡು ಮೂರು ಗಂಟೆಯ ಸಮಯದಲ್ಲಿ ಆ ದೃಶ್ಯ. ಕಲಾವಿದರೆಲ್ಲರಿಗೂ ನಿದ್ರಾ ದೇವಿ ಆವರಿಸಿಕೊಳ್ಳುತ್ತಾಳೆಂದು ಚಹ ತರಿಸಿಕೊಂಡು ಕುಡಿಯುವ ಸಮಯವದು. ಅದೇ ಸಮಯದಲ್ಲಿ ಈ ದೃಶ್ಯ. 'ಚೇತರಿಸಿಕೋ ದೇವಿ' ಎಂಬ ಸಂಭಾಷಣೆಯನ್ನು ಪರಮೇನಹಳ್ಳಿ ಪಟೇಲ್ 'ಚಾ ತರಿಸಿಕೋ ದೇವಿ' ಎಂದು ಬಿಡುತ್ತಾನೆ. ಅದೇ ಸಮಯಕ್ಕೆ ಚಹ ವಿತರಿಸುತ್ತಿದ್ದ ಹುಡುಗ ಸ್ಟೇಜ್‌ಗೆ ಧಾವಿಸಿ ತಾರಾಮತಿಗೆ ಚಹ ಕೊಡಲು ಬರುತ್ತಾನೆ. ಅದರಿಂದಾಗಿ ಸ್ಮಶಾನದ ಆ ಸನ್ನಿವೇಶ ನಗೆ ಗಡಲಾಗಿ ಪ್ರೇಕ್ಷಕರನ್ನು ರಂಜಿಸುತ್ತದೆ. ಇಂತಹ ಹತ್ತು ಹಲವು ಹಾಸ್ಯ ಪ್ರಸಂಗಗಳು ಹಳ್ಳಿ ನಾಟಕಗಳಲ್ಲಿ ಶಿವಣ್ಣನವರಿಗೆ ಮತ್ತು ಅವರ ಕಂಪನಿಯ ಅನೇಕ ನಟ ನಟಿಯರಿಗೆ ಆಗುತ್ತವೆ. ತಮ್ಮ ಉಪವಾಸ-ವನವಾಸಗಳನ್ನೆಲ್ಲ ಮರೆತು ಇಂತಹ ಅನೇಕ ರಸ ಪ್ರಸಂಗಗಳನ್ನು ಕಲಾವಿದರು ತಮ್ಮ ಭಾವಕೋಶಗಳಲ್ಲಿ ಕಾಪಿಟ್ಟುಕೊಳ್ಳುತ್ತಾರೆ.

ನಾಕೈದು ವರುಷಗಳ ಕಾಲ ಆಂಧ್ರದ ಗಡಿನಾಡಿನಲ್ಲೇ ರಂಗರಾತ್ರಿಗಳನ್ನು ಕಳೆಯುವ ಶಿವಣ್ಣ ತನ್ನ ರಂಗಬದುಕಿನ ಕೆಲವು ಪ್ರಮುಖ ಘಟನೆಗಳನ್ನು ತಮ್ಮ ಮಾತುಗಳಲ್ಲಿ ಹೇಳಿದ್ದನ್ನು ಯಥಾವತ್ತಾಗಿ ದಾಖಲಿಸುವುದಾದರೆ...

1987ರ ಕೊನೆ ತಿಂಗಳುಗಳವು. ಹಿರಿಯೂರು ತಾಲೂಕಿನ ಕಣಜನಹಳ್ಳಿ ಸಣ್ಣ ಗ್ರಾಮ. ಈ ಗ್ರಾಮದ ಅಂಚೆ ಅಧಿಕಾರಿಯಾದ ಹಾಗೂ ಸಾಹಿತಿ-ಕಲಾಪ್ರೇಮಿ, ಸುಸಂಸ್ಕೃತರಾದ ಕೆ.ಎನ್. ನಾಗರಾಜರವರ ಸ್ನೇಹ ಸಹಕಾರದಿಂದ ಮುಕ್ಕಾಂ ಮಾಡಿದೆವು. ಕಲೆಕ್ಷನ್ ದೃಷ್ಟಿಯಿಂದ ಸಾಧಾರಣ ಮಟ್ಟಿಗಾದರೂ, ಊರಿನವರ ಸಹಕಾರ ಮರೆಯಲಾಗದು. ನಾಟಕ ಪ್ರದರ್ಶನ ಇಲ್ಲದೇ ಇದ್ದ ದಿನ, ನಾಗರಾಜರ ಮನೆಯಲ್ಲಿ ಸೇರಿ, ಕಲೆ, ಸಂಸ್ಕೃತಿಯ ಬಗ್ಗೆ, ಚರ್ಚಿಸುತ್ತಿದ್ದೆವು. ಅಲ್ಲೇ ನಮ್ಮ ಭೋಜನದ ವ್ಯವಸ್ಥೆ. ಜಾತಿ ಸಮಸ್ಯೆಯಂತೂ ಬರಲೇ ಇಲ್ಲ. ಬ್ರಾಹ್ಮಣರಾದ ಅವರು ಊಟದ ಎಲೆಗಳನ್ನು ನಮ್ಮ ಕೈಯಲ್ಲಿ ಎತ್ತಿಸುತ್ತಿದ್ದಿಲ್ಲ.

ನನ್ನ ಪತ್ನಿಯ ಅಪೇಕ್ಷೆ ಮೇರೆಗೆ ಶ್ರೀ ರೇಣುಕಾದೇವಿ ನಾಟಕವನ್ನು ಪ್ರದರ್ಶಿಸಲು ಮನಸ್ಸು ಮಾಡಿದೆ. ಆರೋಗ್ಯ ಸರಿ ಇರದೇ ಇದ್ದರೂ ಪಾರ್ವತಿದೇವಿಯಾಗಿ ಪಾತ್ರ ನಿರ್ವಹಿಸಿ, ರಂಗಸೇವೆ ಮಾಡಿ ತೃಪ್ತಿ ಹೊಂದಿದಳು. ಮುಂದೆ ಆಕೆ ಪಾತ್ರಮಾಡಲೇ ಇಲ್ಲ.

ಕಣಜನಹಳ್ಳಿಯಲ್ಲೇ ಇದ್ದು, ಸುತ್ತಲೂ ಇದ್ದ ಗ್ರಾಮಗಳಲ್ಲಿ ನಾಟಕ ಪ್ರದರ್ಶಿಸಿ ಬರುತ್ತಿದ್ದೆವು. ಸೂಗೂರು-ಶಿಡ್ಲಯ್ಯನ ಕೋಟೆ, ಗೊಂಬೇರಹಳ್ಳಿ-ಗ್ರಾಮಗಳನ್ನು

ಸಂಚರಿಸುವಷ್ಟರಲ್ಲಿ ನಾಲ್ಕೈದು ತಿಂಗಳು ಕಳೆದವು. ಗೊಂಬೇರಹಳ್ಳಿಯಲ್ಲಿ ರೇಣುಕ ನಾಟಕ ನೋಡಲು ಬಂದ ದೇವರ ಮರಿಕುಂಟೆ ಗ್ರಾಮದ ಪ್ರಮುಖರೆಲ್ಲರೂ, ಸಂತೋಷ ಪಟ್ಟು, ದೇವರ ಮರಿಕುಂಟೆ ಗ್ರಾಮಕ್ಕೆ ನಮ್ಮನ್ನು ಕರೆದುಕೊಂಡು ಹೋದರು.

<u>1988–ಜನವರಿ</u> ದೇವರ ಮರಿಕುಂಟೆ ಗ್ರಾಮದ ಚೇರ್ಮನ್ನರಾದ, ಮಂಜುನಾಥ, ತಿಪ್ಪಣ್ಣ ಗೋವಿಂದಪ್ಪ, ಪೂಜಾರ ಓಬಣ್ಣ, ವೀರಬಸಪ್ಪ, ಪ್ರಮುಖರು, ಬಸಪ್ಪ ಎಂಬುವರ ಕಣದಲ್ಲಿ ನಮ್ಮ ಥಿಯೇಟರಿಗೆ ಅವಕಾಶವಾಯ್ತು. ವೀರಬಸಪ್ಪನವರ ಖಾಲಿ ಮನೆಯನ್ನು ನಮಗೆ ಇರಲು ಅನುಕೂಲ ಮಾಡಿದರು.

ಬಡವರೇ ಹೆಚ್ಚಾಗಿದ್ದ ಗ್ರಾಮ ಆದರೂ ತಕ್ಕಮಟ್ಟಿಗೆ ಆದಾಯವಾಗಿ, ಸ್ವಲ್ಪ ಶಾಂತಿಯಿಂದ ಕಾಲ ಹಾಕಿದೆವು. ಆದರೂ ನನ್ನ ಪತ್ನಿಯ ಆರೋಗ್ಯಕ್ಕೆ ಡಾಕ್ಟರ್ ಬರೆದುಕೊಟ್ಟ ಗುಳಿಗೆಗಳನ್ನು ತರಲು ಆಗದಂಥ ಪರಿಸ್ಥಿತಿ ಪ್ರತಿದಿನವೂ ತಪ್ಪದೇ ತೆಗೆದುಕೊಳ್ಳಬೇಕಾಗಿತ್ತು. ಆ ಗುಳಿಗೆಗಳು, ದಾವಣಗೆರೆಯಲ್ಲಿ ಮಾತ್ರ ಸಿಕ್ಕುತ್ತಿತ್ತು. ಚಿಕಿತ್ಸೆ ಅದು ಬಲುಕಷ್ಟವಾಯಿತು.

ದಾವಣಗೆರೆಗೆ ಕರೆದುಕೊಂಡು ಹೋದರೆ, ಇಲ್ಲಿರುವವರ ಗತಿಯೇನು ಎಂಬ ಇಬ್ಬದಿಯ ಸಂಕಟದಲ್ಲಿ ಸಿಕ್ಕು ಸುಸ್ತಾದೆ. ಕೊನೆಗೆ ನನ್ನ ತಮ್ಮ –ಮತ್ತು ಮಕ್ಕಳ ಧೈರ್ಯದ ಮೇರೆಗೆ ಪತ್ನಿಯೊಂದಿಗೆ, ದಾವಣಗೆರೆಗೆ ಬಂದು ಚಿಗಟೇರಿ ಜನರಲ್ ಆಸ್ಪತ್ರೆ ಕ್ಷಯರೋಗ ವಿಭಾಗಕ್ಕೆ ಸೇರಿಸಿದ್ದಾಯ್ತು. 1988 ಜುಲೈ 1–2ನೇ ತಾರೀಖು ಆಸ್ಪತ್ರೆ ಸೇರಿಸಿರಬಹುದು. ನಾನು ಅವಳೊಂದಿಗೆ ಇರಬೇಕಾಯಿತು.

ದಾವಣಗೆರೆಯಲ್ಲಿ ಅಪಾರವಾದ ಬಂಧು ಬಳಗದವರಿದ್ದರೂ, ಯಾರೊಬ್ಬರೂ ನಮ್ಮ ಹತ್ತಿರ ಸುಳಿಯಲಿಲ್ಲ. ಕಾರಣ ಹೆಂಡತಿಗೆ ಟಿ.ಬಿ. ಕಾಯಿಲೆ. ರಾತ್ರಿ 12ಗಂಟೆವರೆಗೂ, ಆಸ್ಪತ್ರೆ ಹೊರ ಆವರಣದಲ್ಲಿ, ಕುಳಿತು, ನಂತರ, ನನ್ನ ಸಹೋದರರ ಮನೆಗೆ ಬಂದು, ನನ್ನ ತಾಯಿಯವರಿಂದ ಒಂದೆರಡು ರೊಟ್ಟಿ ತಿಂದು, ಮಲಗಿ. ಪುನಃ ಬೆಳಗು ಮುಂಜಾನೆ, 4ಗಂಟೆಗೆ, ಆಸ್ಪತ್ರೆಗೆ ಬರುತ್ತಿದೆ. ಇದು ವಾರಗಟ್ಟಲೇ ನಡೆಯಿತು.

ದಿನ, ಚರಿತಾರ್ಥಕ್ಕೋಸ್ಕರ, ಸ್ನೇಹಿತರ ಬಳಿ ಹಣದ ಸಹಾಯ ಪಡೆಯಬೇಕಾಗಿತ್ತು. ಒಂದು ಕಡೆ ದೇವರ ಮರಿಕುಂಟೆಯಲ್ಲಿದ್ದ ನಮ್ಮವರ ಯೋಚನೆ ಇದರಂತೆ ಸುಮಾರು 20ದಿನ ಕಾಲ ಹಾಕಿದೆವು. ನನ್ನ ಪತ್ನಿ ಇದನ್ನೆಲ್ಲಾ ಯೋಚನೆ ಮಾಡಿ, ಕೊನೆಗೊಂದು ದಿನ, ಮೊದಲು ಆಸ್ಪತ್ರೆಯಿಂದ ಹೋಗೋಣ. ಡಿಸ್‌ಚಾರ್ಜ್ ಮಾಡಿಸಿ, ದೇವರಿಟ್ಟಂತೆ ಆಗುತ್ತೆ. ನನ್ನ ಮಕ್ಕಳ ಮುಖ ನೋಡಬೇಕು. ಎಂಬುದಾಗಿ

ಹಟ ಹಿಡಿದಿದ್ದರಿಂದ, ಒಂದು ತಿಂಗಳಿಗಾಗುವಷ್ಟು ಆಸ್ಪತ್ರೆಯಿಂದ ಮಾತ್ರೆ ಮತ್ತು ಇಂಜಕ್ಷನ್, ತೆಗೆದುಕೊಂಡು, 23–7–1988ದಿನ, ತಾಯಿಯವರನ್ನು ಕಂಡು, ಮರಿಕುಂಟೆಗೆ ಹೋಗೋಣವೆಂದು ಮನೆಗೆ ಬಂದೆವು. ಆ ದಿನ ನಮ್ಮ ಪ್ರಯಾಣವನ್ನು ತಾಯಿಯ ಅಪ್ಪಣೆಯಂತೆ, ಒಂದು ದಿನ ಮುಂದೂಡಿದೆವು.

24–7–1988ರಂದು, ಸುಮಾರು, 12ಗಂಟೆಗೆ, ಮರಿಕುಂಟೆಯಿಂದ, ನನ್ನ ಹಿರೀ ಮಗ ನಟರಾಜ ಬಂದ. ಅಲ್ಲಿಯ ಸಮಾಚಾರವೂ ತಿಳಿಯಿತು. ಸಂಜೆ 4ಗಂಟೆಗೆ ಇಂಜೆಕ್ಷನ್ ಕೊಡಲು, ಹತ್ತಿರವಿದ್ದ ಯಾರಾದರೂ ಒಬ್ಬ ಡಾಕ್ಟರ್‌ನ್ನು ಹುಡುಕಿಕೊಂಡು ಹೊರಟೆ, ನನ್ನ ಪ್ರಯತ್ನವೆಲ್ಲ ವಿಫಲವಾಯ್ತು. ವಾಪಾಸ್, ಮನೆಗೆ ಬಂದಾಗ 5–30ಗಂಟೆ ಕೊನೇ ಘಳಿಗೆ ಸಮೀಪಿಸಿದ್ದರಿಂದ, ನನ್ನ ತೊಡೆಯ ಮೇಲೆ ಕಮಲಳ ತಲೆಯನ್ನಿರಿಸಿಕೊಂಡ ತಕ್ಷಣ, ಪ್ರಾಣಪಕ್ಷಿ ಹಾರಿ ಹೋಯಿತು. ಇಪ್ಪತ್ತೈದು ವರುಷಗಳ ಕಾಲ ಒಂದೇ ಪ್ರಾಣದಂತೆ ನನ್ನೊಂದಿಗೆ ಬದುಕಿದ ಕಮಲಳ ಸಾವು ನನ್ನನ್ನು ನೋವಿನ ಮಡುವಲ್ಲಿ ನೂಕಿತು.

ದಾವಣಗೆರೆಯಲ್ಲಿ ಅಂತ್ಯ ಸಂಸ್ಕಾರವೋ–? ದೇವರ ಮರಿಕುಂಟೆಯಲ್ಲಿಯೋ? ಅಷ್ಟು ಸುಲಭದ ಪ್ರಶ್ನೆಯಲ್ಲ. ಇಲ್ಲಿ ದಾವಣಗೆರೆಯ ಬಂಧುಗಳೆದುರಲ್ಲಿ ಅಂತ್ಯ ಸಂಸ್ಕಾರ ಮಾಡಲು ಹಣದ ತೊಂದರೆಯ ಜೊತೆಗೆ, ನನ್ನ ತಮ್ಮ ಮಕ್ಕಳನ್ನು ಕರೆತರಬೇಕು. ದೇವರ ಮರಿಕುಂಟೆಗೆ ಶವವನ್ನು ಒಯ್ಯಲು, ಅದಕ್ಕೆ ಹಣಬೇಕು. ಈ ಎಲ್ಲ ಸಮಸ್ಯೆಗಳಿಂದ, ಜರ್ಝರಿತನಾಗಿ, ನಟರಾಜನನ್ನು ಮನೆಯಲ್ಲಿರಲು ಹೇಳಿ, ಸ್ನೇಹಿತರನ್ನು ಹುಡುಕಲು ಹೊರಟೆ. ಜಯಣ್ಣ ಊರಲ್ಲಿರಲಿಲ್ಲ. ಡ್ರಾಮಾ ಸೀನ್ಸ್ ಮಾಲೀಕ ಮಲ್ಲಿಕಾರ್ಜುನ ಸ್ವಾಮಿಗಳು ಸಿಗಲಿಲ್ಲ. ಕೆ.ಬಿ.ಆರ್. ಡ್ರಾಮಾ ಥಿಯೇಟರಿನ ಬಳಿ ಬಂದಾಗ, ಆ ದಿನ ಚಿತ್ರನಟಿ ಉಮಾಶ್ರೀಯವರು (ಇಂದು ಮಂತ್ರಿಗಳು) ಪಾತ್ರ ಮಾಡಲು ಬಂದಿದ್ದರು. ಪ್ರೇಕ್ಷಕರ ಸಂಖ್ಯೆಯೂ ಸಾಕಷ್ಟಿತ್ತು.

ಚಿಂದೋಡಿ ಲೀಲಮ್ಮನವರಿಗೆ ನಾನು ಕಂಡತಕ್ಷಣ, ನನ್ನ ಸತಿಯ ಆರೋಗ್ಯದ ಬಗ್ಗೆ ವಿಚಾರಿಸಿದರು. ಅದೇ ಆಗ 'ಕಮಲ ಶಿವನಪಾದ ಸೇರಿದ' ವಿಷಯ ತಿಳಿಸಿದೆ. ಅವರೂ ಬಹುದುಃಖಿತರಾಗಿ, ಕಾರನ್ನು ತೆಗೆದುಕೊಂಡು ಹೋಗಿ, ಆ ಗ್ರಾಮದಲ್ಲಿದ್ದ ನಮ್ಮ ಕುಟುಂಬದವರೆಲ್ಲರನ್ನೂ ಕರೆದುಕೊಂಡು ಬಾ, ಎಂದರು. ಅದಕ್ಕೆ ನಾನು ಒಪ್ಪದಿದ್ದಾಗ ಒಂದಷ್ಟು ಹಣವನ್ನು ನನ್ನ ಜೇಬಿಗೆ ಒತ್ತಾಯದಿಂದ ತುಂಬಿದರು. ಹಾಗೇ ನಾಟಕ ಪ್ರದರ್ಶನವನ್ನೂ ನಿಲ್ಲಿಸಲು ಯೋಚಿಸಿದರು. ನಾನೇ ಬೇಡವೆಂದು ತಡೆದೆ. ಅಲ್ಲಿದ್ದ ನನ್ನ ಬಳಗವನ್ನೆಲ್ಲಾ ಕರೆತಂದು, ದಾವಣಗೆರೆಯಲ್ಲೇ ಅಂತ್ಯಸಂಸ್ಕಾರ ಮಾಡುವುದಾಗಿ ನಿರ್ಧರಿಸಿ, ಅಲ್ಲಿಂದ ಮನೆಗೆ ಬಂದಾಗ ಸುಮಾರು ರಾತ್ರಿ 9.30ಗಂಟೆ. ನಟರಾಜ

ಕೈಯಲ್ಲಿ 150ರೂಪಾಯಿಗಳನ್ನು ಕೊಟ್ಟು, ಅಂತ್ಯಸಂಸ್ಕಾರದ ಬಗ್ಗೆ ತಿಳಿಸಿ, ರಾತ್ರಿ 10.30ಕ್ಕೆ, ಹೊರಡುವ ಬಸ್ಸಿಗೆ ಚಿತ್ರದುರ್ಗಕ್ಕೆ ಬಂದೆ. ದುರ್ಗದಿಂದ ತಿರುಪತಿಗೆ ಹೋಗುವ ಬಸ್ಸು ರಾತ್ರಿ 1 ಗಂಟೆಗೆ ಇತ್ತು. ಅದು ಪಾವಗಡದ ಮುಖಾಂತರ ಹೋಗಬೇಕು. ಬಸ್ಸಿನ ಕಂಡಕ್ಟರ್–ಡ್ರೈವರ್‌ಗೆ ನನ್ನ ದೀನಾವಸ್ಥೆಯನ್ನು ತಿಳಿಸಿ, ಮಧ್ಯದಲ್ಲಿ ಸಿಗುವ ದೇವರಹಳ್ಳಿಯಲ್ಲಿ ರಾತ್ರಿ 2.30ರ ಸಮಯದಲ್ಲಿಳಿದೆ. ಜಿನಗು ಮಳೆ ಬರುತ್ತಿತ್ತು. ಅಲ್ಲದೇ ಅಲ್ಲಿಂದ 5 ಮೈಲಿ ನಡದೇ ದೇವರ ಮರಿಕುಂಟೆಗೆ ಹೋಗಬೇಕಿತ್ತು. ಬೆಳಗು ಮುಂಜಾನೆ 4 ಗಂಟೆವರೆಗೂ ಸಾಲುಮರದ ಆಶ್ರಯ ಪಡೆದು, ಹೊರಟು, ಮರಿ ಕುಂಟೆಗೆ ಹೊರವಲಯಕ್ಕೆ ಬಂದಾಗ 6 ಗಂಟೆ. ಪೂಜಾರ ಓಬಣ್ಣ, ತಿಪ್ಪಣ್ಣನವರು, ಗಾಳಿಸೇವನೆಗೆ ಬಂದಿದ್ದರು. ನನ್ನ ಭೇಟಿಯಾದ ತಕ್ಷಣ ವಿಷಯ ತಿಳಿದು, ನನ್ನೊಂದಿಗೆ ಅವರೂ ನಮ್ಮ ಮನೆಗೆ ಬಂದರು. ಹತ್ತು ನಿಮಿಷದಲ್ಲಿ ಊರಿಗೆಲ್ಲ ತಿಳಿದು, ಜನ ತುಂಬಿದರು.

ದಾವಣಗೆರೆಯಿಂದ ಕಾರಿನಲ್ಲಿ ಶವತಂದು, ಇಲ್ಲಿಯೇ ಅಂತ್ಯ ಸಂಸ್ಕಾರವಾಗಲೀ ಎಂದು ಊರಿನವರ ಒತ್ತಾಯ, ಅದಕ್ಕೆ ನಾನೇ ನಿರಾಕರಿಸಿದೆ, ಸಮಾಧಾನಪಡಿಸಿದೆ. ದೇವರಹಳ್ಳಿಗೆ ಬಂದು, 12 ಗಂಟೆಯ ಬಸ್ಸು ಮುಖಾಂತರ ದಾವಣಗೆರೆ ತಲುಪಬೇಕಾಗಿತ್ತು. ಕಾರಣ, ಎತ್ತಿನಗಾಡಿಯಲ್ಲಿ ನಮ್ಮೆಲ್ಲರ ಪ್ರಯಾಣ. ನಾನು ಕುಳಿತೆ ಸೇರಿದ ಜನರೆಲ್ಲಾ, ನನ್ನ ಉಡಿಯಲ್ಲಿ ಹಣವನ್ನು ಹಾಕತೊಡಗಿದರು. ಅದು ಒಟ್ಟು ಮೊತ್ತ ಎರಡುವರೆ ಸಾವಿರದ ಮೇಲಾಗಿತ್ತು. ಮೊದಲಿನಿಂದಲೂ ನಮ್ಮಲ್ಲೇ ರಂಗಸೇವೆ ಮಾಡುತ್ತಾ ಬಂದ ತಬಲಾ ಭೀಮರಾವ್ ರಾಣೆ ಇವರನ್ನು ಮನೆಯ ಮುಂದಿರಲು ಹೇಳಿ ನಾವೆಲ್ಲರೂ, ಹೊರಟು, ಸರಿಯಾಗಿ 12 ಗಂಟೆಯ ಶ್ರೀಶೈಲ ಬಸ್ಸನ್ನು ಹಿಡಿದು ಸುಮಾರು, 2 ಗಂಟೆಗೆ ದಾವಣಗೆರೆ ತಲುಪಿದೆವು.

ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳೊಂದಿಗೆ, ನನ್ನ ಮಗ ನಟರಾಜ್, ಅಂತ್ಯಸಂಸ್ಕಾರದ ವ್ಯವಸ್ಥೆ ಮಾಡಿದ್ದ. ಕುಂದಗೋಳದಿಂದ ನನ್ನತ್ತೆ (ನನ್ನ ಹೆಂಡತಿತಾಯಿ) ಬಂದಿದ್ದರು. ಮರಿಕುಂಟೆಯ ಅಭಿಮಾನಿಗಳ ದಯದಿಂದ ಹಣದ ಚಿಂತೆ ಇರಲಿಲ್ಲ. ದಾವಣಗೆರೆಯಲ್ಲಿ ಬೇರೆಯವರು ಹಾಗೂ ಸಹೋದರರ ಮುಂದೆ ಹಣ ಯಾಚಿಸುವ ಚಿಂತೆ ಇರಲಿಲ್ಲ. ದೇವರ ಮರಿಕುಂಟೆಯಲ್ಲಿ ದಿನಗೂಲಿಯಿಂದ ಜೀವಿಸುವ ಪ್ರತಿಯೊಬ್ಬರೂ, ಆ ಸಮಯದಲ್ಲಿ ಸಹಾಯಹಸ್ತ ನೀಡಿದವರನ್ನು ಸದಾ ನೆನೆಯಲೇಬೇಕು. "ದೇವರ ಮರಿಕುಂಟೆಯನ್ನು" "ಮರೆಯದ ಕುಂಟೆ" ಎಂದು ಬಲು ಅಭಿಮಾನ ಪೂರ್ವಕವಾಗಿ ನೆನೆಯುತ್ತೇನೆ.

ಮೊದಲಿದ್ದ ಉತ್ಸಾಹ, ಧೈರ್ಯ ಉಳಿಯಲಿಲ್ಲ. ಮಕ್ಕಳ ಚಿಂತೆ, ವಯಸ್ಸಿಗೆ ಬಂದ ಇದ್ದೊಬ್ಬ ಮಗಳ ಚಿಂತೆ, ಇದೆಲ್ಲದರ ಜೊತೆಗೆ ಹೊಟ್ಟೆಯ ಚಿಂತೆ, ಕರ್ತವ್ಯಕ್ಕೆ ಓಡಲೇ

ಬೇಕು. ದೇವರ ಮರಿಕುಂಟೆಯಲ್ಲೇ ಇದ್ದುಕೊಂಡು ಸುತ್ತಲೂ ಇದ್ದ ಕೆಲವೊಂದು ಗ್ರಾಮಗಳಲ್ಲಿ ನಾಟಕಗಳನ್ನು ಪ್ರದರ್ಶಿಸಿದೆವು.

ರಡ್ಡಿಹಳ್ಳಿ-ಗೋಪನಹಳ್ಳಿಗಳಲ್ಲಿ ಮುಕ್ಕಾಂ ಮಾಡಿದಾಗ ತಕ್ಕ ಮಟ್ಟಿಗೆ ಆದಾಯ ಕಂಡೆವು. ನಂತರ, ಮರಿಕುಂಟೆಯಿಂದ ಚನ್ನಮ್ಮ ನಾಗತಿಹಳ್ಳಿ ಎಂಬ ಗ್ರಾಮಕ್ಕೆ ಮುಕ್ಕಾಂ ಮಾಡಿದೆವು.

ಚಳ್ಳಕೆರೆ ತಾಲೂಕು ಚನ್ನಮ್ಮ ನಾಗತಿಹಳ್ಳಿಯ ಮಾಜಿ ಛೇರ್ಮನ್ ಶ್ರೀ ಮೃತ್ಯುಂಜಯ ಸ್ವಾಮಿಗಳು, ಹಾಗೂ ಶ್ರೀ ಚಂದ್ರಣ್ಣನವರು ನಮ್ಮ ಬೆಂಬಲಿಕ್ಕಿದ್ದರು. ನಾಟಕ ಪ್ರದರ್ಶಿಸಲು, ಪಂಚಾಯ್ತಿಯಿಂದ ಪರವಾನಗಿ, ಕರೆಂಟ್, ರಂಗಮಂದಿರಕ್ಕೆ ನಿವೇಶನದ ವ್ಯವಸ್ಥೆ ಕಲ್ಪಿಸಿದರು.

ಅಲ್ಲಿಯ ಉತ್ಸಾಹಿ ತರುಣರು, ನನ್ನ ಮಕ್ಕಳಿಬ್ಬರ ಸ್ನೇಹ ಸಂಪಾದಿಸಿ ಸಕಲ ರೀತಿಯಿಂದಲೂ, ಬೆಂಬಲಿಸಿದರು. ಅವರೇ, ಪೇಂಟ್ ಮಾಡಲು ಚಳ್ಳಕೆರೆಯಿಂದ ಬಣ್ಣಗಳನ್ನು ತಂದು, ನಾನು ಮತ್ತು ನನ್ನ ತಮ್ಮ ಮಂಜುನಾಥರಿಂದ ಸೀನ್ಸ್ ಬರೆಯಲು ಹಚ್ಚಿದರು. ಇದರಿಂದ, ಪತ್ನಿ ವಿಯೋಗದ ವ್ಯಥೆಯನ್ನು ಮರೆಯಲು ಸಾಧ್ಯವಾಯ್ತು. ಆ ತರುಣರಲ್ಲಿ ಕೆಲವರನ್ನು ಪಾತ್ರಕ್ಕೂ ತಯಾರು ಮಾಡಿದೆವು. ನಾಟಕಗಳ ಪ್ರದರ್ಶನವೂ ಸರಳವಾಗಿ ನಡೆದವು.

ಚನ್ನಮ್ಮನಾಗ್ತಿಹಳ್ಳಿಗೆ ಹತ್ತಿರ, ವೇದಾವತಿ ನದಿ ತೀರದಲ್ಲಿದ್ದ ಚಳ್ಳೇಶಸ್ವಾಮಿಗಳ ಕರ್ತೃ ಗದ್ದಿಗೆಗೆ ಭಕ್ತಾದಿಗಳು ಬಹಳ. ಪ್ರತಿವರುಷವೂ ಒಂದು ವಾರ ಜಾತ್ರೆಯಾಗುತ್ತೆ ಈ ಸಾರಿ ಆ ಜಾತ್ರೆಗೆ ನಮ್ಮ ಸಂಘಕ್ಕೆ ವ್ಯವಸ್ಥೆ ಮಾಡಿದರು. ಪ್ರತಿದಿನ ನಾವಿರುವ ಸ್ಥಳದಿಂದ ಎತ್ತಿನಗಾಡಿಯ ಮೂಲಕ ಹೋಗಿ, ನಾಟಕ ಪ್ರದರ್ಶಿಸಿ, ವಾಪಾಸ್ ಬರುವಂತೆ ಏರ್ಪಡಿಸಿದೆವು. ತಕ್ಕಮಟ್ಟಿಗೆ ಚೆನ್ನಾಗಿಯೇ ಆದಾಯ ಕಂಡೆವು. ಅಲ್ಲಿ ಜಾತ್ರೆ ಮುಗಿಸಿ, ಪುನಃ ಚನ್ನಮ್ಮ ನಾಗತಿಹಳ್ಳಿಯಲ್ಲಿಯೇ ನಾಟಕ ಪ್ರದರ್ಶನ ಕಂಡವು. ಹಾಗೆಯೇ ಪಕ್ಕದಲ್ಲಿದ್ದ ಮತ್ಸಮುದ್ರ ಎಂಬಗ್ರಾಮದ ಛೇರ್ಮನ್ ಅಂಜನಪ್ಪನವರ ಅಪೇಕ್ಷೆ ಮೇರೆಗೆ ಅಲ್ಲಿ ಕೆಲವಾರು ನಾಟಕ ಮಾಡಿ, ಹರವಿಗೊಂಡನಹಳ್ಳಿಗೆ ಮುಖಾಂ ಮಾಡಿದೆವು.

**13.4.1989** ಮಾಜಿ ಛೇರ್ಮನ್ ವೀರಭದ್ರಪ್ಪನವರು ಹಾಗೂ ಭದ್ರಪ್ಪ ಎಂಬುವರು ಊರಿನ ಪ್ರಮುಖರು. ಇವರ ಸಹಕಾರದಿಂದ, ಹರವಿಗೊಂಡನಹಳ್ಳಿಯಲ್ಲಿ ನಾಟಕಗಳು ಪ್ರದರ್ಶನಗೊಂಡವು. ನಟನಟಿಯರ ಅಭಾವದಿಂದ, ಕೇವಲ ಆಶನಕ್ಕೋಸ್ಕರ ಎರಡು ದಿನಕ್ಕೊಮ್ಮೆ ಮೂರು ದಿನಕ್ಕೊಮ್ಮೆ, ಅಲ್ಲಿಯ ಒಬ್ಬರೋ

ಇಬ್ಬರೋ ಹುಡುಗರೊಂದಿಗೆ, ಕಡಿಮೆ ಬಿದ್ದ ಪಾತ್ರಗಳನ್ನು ಮಾಡಿಸಿ, ಪ್ರದರ್ಶನ ನೀಡಿ, ಬಂದಷ್ಟೇ ಪ್ರಾಪ್ತಿಯಲ್ಲಿ ಕಾಲ ಹಾಕುತ್ತಿದ್ದೆವು. ಸಾಲ ಶೂಲ ಆಗದ ಹಾಗೆ, ನೋಡಿಕೊಳ್ಳಬೇಕಾಗಿತ್ತು.

ಹಾವೇರಿ ತಾಲೂಕು, ಯಲಗಚ್ಚು ಎಂಬ ಗ್ರಾಮದಲ್ಲಿ, ಏಣಗಿ ಬಾಳಪ್ಪನವರ ಮಗಳ ಗಂಡ, ಶ್ರೀನಾಗಪ್ಪ ಮುನವಳ್ಳಿ ಇವರು, ನಮ್ಮಂತೆ, ಅವರೂ ಒಂದು ಸಂಘ ಮಾಡಿಕೊಂಡು, ಕೆಲವೊಂದು ಕಲಾವಿದರಿಂದ ಕ್ಯಾಂಪ್ ಮಾಡಿದ್ದರು. ಅವರ ಸಂಘದಲ್ಲಿ, ಹಿಂದೆ ನಮ್ಮ ಸಂಘದಲ್ಲಿದ್ದ ಕಲಾವಿದೆ ಶಾರದ ಎಂಬುವರಿಂದ, ನಮ್ಮ ವಿಷಯ ತಿಳಿದು, ತಮ್ಮ ಸಂಘವನ್ನು ಸ್ಥಗಿತಗೊಳಿಸಿ, ಶಾರದ, ಶಂಕರಪ್ಪ ಇವರ ಮಗಳು, ಮಗನೊಂದಿಗೆ, ಇದ್ದಕ್ಕಿದ್ದ ಹಾಗೇ, ನಾವಿದ್ದ ಹರವಿಗೊಂಡನಹಳ್ಳಿಗೆ, ಬಂದಿಳಿದರು. ಆ ದಿನ ನಾಟಕವಿರಲಿಲ್ಲ. ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿದ ನಾನು, ಅವರನ್ನು ಸಂತೋಷದಿಂದ ಬರಮಾಡಿಕೊಂಡೆ. ಅಲ್ಲದೇ, ಹಿಂದೊಮ್ಮೆ (1961)ಏಣಗಿಯವರ ಸಂಘದಲ್ಲಿ ನಾನಿದ್ದಾಗ, ನಾಗಣ್ಣನವರೊಂದಿಗೆ, ಆತ್ಮೀಯತೆ ಬೆಳೆದಿತ್ತು. ಹೀಗಾಗಿ, ಅವರೂ ಯಾವುದೇ ಯೋಚನೆಗೊಳಗಾಗದೇ, ಬಂದು ನಮ್ಮೊಂದಿಗೆ ಸಹಕರಿಸಿದರು.

"ಚನ್ನಪ್ಪ ಚನಗೌಡ ನಾಟಕ"ದಲ್ಲಿ ಅವರೆಲ್ಲರೂ ಪಾತ್ರ ಮಾಡಿದ್ದರು. ನಾವಷ್ಟೇ ತಯಾರಾಗಬೇಕಿತ್ತು. ಕೇವಲ ಮೂರೇ ದಿನದಲ್ಲಿ ನಾಟಕ ಅಭ್ಯಾಸ ಮಾಡಿ ಪ್ರದರ್ಶಿಸಿದೆವು. ನಾಟಕವೂ ಚೆನ್ನಾಗಿ ಕಳೆಗಟ್ಟಿತು. ಮುಂದೆ ಎಲ್ಲಿ ಹೋದರೂ ಇದೇ ನಾಟಕವನ್ನು ಮೊದಲೇ ಪ್ರದರ್ಶಿಸುವಂತಾಯ್ತು.

ನನ್ನ ಪತ್ನಿಯ ಅವಸಾನದ ನಂತರ, ಕೆಲವಾರು ತಿಂಗಳಲ್ಲಿಯೇ ನನ್ನತ್ತೆ ತೀರಿದ ವಿಷಯ ತಡವಾಗಿ ತಿಳಿಯಿತು. ಅಂತ್ಯಸಂಸ್ಕಾರ ಮುಗಿದ ನಂತರ, ನನ್ನ ಅಳಿಯ, ನಮ್ಮ ವಿಳಾಸ ಪತ್ತೆ ಮಾಡಿ, ಪತ್ರ ಮುಖೇನ ನಮಗೆ ತಿಳಿಸಿದ್ದ. ನಾಗಣ್ಣನವರ ಮುಖಾಂತರ, ಮತ್ತೊಂದು ಆಘಾತಕಾರಿ ವಿಷಯ ಎಲಿವಾಳ ಶಿದ್ದಯ್ಯಸ್ವಾಮಿಯವರು ದೈವಾಧೀನರಾದ ಸುದ್ದಿ ಅವರ ಅಂತ್ಯಸಂಸ್ಕಾರಕ್ಕೆ ಎಲಿವಾಳಕ್ಕೆ ಹೋಗಿ ಬಂದ ವಿಷಯ ತಿಳಿದು, ಬಹಳ ಕಳವಳಗೊಂಡೆ.

**6.6.1989** ಹರವಿಗೊಂಡನಹಳ್ಳಿಯಲ್ಲೇ ಇದ್ದುಕೊಂಡು, ಪಕ್ಕದಲ್ಲೇ ಇದ್ದ ವೇದಾವತಿ ದಂಡೆಯಲ್ಲಿದ್ದ ದೊಡ್ಡ ಊರು ಜಾಜೂರು. ಪೊಲೀಸ್ ಸ್ಟೇಷನ್, ಆಸ್ಪತ್ರೆ, ಹೈಸ್ಕೂಲ್, ಸಂತೆ ನಡೆಯುವ ಸ್ಥಳ. ಸಂಚಾರಿ ಚಿತ್ರ ಮಂದಿರ ಇದ್ದ ನಿವೇಶನದಲ್ಲೇ ನಮ್ಮ ಥಿಯೇಟರ್ ನಿರ್ಮಿಸಿ, ಅಲ್ಲಿಯ ಪ್ರಮುಖರಿಂದ ಹಾಗೂ ಪೊಲೀಸ್, ಸ್ಟೇಷನ್ನಿನಿಂದ ಅಪ್ಪಣೆ ಪಡೆದು, ನಾಟಕ ಪ್ರಾರಂಭಿಸಿದೆವು. ನಮಗೆ ಒಳ್ಳೆಯ ಪ್ರೋತ್ಸಾಹ ಸಿಕ್ಕು ಸುಮಾರು

ಇಪ್ಪತ್ತು ಪ್ರದರ್ಶನ ಮಾಡಿ, ನದಿಯ ಆಚೆ ದಂಡೆಯಲ್ಲಿದ್ದ ನಾಗಗೊಂಡನಹಳ್ಳಿಗೆ, ಮುಕ್ಕಾಂ ಮಾಡಿದೆವು. ಬಳ್ಳಾರಿ ಲಲಿತಮ್ಮನವರ ಸಂಘದಲ್ಲಿ, ಮಖಮಲ್ ಟೋಪಿನಾಟಕದ ಶಿರೋಮಣಿ ಪಾತ್ರದಲ್ಲಿ ಮಿಂಚಿದ ನಾಗರಾಜ ಇದೇ ಊರಿನವರು. ಜಾಜೂರಿನಲ್ಲಿ ನಾಟಕ ಮಾಡುವಾಗ, ಪ್ರತಿದಿನ ಬರುತ್ತಿದ್ದರು. ಇವರ ಸಲಹೆ ಮೇರೆಗೆ, ನಾಗಗೊಂಡನಹಳ್ಳಿಗೆ ನಾಟಕ ಮಾಡಿದೆವು.

**14.12.1989** ನಾಗಗೊಂಡನಹಳ್ಳಿಯಲ್ಲಿ ಕೆಲವಾರು ದಿನಕಳೆದು, ಹರವಿಗೊಂಡನಹಳ್ಳಿಗೆ ವಾಪಾಸ್ ಬಂದು, ದಕ್ಷಿಣ ದಿಕ್ಕಿನಲ್ಲಿದ್ದ ವೃಂದಾವನಹಳ್ಳಿ ಕ್ಯಾಂಪ್ ಮಾಡಿ, ಅಲ್ಲಿಯೂ ಇಪ್ಪತ್ತು ದಿನ ಕಾಲ ಹಾಕಿ, ಪುನಃ ಹರವಿಗೊಂಡನಹಳ್ಳಿಗೆ ಬಂದು, ಎರಡನೇ ಸಲ ಚಲ್ಮೇಶ ಜಾತ್ರೆ ಮುಗಿಸಿಕೊಂಡು, ಅನಂತಪುರಂ ಜಿಲ್ಲೆ, ಮಡಕಶಿರ ತಾಲೂಕಿನ ಹೇಮಾವತಿ, ಸಿದ್ದೇಶ್ವರ ಜಾತ್ರೆ ಶಿವರಾತ್ರಿಗೆ ಅಲ್ಲಿಗೆ ಕ್ಯಾಂಪ್ ಮಾಡಿದೆವು.

25.2.1990 ನೋಳಂಬರ ರಾಜಧಾನಿಯಾಗಿದ್ದ ಸ್ಥಳ ಹೇಮಾವತಿ ಊರು. ಬೃಹದ್ಗಾತ್ರದ ಈಶ್ವರ ಲಿಂಗು, ಬಸವಣ್ಣನ ಶಿಲಾವಿಗ್ರಹಗಳಿಂದಲೂ, ಮಹಾನ್‌ಶಿಲ್ಪಿಗಳಿಂದ ನಿರ್ಮಿಸಲ್ಪಟ್ಟ ದೊಡ್ಡ ದೊಡ್ಡ ದೇವಸ್ಥಾನಗಳಿಂದ ಕೂಡಿದ ಸ್ಥಳ. ಆಳೆತ್ತರದ ಸಿದ್ದೇಶ್ವರ ಸ್ವಾಮಿ ಮೂರ್ತಿಯೇ ಕೇಂದ್ರ ಬಿಂದು. ಈ ಸ್ವಾಮಿಯ ಜಾತ್ರೆಯೇ ನಡೆಯುವುದರಲ್ಲಿತ್ತು. ಶಿವರಾತ್ರಿ ದಿನವೇ ರಥೋತ್ಸವ ಜರುಗುವುದು. ಅಪಾರ ಜನಸ್ತೋಮವೇ ನೆರೆದಿತ್ತು. ಅಲ್ಲಿಯ ಮುಖ್ಯಸ್ಥರಾಗಿದ್ದ ಬಸವೇಗೌಡರು ನಮಗೆಲ್ಲ ವ್ಯವಸ್ಥೆ ಮಾಡಿದರು. ಅಲ್ಲಿಯೂ ಟೂರಿಂಗ್ ಟಾಕೀಸ್ ಕನ್ನಡ ಚಲನಚಿತ್ರಗಳ ಪ್ರಸಾರ ನಡೆಸಿತ್ತು. ನಮ್ಮ ನಾಟಕಗಳೂ ಪ್ರಾರಂಭವಾದುವು. ಜಾತ್ರೆಯ ಸಮಯದಲ್ಲಿ ಆದಾಯ ಅಷ್ಟಕಷ್ಟೆ ಆಯಿತು. ನಾಟಕ ನೋಡುವ ಜನ ಕಡಿಮೆ.

ನಮ್ಮಲ್ಲೇ ಸೇವೆ ಸಲ್ಲಿಸುತ್ತಿದ್ದ ಹಾರ್ಮೋನಿಯಂ ಮಾಸ್ಟರ್ ಇಂದುಧರಯ್ಯನವರು, ಅವರಿಗೆ ಪರಿಚಯವಿದ್ದ, ದಾವಣಗೆರೆಯವರೇ ಆದ, ಶ್ರೀ ದೇವರ ಬೆಳಕೆರೆ ರುದ್ರಪ್ಪನವರ ಮಗನಿಗೆ, ಬೆಳೆದು ನಿಂತ ನನ್ನ ಮಗಳನ್ನು ಕೊಡಿಸುವುದಾಗಿ ತಿಳಿಸಿದ್ದರಂತೆ. ಅದರಂತೆ, ಹರವಿಗೊಂಡನ ಹಳ್ಳಿಯಲ್ಲಿದ್ದಾಗಲೇ ನನ್ನ ತಮ್ಮ ಸೋಮನಾಥ ಬಂದು, ನನ್ನ ಮಗಳನ್ನು ಕರೆದುಕೊಂಡು ದಾವಣಗೆರೆಗೆ ಹೋಗಿ, ಕನ್ಯಾ ತೋರಿಸುವಶಾಸ್ತ್ರ ಮಾಡಿದ. ನನ್ನ ಮಗಳನ್ನು ಕರೆತಂದ.

ಹೇಮಾವತಿಯಲ್ಲಿ ನಾವಾಡುವ ಚನ್ನಪ್ಪಗೌಡ ನಾಟಕ ಮೆಚ್ಚುಗೆ ಪಡೆದು, ಪ್ರತಿ, ಓಣಿಯವರೂ, ಅವರವರ ಓಣಿಯಲ್ಲೇ 500/-ರೂಪಾಯಿಗಳನ್ನು ಕೊಟ್ಟು ನಾಟಕಗಳನ್ನು ಆಡಿಸುತ್ತಿದ್ದರು. ಹೇಮಾವತಿ ಪಕ್ಕದ ಗ್ರಾಮ ಕೆಂಕೆರಾ ಎಂಬ

ಗ್ರಾಮದಲ್ಲೂ ಇದೇ ರೀತಿ ನಾಟಕಗಳಾದುವು.

ಮಗಳ ಮದುವೆ ಸಮಯ ಹತ್ತಿರ ಬಂದಿದ್ದರಿಂದ, ಸಂಘದಲ್ಲಿದ್ದ ಶ್ರೀ ನಾಗಣ್ಣ ಅವರ ಆಪ್ತ ಬಳಗವನ್ನು ಬೀಳ್ಕೊಟ್ಟು, ನಮ್ಮ ಕುಟುಂಬ ಬಳಗದೊಂದಿಗೆ ದಾವಣ ಗೆರೆಗೆ ಬಂದು, ಸಾಲ ಸೋಲ ಮಾಡಿ, ಮಗಳನ್ನು ಧಾರೆ ಎರೆದುಕೊಟ್ಟೆವು. ಆಕೆಯನ್ನು ಆಕೆಯ ಪತಿ ಮನೆಗೆ ಕಳಿಸಿ, ಬಂದದ್ದಷ್ಟೇ, ಈವರೆಗೂ (2016)ಆಕೆಯ ಮುಖ ದರ್ಶನಕ್ಕು ಅವಕಾಶವಿಲ್ಲ. ಎರಡು ಮೂರು ಸಾರೆ ಮಗಳನ್ನು ಕರೆಯಲು ಹೋದಾಗ್ಯೂ ಬೀಗರಿಂದ ಅವಮಾನಿತರಾಗಿ, ಹಿಂತಿರುಗಿದೆವು. ಕಾರಣ ನಾವು ನಾಟಕದವರು.

ನನ್ನ ಮಗಳು ಕೂಡಾ ತಾನು ನಾಟಕದವರ ಮಗಳೆಂದು, ಯಾರ ಬಾಯಿಂದಲೂ ಅನ್ನಿಸಿಕೊಳ್ಳದೇ, ನಾಲ್ಕು ಮಕ್ಕಳ ತಾಯಿಯಾಗಿ, ಬಂದ ಕಷ್ಟಗಳನ್ನೆದುರಿಸಿ, ಈವರೆಗೂ, ಜೀವನ ಸಾಗಿಸುತ್ತಿದ್ದಾಳೆ. ಆದರೆ ನಮಗೆ ಮಾತ್ರ ಅವಳ ಮುಖ ನೋಡಲು ಸಾಧ್ಯವಾಗುತ್ತಿಲ್ಲ. ಇಂತಹ ಅನೇಕ ನೋವುಗಳು ಅವಮಾನಗಳು ನನ್ನ ಒಡಲಲ್ಲಿ ಮಡುಗಟ್ಟಿ ನಿಂತಿವೆ.

ಪುನಃ ನಮ್ಮ ಉಪಜೀವನಕ್ಕೆ ಹೇಮಾವತಿಗೆ ಬಂದೆವು. ನನ್ನ ಹೆಂಡತಿಯ ಅಂತ್ಯ ಸಂಸ್ಕಾರದ ನಂತರ ನಡೆದ ವಿದ್ಯಾಮಾನಗಳು ಬಲು ಘೋರ. ಮಗಳನ್ನು ಗಂಡನ ಮನೆಗೆ ಕಳಿಸಿದ ನಂತರ, ನಾನು, ನನ್ನ ಮೂರು ಜನ ಮಕ್ಕಳು, ತಮ್ಮ-ತಮ್ಮನ ಹೆಂಡತಿ, ಇಂದುಧರಯ್ಯ ಹಾರ್ಮೋನಿಯಂ ಮಾಸ್ತರ ಹೀಗೆ ಕೆಲವೇ ಸದಸ್ಯರಿಂದ, ಹೇಮಾವತಿಗೆ ಬಂದು, ಹತ್ತಿರದಲ್ಲೇ ಇದ್ದ ಆಂಧ್ರಕ್ಕೆ ಸೇರಿದ, ಶಿವರಾಂ ಎಂಬ ಗ್ರಾಮಕ್ಕೆ ಮುಕ್ಕಾಂ ಮಾಡಿ, ಹಿರಿಯೂರಿನಿಂದ ಮಾರುತಿ, ರಾಧಮ್ಮ, ಶಾರದಮ್ಮ (ಜಮಖಂಡಿ ಕಂಪನಿಯಲ್ಲಿ ಸೇವೆ ಸಲ್ಲಿಸಿದವರು) ಇವರನ್ನು ಕರೆತಂದು, ಕೆಲವಾರು ನಾಟಕಗಳನ್ನು ಪ್ರದರ್ಶಿಸಿದೆವು.

29.5.1990ರಂದು, ನನ್ನ ತಮ್ಮನ ಹೆಂಡತಿ ಮೂರನೇ ಮಗುವಿಗೆ ಜನ್ಮ ನೀಡಿದಳು. ಈಕೆಯ ಬಾಣಂತನಕ್ಕೋಸ್ಕರ ಕಾಲ ತಳ್ಳಲೇಬೇಕಾಯ್ತು. ಸ್ವಲ್ಪ ಮಟ್ಟಿಗೆ ಚೇತರಿಸಿಕೊಂಡು, ಹೇಮಾವತಿಯಿಂದ, ಎತ್ತಿನ ಬಂಡಿ ಮೂಲಕ ಶಿವರಾಂಗೆ ಬಂದು, ನಾಟಕ ಮುಗಿಸಿ, ವಾಪಾಸ್ ಹೋಗುತ್ತಿದ್ದರು. ಹೀಗೆ ಕಷ್ಟದಿಂದ ಕಾಲಹಾಕಿ, ಚಿಟ್ನಡುಕು ಗ್ರಾಮಕ್ಕೆ ಮುಕ್ಕಾಂ ಮಾಡಿದೆವು.

ಅನಂತಪುರಂ ಜಿಲ್ಲಾ-ಮಡಕಶಿರಾ ತಾಲೂಕು ಅಮರಾಪುರಂ ಹೋಬಳಿಯ ಒಂದು ಸಣ್ಣ ಗ್ರಾಮ ಚಿಟ್ನಡುಕು. ವ್ಯವಹರಿಸುವುದು ಮಾತ್ರ ತೆಲುಗು ಭಾಷೆ ಮಾತನಾಡುವುದು, ನಾಟಕ ಅಭ್ಯಸಿಸುವುದು ಮನೆಗಳಲ್ಲೂ ಕನ್ನಡ ಭಾಷೆಯಲ್ಲೇ ಹೀಗಿದ್ದ ವಾತಾವರಣ.

ಚಿಟ್ನಡುಕು ಗ್ರಾಮ ಆಂಧ್ರದ ಗಡಿಭಾಗದ ಊರು–ಈ ಊರಿಗೆ ಸಮೀಪ ಅಂದರೆ, ಕೇವಲ ಒಂದು ಕಿಲೋಮೀಟರ್ ಅಂತರದಲ್ಲಿ ಕರ್ನಾಟಕದ ಗಡಿಭಾಗ ದಲ್ಲಿದ್ದ ಊರು. ಅರಸಿಕೆರೆ. ಈ ಊರಿನಿಂದಲೇ ನಾಟಕ ನೋಡಲು, ಹೆಚ್ಚಿನ ಸಂಖ್ಯೆಯಲ್ಲಿ ಜನಬರುತ್ತಿದ್ದರು. ಚಿಟ್ನಡುಕು ಗ್ರಾಮದಲ್ಲಿ ನಮ್ಮ ನಾಟಕ ಪ್ರಾರಂಭಿಸಲು, ನಟನಟಿಯರ ಕೊರತೆ ತುಂಬಲು ದಾವಣಗೆರೆಯಿಂದ, ಮೀನಾಕುಮಾರಿ, ಜ್ಯೋತಿಕಲಾ, ಶಶಿಕಲಾ, ಸೌಮ್ಯಶ್ರೀ, ವಾಸುದೇವ ಕೋಪರ್ಡೆ ಇವರನ್ನು ನಾಟಕ ಬದಲಾಯಿಸಿದಾಗೊಮ್ಮೆ ಕರೆತಂದು, ನಾಟಕ ಪ್ರದರ್ಶಿಸುತ್ತಿದ್ದೆವು.

ಚಿಟ್ನಡುಕು ಗ್ರಾಮದಲ್ಲಿ 1990ಆಗಷ್ಟ್ (ಗಣೇಶನ ಹಬ್ಬದ ನಂತರ) ಪ್ರಾರಂಭಿಸಿದೆವು. ಸುಮಾರು, ಅಕ್ಟೋಬರ್‌ವರೆಗೂ ನಡೆಸಿ, ಅಲ್ಲಿಂದ ಬಸವನಹಳ್ಳಿಗೆ ಮುಕ್ಕಾಂ ಮಾಡಿ ದಿನಬಿಟ್ಟು ದಿನ, ನಾಟಕಕ್ಕೆ ಬಂಡಿ ಮೂಲಕ ಹೋಗಿ ನಾಟಕ ಪ್ರದರ್ಶಿಸುತ್ತಿದ್ದೆವು. ರೇಣುಕ ನಾಟಕದ ಸಲುವಾಗಿ, ಶ್ರೀ ಹೊಳೆಗುಂದಿ ಸೋಮಣ್ಣ ಮತ್ತು ಕಸ್ತೂರಮ್ಮನವರನ್ನು ಕರೆತಂದು, ನಾಟಕ ಪ್ರದರ್ಶಿಸಿದ್ದಾಯ್ತು. ಅಲ್ಲಿಯೂ ಹೆಚ್ಚಿನ ಆದಾಯವಾಗದೇ, ಹತ್ತಿರದಲ್ಲೇ ಇದ್ದ ಅರಸಿಕೆರೆಗೆ, ನಾಟಕ ಪ್ರದರ್ಶಿಸಿದ್ದಾಯ್ತು. ಪಾಪಿ ಕಾಲಿಟ್ಟಕಡೆ, ಸಮುದ್ರ ಮೊಣಕಾಲಿನವರೆಗೂ ನೀರು ಎಂಬಂತೆ, ನನ್ನ ಪಾಡಾಯ್ತು.

ಆದರೂ ಕಾಟಬಿಡದೆ, ಅಲ್ಲಿಂದ ಜಂಗಮರ ಹಳ್ಳಿ ಎಂಬ ಗ್ರಾಮಕ್ಕೆ ಹೋಗಿ ಒಂದು ನಾಟಕ ಮಾಡಿದೆವು. ಅಲ್ಲಿ ನಡೆದ ಒಂದು ಹಾಸ್ಯ ಪ್ರಸಂಗವನ್ನು ನೆನೆಯಲೇ ಬೇಕು. ಜಂಗಮರ ಹಳ್ಳಿಯಲ್ಲಿ ಅನೇಕ ವರ್ಷಗಳ ಹಿಂದೆ, ಕಲಿತ, ಭಕ್ತಮಾರ್ಕಂಡೇಯ ನಾಟಕ ಪ್ರದರ್ಶಿಸಿದ್ದರಂತೆ, ಆಗ ಪಾತ್ರ ಮಾಡಿದ ಪಾತ್ರಧಾರಿಗಳೇ ಪ್ರತಿವರುಷ ನಾಟಕ ಪ್ರದರ್ಶಿ ಸುತ್ತಾ ಬಂದಿದ್ದರು. ಭಕ್ತ ಮಾರ್ಕಂಡೇಯನ ಪಾತ್ರ ಮಾಡುವವರು. ಊರಿಗೆ ಯಜ ಮಾನರು ಸುಮಾರು, ಅವರ ವಯಸ್ಸು 70 ವರ್ಷವಾದರೂ ಇದ್ದಿರಬೇಕು. ಅವರೇ ಆ ಪಾತ್ರ ಮಾಡಬೇಕು. ಹೀಗೆ ರೀತಿ ರಿವಾಜುಗಳನ್ನು ಮಾಡಿಕೊಂಡು ಬಂದವರು.

ನಮ್ಮ ವ್ಯವಸ್ಥೆಯಲ್ಲೇ ನಾಟಕ ಪ್ರದರ್ಶಿಸಲು, ಸಿದ್ಧರಾಗಿ, 500ರೂ.ಗಳನ್ನು ಕೊಟ್ಟು, ನಾಟಕ ಪ್ರದರ್ಶಿಸಲು ಸಿದ್ಧರಾದರು. ನಾಟಕ ಪ್ರಾರಂಭವೂ ಆಯ್ತು. ಮಾರ್ಕಂಡೇಯನ ಪಾತ್ರ ಮಾಡಿದವರನ್ನೇ (ಯಜಮಾನರನ್ನು) ತೊಟ್ಟಿಲಲ್ಲಿ ಮಲಗಿಸಿ, ಜೋಗುಳ ಹಾಡನ್ನು ಅನ್ನುವಾಗ, ಮಗುವಾಗಿದ್ದ ಮಾರ್ಕಂಡೇಯ, ಸಣ್ಣ ಮಕ್ಕಳಂತೆ, ಕೈಕಾಲುಗಳನ್ನು ಆಡಿಸುವ ದೃಶ್ಯವನ್ನು ಕಂಡು, ಯಾರು ತಾನೇ ನಗಲಿಕ್ಕಿಲ್ಲ ಪ್ರತಿ ಸ್ತ್ರೀ ಪಾತ್ರವನ್ನು ಗಂಡಸರೇ ನಿರ್ವಹಿಸಿದರು.

ಜಂಗಮರ ಹಳ್ಳಿ ಮುಗಿಸಿ, ವಾಪಾಸ್, ಚಿಟ್ನಡುಕು ಗ್ರಾಮಕ್ಕೆ ಬಂದೆವು. ಸಂಘದ ಅರ್ಧ ಸಾಮಾನು ಬಸವನಹಳ್ಳಿಯಲ್ಲೂ, ಇನ್ನರ್ಧ ಚಿಟ್ನಡುಕುವಿನಲ್ಲೂ ಉಳಿದಿದ್ದವು. ಕುಟುಂಬ ಸದಸ್ಯರ ವಿನಹ ಎಲ್ಲರೂ ನಮ್ಮನ್ನು ತೊರೆದು ಹೊರಟುಹೋದರು.

ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿದ ನಾವು ಬದುಕಿದರೆ ಮತ್ತು ಸಂಘವನ್ನು ಕಟ್ಟಬಹುದು, ಪುನಃ ಸೀನ್ಸ್ ಪರಿಕರಗಳನ್ನು ಮಾಡಬಹುದು ಎಂದು ಯೋಚಿಸಿ, ಎರಡು ದಿನ ಹೇಗಾದರೂ ಕಾಲಹಾಕಿರಿ, ದಾವಣಗೆರೆಗೆ ಹೋಗಿ ಬರುತ್ತೇನೆಂದು, ನನ್ನ ಮಕ್ಕಳಿಗೆ ಧೈರ್ಯ ಹೇಳಿ, ದಾವಣಗೆರೆಗೆ ಬಂದು, ನನ್ನ ಆತ್ಮೀಯ ಜಯಣ್ಣನವರಿಗೆ ಪರಿಸ್ಥಿತಿಯನ್ನೆಲ್ಲಾ ವಿವರಿಸಿದೆ. ಎರಡು ದಿನ ತಡೆಯಿರಿ, ಹಣದ ವ್ಯವಸ್ಥೆ ಮಾಡುತ್ತೇನೆ ಎಂಬ ಅವರ ಆಶ್ವಾಸನೆ ಮೇರೆಗೆ, ಎರಡು ದಿನ ಕಾಲ ತಳ್ಳುವುದರೊಳಗಾಗಿ, ನನ್ನ ಮಾನಸಿಕ ಸ್ಥಿತಿ, ಡೋಲಾಯಮಾನವಾಗಿ ಹೋಯಿತು. ಜಯಣ್ಣನವರಿಂದ, ಸ್ವಲ್ಪ ಮಟ್ಟಿಗೆ ಹಣದ ಸಹಾಯ ಪಡೆದು, ಚಿಟ್ನಡುಕುವಿಗೆ ಬಂದೆ.

ಅಲ್ಲಿಯ ಪರಿಸ್ಥಿತಿ, ನನ್ನ ಮಕ್ಕಳು, ಯಾರಾದರೂ ಕರೆದು ಊಟ ಮಾಡಿಸಿದರೆ, ಮಾಡಿ, ಒಪ್ಪತ್ತು ಉಪವಾಸ ಮಲಗಿ, ಎರಡು ದಿನ ಕಾಲ ಹಾಕಿದ್ದರು. ಕೆಲವೊಂದು, ಕಾಗದ ಪತ್ರಗಳನ್ನೂ, ಇದ್ದ ಒಂದು ಲೆಗ್ ಹಾರ್ಮೋನಿಯಂ ಪೆಟ್ಟಿಗೆ, ಕೆಲವು ಫೋಟೋಗಳನ್ನು ತೆಗೆದುಕೊಂಡು ಸಂಘದ ಸಾಮಾನುಗಳೆಲ್ಲವನ್ನೂ ಎಲ್ಲೆಂದರಲ್ಲಿ ಬಿಟ್ಟು, ಮಕ್ಕಳೊಂದಿಗೆ ದಾವಣಗೆರೆಗೆ ಹೊರಟು ಬಂದೆ.

1991 ಜುಲೈ ದಾವಣಗೆರೆ –ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕಲಾವಿದರಿಗೆ ಆಗುವ ಅನುಕೂಲತೆಗಳಾಗಲೀ, ಕಲೆಗೆ ಸಂಬಂಧಪಟ್ಟ ಕಾರ್ಯಕ್ರಗಳಾಗಲೀ, ಸಮಾಜದಲ್ಲಿ ನಡೆಯಿಂದ ಕಲೆಯ ಚಟುವಟಿಕೆಗಳಾಗಲೀ, ನಮಗಾವೂ ತಿಳಿಯುತ್ತಿರಲಿಲ್ಲ. ಅಂಥ ಗ್ರಾಮಗಳಲ್ಲಿ ಸಂಚರಿಸಿ, ಮಬ್ಬು ಗತ್ತಲಿನಲ್ಲಿ ತೊಳಲಾಡುತ್ತಿದ್ದ ನಮಗೆ, ದಾವಣಗೆರೆಯಲ್ಲಿ ಸ್ವಲ್ಪ ಬೆಳಕಿನ ಸೆಲೆಯನ್ನು ಕಾಣುವಂತಾಯ್ತು.

ದಿನಪತ್ರಿಕೆಗಳನ್ನು ನೋಡುವುದಾಗಲಿ, ದಿನನಿತ್ಯ ನಡೆಸಲು ಸಾಮಾಜಿಕ ಚಟುವಟಿಕೆಗಳು ತಿಳಿಯಲು ಅವಕಾಶವಾಯ್ತು ನಾವು ಬಂದ ತಕ್ಷಣ. ನನ್ನ ಕಿರಿಯ ಸಹೋದರನ ಮನೆಗೆ ಹೋದೆವು. ನಮ್ಮ ತಾಯಿಯವರಿದ್ದುದರಿಂದ ಕೆಲದಿನ ಇರಲು ಅವಕಾಶ ಸಿಕ್ಕು ಪ್ರತಿನಿತ್ಯ ಅಕ್ಕಿ ತಂದುಕೊಟ್ಟು ಊಟ ಮಾಡುತ್ತಿದ್ದೆವು. ನನ್ನ ಕಿರಿಯ ಮಗ ಮಲ್ಲಿಕಾರ್ಜುನನ್ನು ಶಾಲೆಗೆ ಸೇರಿಸಲೋಸುಗ ಪರಿತಪಿಸುತ್ತಿರುವಾಗ, ನನ್ನ ಜೊತೆಯಲ್ಲೇ ವಿದ್ಯಾಭ್ಯಾಸ ಮಾಡಿದ ಅಶ್ವಥನಾರಾಯಣ ಮತ್ತು ವಸಂತರಾವ್ ಎಂಬ ಇಬ್ಬರೂ ಸ್ನೇಹಿತರು, ಮಹಾತ್ಮಾ ವಿದ್ಯಾಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು. ಕರ್ಮಧರ್ಮ ಸಂಯೋಗದಿಂದ ಅವರ ಭೆಟ್ಟಿಯಾಗಿ ಮಗನನ್ನು, ಅವರ ಶಾಲೆಗೆ ಸೇರಿಸಿದೆ. 5ನೇ ತರಗತಿಯಿಂದ ನನ್ನ ಮಗನ ವಿದ್ಯಾಭ್ಯಾಸ ಮುಂದುವರೆಯಿತು.

ಸಹೋದರರ ಮನೆಯಲ್ಲಿ ಎಷ್ಟು ದಿನ ಇರುವುದು ಎಂದು ಯೋಚಿಸಿ, ಕೊಂಡಜ್ಜಿ ರಸ್ತೆಯ, ವಿಜಯ ನಗರ ಬಡಾವಣೆಯಲ್ಲಿ ನಿರ್ಮಾಣ ಹಂತದಲ್ಲಿದ್ದ ಪೋಲೀಸರೊಬ್ಬರ ಮನೆಯನ್ನು 150ರೂಪಾಯಿ ಬಾಡಿಗೆಯಂತೆ ಗೊತ್ತು ಮಾಡಿ ಉಳಿದೆವು. ನನ್ನ ಮೊದಲನೇ ಮಗ ತನ್ನ ಪಾಡು ತಾನು ನೋಡಿಕೊಂಡ. ಎರಡನೆ ಮಗ ಕೊಟ್ರೇಶ ಬಟ್ಟೆ ಅಂಗಡಿಯೊಂದರಲ್ಲಿ ತಿಂಗಳಿಗೆ 250ರೂ. ಸಂಬಳಕ್ಕೆ ದುಡಿಯಲು ನಿಂತ. ನಾನು ಯಥಾರೀತಿ ಬಾತಿ ಜಯಣ್ಣನವರ ಬಳಿ ಬರುವುದು, ಅವರೊಂದಿಗೆ ಟೀ ಟಿಫನ್ ಮಾಡುವುದು ಸಂಜೆ ಮನೆಗೆ ಬರುವುದು ಇದು ನನ್ನ ಕಾಯಕವಾಯಿತು.

ಮಗಳ ಮದುವೆಗೆ ಮಾಡಿದ ಸಾಲದವರ ಕಿರಿಕಿರಿ ಬೇರೆ ಹೀಗಿರುವಾಗ ತುರುವನೂರಿನಲ್ಲಿದ್ದ ನನ್ನ ತಮ್ಮ ಮಂಜುನಾಥ ನೀಡಿದ ಸುದ್ದಿಯೊಂದಿಗೆ ಬಂದು ಗಣೇಶನ ಹಬ್ಬಕ್ಕೆ ರೇಣುಕ ನಾಟಕವನ್ನು ಪ್ರದರ್ಶಿಸಲು ಅವಕಾಶ ಸಿಕ್ಕಿದೆಯೆಂದು, ಆ ನಾಟಕದ ಸಂಭಾವನೆಯನ್ನು 4000/–ರೂ.ಗಳೆಂದು ತಿಳಿಸಿದ ಪ್ರಯುಕ್ತ ವ್ಯವಸ್ಥೆಗೊಳಿಸಿದೆವು. 13.9.1991ರಂದು ರೇಣುಕ ನಾಟಕವನ್ನು ಪ್ರದರ್ಶಿಸಿದೆವು. ಕಲಾವಿದರ ಸಂಭಾವನೆ ಕೇವಲ 250ಗಳು ಮಾತ್ರ. ಶ್ರೀ ಮಲ್ಲಿಕಾರ್ಜುನಸ್ವಾಮಿಗಳ ಸಲಹೆ ಮೇರೆಗೆ, ಎಲ್ಲ ವ್ಯವಸ್ಥೆಯಿಂದೊಡಗೂಡಿದ ರಂಗ ಸಜ್ಜಿಕೆಯಲ್ಲಿ ಪುನಃ ತುರುವನೂರಿನಲ್ಲಿ ಮುಕ್ಕಾಂ ಮಾಡಿ 26.11.1991 ರಿಂದ 31.11.1991ರವರೆಗೂ ನಾಟಕ ಪ್ರದರ್ಶಿಸಿ ದಾವಣಗೆರೆಗೆ ಮರಳಿದೆವು.

ಮಗಳ ಮದುವೆಗೆ ಮಾಡಿದ ಸಾಲಗಾರರ ಒತ್ತಡ ಬೇರೆ. ಅವರು ಮತ್ತಾರೂ ಅಲ್ಲ. ನನ್ನ ಮಗಳ ಗಂಡನ ಚಿಕ್ಕಪ್ಪನೇ ಒತ್ತಡ ತಂದವರು. ಅದಕ್ಕೆ ಕಾರಣವಿಷ್ಟೇ ಅವರ ಅಣ್ಣನ ಮಗಳೊಬ್ಬಳನ್ನು ನಮ್ಮ ನಟರಾಜನಿಗೆ ಮದುವೆ ಮಾಡಿಸಲು ಈ ಹುನ್ನಾರ ನಡೆಸಿದರು. ಮಕ್ಕಳ ದುಡಿಮೆಯಿಂದ ಸಾಲತೀರಿಸುವಂತಿಲ್ಲ ಹೀಗಾಗಿ ಪುನಃ ಮಲ್ಲಿಕಾರ್ಜುನ ಸ್ವಾಮಿಗಳ ಸಹಕಾರದಿಂದ ಹರಪನಹಳ್ಳಿ ತಾಲೂಕು ಗುಂಡಗತ್ತಿ ಮುಖಾಂ ಮಾಡಿದೆ. ಪ್ರತಿದಿನ ನನ್ನ ಮಕ್ಕಳು ಹಾಗೂ ಕೆಲವೊಂದು ಕಲಾವಿದರು ದಿನವೂ ದಾವಣಗೆರೆಯಿಂದ ಬಂದು ನಾಟಕ ಮುಗಿಸಿ ಹೋಗುವಂತೆ ವ್ಯವಸ್ಥೆ ಮಾಡಿತ್ತು.

ನನ್ನ ಅವಕಾಶ ಪರಿಸ್ಥಿತಿಯ ದುರ್ಲಾಭ ಪಡೆಯಲು, ನೆಂಟರಿಂದಲೂ, ಸಾಲಗಾರರ ಒತ್ತಡದಿಂದಲೂ, ಜರ್ಝರಿತನಾದೆನು. ಅಲ್ಲದೇ ನನಗೆ ತಿಳಿಯದಂತೆ ನನ್ನ ಮಗನ ಮನ ಒಲಿಸಲು ಶಕ್ತರಾದರು. ಮದುವೆ ಮಾತುಕತೆಗೆ ನನ್ನನ್ನು ಒತ್ತಾಯಪಡಿಸಿ, ಮದುವೆಯನ್ನು ಮಾಡಿ ಮುಗಿಸಿದ್ದಾಯ್ತು. ಯಥಾರೀತಿ, ಗುಂಡಗತ್ತಿ ಮುಖಾಂ ಮುಗಿಸಿ, ದಾವಣಗೆರೆಯಲ್ಲಿ ಕಾಲ ಹಾಕಿದ್ದಾಯ್ತು.

ಶ್ರೀ ರಾಮದಾಸರೆಂಬುವರು, ಸಾಗರದವರು, ಅಲ್ಲದೇ ಇವರು ಬೆಂಗಳೂರಿನಲ್ಲಿದ್ದು ಚಲನಚಿತ್ರದ ನಿರ್ದೇಶಕರೂ, ತಯಾರಕರೂ ಹೌದು ಇವರು

ಆರ್ಥಿಕ ತೊಂದರೆಯಿಂದ ಜಯಣ್ಣನವರ ಆಶ್ರಯದಲ್ಲಿದ್ದವರು. ಇವರ ಸಲಹೆಯ ಮೇರೆಗೆ, ಇವರ ಸಹಕಾರದಿಂದ ಸಾಗರದ ಮಾರಿಕಾಂಬ ಜಾತ್ರೆಗೆ ಮುಖಾಂ ಮಾಡಿದೆವು. ರಂಗಮಂದಿರ ನಿರ್ಮಾಣ, ಖರ್ಚುಗಳು, ಪ್ರಚಾರ ಎಲ್ಲವನ್ನೂ ಅವರೇ ಮಾಡಿ ನಾಟಕ ಪ್ರದರ್ಶನಕ್ಕೆ ಅಣಿಮಾಡಿದರು.

ಶ್ರೀ ಎಚ್.ಎನ್. ಮಲ್ಲಿಕಾರ್ಜುನಸ್ವಾಮಿಗಳ ಸೀನ್ಸ್, ಸೌಂಡ್, ವಗೈರೆ ಎಲ್ಲವನ್ನು ವ್ಯವಸ್ಥೆಗೊಳಿಸಿ, ನಮ್ಮ ಕುಟುಂಬ ಸದಸ್ಯರು ಹಾಗೂ ಕೊಡಗನೂರು ಜಯಕುಮಾರ ಮತ್ತು ರವಿಕಲಾ, ಮಹಬೂಬಅಲಿ, ಎಸ್. ಮಂಜುನಾಥ, ಸರೋಜಮ್ಮ ಇವರನ್ನೊಳಗೊಂಡು, ಬಸ್‌ಕಂಡಕ್ಟರ್ ನಾಟಕವನ್ನು, ದಿನಾಂಕ 4–3–1993ರಿಂದ ಪ್ರಾರಂಭಿಸಿ, 43ನಾಟಕಗಳನ್ನು ಪ್ರದರ್ಶಿಸಿದ್ದಾಯ್ತು.

ಸಾಗರದಲ್ಲೂ ನಮಗೆ ಅನುಕೂಲವಾಗಲಿಲ್ಲ. ಕಾರಣವಿಷ್ಟೆ, ನಮ್ಮನ್ನು ಕರೆದುಕೊಂಡು ಹೋದ, ಶ್ರೀ ರಾಮದಾಸರ ಮಕ್ಕಳು ನಮ್ಮ ಸಂಘದ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡಿ, ಸರಾಗವಾಗಿ ನಡೆಯುತ್ತಿದ್ದ, ನಮ್ಮ ವ್ಯವಸ್ಥೆಯನ್ನು ಹದಗೆಡಿಸಿದರು. ಇದರಿಂದ ಕಲಾವಿದರ ಸಂಭಾವನೆ–ಸೀನ್ಸ್ ಪರಿಕರಗಳ ಬಾಡಿಗೆ ನಿಲ್ಲುತ್ತಾ ಬಂದದ್ದರಿಂದ ಕಲಾವಿದರು ದೂರ ಸರಿದರು. ಮಲ್ಲಿಕಾರ್ಜುನ ಸ್ವಾಮಿಗಳು ಸೀನ್ಸ್‌ಗಳನ್ನು ದಾವಣಗೆರೆಗೆ ತರಲು ಲಾರಿ ಬಾಡಿಗೆ ಇಲ್ಲದೇ ಹತ್ತಿರವಿರುವ, ಹಳ್ಳಿಯೊಂದರ ಬಂಧುಗಳ ಮನೆಯಲ್ಲಿಟ್ಟು ಬಂದರು. ನಾವೆಲ್ಲರೂ ಅತಿ ತೊಂದರೆಯಿಂದ ದಾವಣಗೆರೆ ಸೇರಿಕೊಂಡೆವು. ಯಥಾರೀತಿ ದಾವಣಗೆರೆ ನಗರ ಸಭೆ ಆವರಣದಲ್ಲಿ ಕಲಾವಿದರೊಂದಿಗೆ ಹರಟೆ ಹೊಡೆಯಲು ಪ್ರಾರಂಭವಾಯ್ತು. ನಮಗೆ ಪರಿಚಯವಿದ್ದ ಕೆಲವೊಂದು ಪತ್ರಿಕೆ ವರದಿಗಾರರು ನಮ್ಮನ್ನು ಪ್ರೀತಿಯಿಂದ ನೋಡು ತ್ತಿದ್ದರು. ಎಷ್ಟೋ ದಿನಗಳ ನಂತರ ಸುಮ್ಮನೇ ಕುಳಿತಿರಲಾರದೆ ಹರಪನಹಳ್ಳಿ ತಾಲೂಕು ಕಮ್ಮತ್ತಹಳ್ಳಿಯಲ್ಲಿ ದಿನಾಂಕ 21–12–1993 ರಿಂದ 5 ನಾಟಕ ಪ್ರಯೋಗಿಸಿದೆವು.

ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾದ ಶ್ರೀಮತಿ ಚಿಂದೋಡಿ ಲೀಲಮ್ಮನವರು, ಅಕಾಡೆಮಿಯಿಂದ ಪ್ರತಿ ಜಿಲ್ಲೆಗೊಂದರಂತೆ, ಗ್ರಾಮೀಣ ರಂಗೋತ್ಸವ ಏರ್ಪಡಿಸಿ ಚಿತ್ರದುರ್ಗ ಜಿಲ್ಲೆಗೆ, ನಮ್ಮ ಜಯಲಕ್ಷ್ಮಿ ನಾಟಕ ಸಂಘಕ್ಕೊಂದು ಅವಕಾಶ ಕಲ್ಪಿಸಿ, ನಮಗೆ ಆದೇಶ ಕಳಿಸಿದರು. ಆ ಆದೇಶದ ಪ್ರಕಾರ ದಾವಣಗೆರೆ ತಾಲೂಕಿನ ದೊಡ್ಡ ಬಾತಿ ಗ್ರಾಮದಲ್ಲಿ 23.11.1993ರಲ್ಲಿ "ಮಾತೃದೇವೋ ಭವ" ಎಂಬ ನಾಟಕ ಪ್ರದರ್ಶಿಸಿದೆವು.

5–2–1994 ರಿಂದ 5–10–1994ವರೆಗೆ ಸುತ್ತಮುತ್ತಲಿರುವ ಗ್ರಾಮಗಳಲ್ಲಿ ಒಂದೊಂದೇ ನಾಟಕ–ಗಣೇಶೋತ್ಸವ ನಾಟಕಗಳು. ಕನ್ನಡ ಮತ್ತು ಸಂಸ್ಕೃತಿ

ಇಲಾಖೆಯಿಂದ ನಾಟಕಗಳನ್ನು ಪ್ರದರ್ಶಿಸಿ ಜೀವನ ಸಾಗಿಸಿದೆವು. ಕೇವಲ ಉದರ ಪೋಷಣೆಗೆ ಮಹತ್ವಕೊಡುವಂಥ ಸಮಯದಲ್ಲಿ 1994ರ ಅಕ್ಟೋಬರ್ ತಿಂಗಳಲ್ಲಿ ಒಂದು ಬೆಳಿಗ್ಗೆ ದಿನಪತ್ರಿಕೆಗಳಲ್ಲಿ ಕರ್ನಾಟಕ ನಾಟಕ ಅಕಾಡೆಮಿಯಿಂದ ಕಲಾವಿದರಿಗೆ ಪ್ರಶಸ್ತಿ ಕೊಡಮಾಡಿದ್ದನ್ನು ನೋಡುತ್ತಾ ಇರುವಾಗ ಆ ಲಿಸ್ಟಿನಲ್ಲಿ ನನ್ನ ಹೆಸರಿದ್ದದ್ದನ್ನು ನೋಡಿ, ಆಶ್ಚರ್ಯವಾಯ್ತು. ಚಿಂದೋಡಿ ಲೀಲಮ್ಮ ನವರು ನನ್ನನ್ನು ಪ್ರಶಸ್ತಿಗೆ ಆಯ್ಕೆ ಮಾಡಿದ್ದು, ಆಶ್ಚರ್ಯವಲ್ಲದೇ ಮತ್ತೇನು.

8.11.1994ರಂದು ಪ್ರಶಸ್ತಿ ಸಮಾರಂಭವನ್ನು ಬೆಂಗಳೂರಿನ, ಹೆಚ್. ನರಸಿಂಹಯ್ಯ ರಂಗ ಮಂದಿರದಲ್ಲಿ ಏರ್ಪಡಿಸಿದೆ. ಸಮಯಕ್ಕೆ ಸರಿಯಾಗಿ ಬರಬೇಕೆಂದು ಆದೇಶ ಬಂತು. ಬೆಂಗಳೂರಿಗೆ ಆ ಸಮಯಕ್ಕೆ ಹೋಗಬೇಕೆಂದರೆ ನನ್ನ ಬಳಿ ಹಣವಿರಲಿಲ್ಲ. ಅದೇ ಸಮಯಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಾಟಕ ಆಡಲು ಅವಕಾಶವಾಯ್ತು. ನಾಟಕ ಪ್ರದರ್ಶಿಸಿ ಬಂದ ಹಣದಲ್ಲಿ ಸ್ವಲ್ಪ ಉಳಿಸಿಕೊಂಡು ಬೆಂಗಳೂರಿಗೆ ಹೋದೆ. ಪ್ರಶಸ್ತಿ ಪಡೆದವರಲ್ಲಿ ಬಸವನಗೌಡರು ಮಣ್ಣೇರಿ (ನಮ್ಮ ಸಂಘದ ಭಾಮಾಸುರ ನಾಟಕದ ಮುಖ್ಯ ಪಾತ್ರಧಾರಿ ಹೂವಿನಹಡಗಲಿ ಹಣ್ಣಿ ವೀರಭದ್ರಪ್ಪ, ಕೆ. ನಾಗರತ್ನಮ್ಮ, ಫ್ಲೋರಿನಾ, ಮುರುಗೋಡು ರೇಣುಕಮ್ಮ, ಉಮೇಶ್ (ಚಿತ್ರನಟ), ಕೃಷ್ಣಚಂದ್ರ (ಬಾಳಪ್ಪನವರ ಅಳಿಯ)ಇದ್ದರು. ಅಲ್ಲದೇ ಬಾಳಪ್ಪನವರು ಉಪಸ್ಥಿತರಿದ್ದರು. ಇವರೆಲ್ಲರೊಂದಿಗೆ ಮಾತನಾಡುವಾಗ, ನಮ್ಮ ಸಂಘ ವೈಭವದಿಂದ ನಡೆದು ಬಂದ ರೀತಿ ಇವುಗಳನ್ನು ಮಾತಾಡುತ್ತಾ ನಮ್ಮ ಸಂಘಕ್ಕೆ 75 ವರ್ಷ ತುಂಬಿದ ಬಗ್ಗೆ ಬಾಳಪ್ಪ ಮಾತನಾಡಿದ್ದು ನನ್ನ ಮನಸ್ಸಿನಲ್ಲಿ ಉಳಿಯಿತು. ಡಾ. ಯು.ಆರ್. ಅನಂತಮೂರ್ತಿ ಪ್ರಶಸ್ತಿ ಮತ್ತು ಮೂರು ಸಾವಿರ ಚೆಕ್ ನೀಡಿ ಗೌರವಿಸಿದರು.

# ವಜ್ರ ಮಹೋತ್ಸವದ ಕನಸಿನಂತಹ ನೆನಪು

ಜಯಲಕ್ಷ್ಮಿ ನಾಟಕ ಸಂಘ ಜನ್ಮತಾಳಿ 75 ವರ್ಷದ ವಜ್ರಮಹೋತ್ಸವ ಆಚರಿಸಬೇಕೆಂಬ ಆಲೋಚನೆಗಳು ಮೈದುಂಬಿದವು. ಬರಿಗೈ ಬಂಟರಾದ ನಮ್ಮಿಂದ ಅದು ಸಾಧ್ಯವೇ ಎಂದು ನಾವು ನಿರುದ್ಯೋಗಿ ಕಲಾವಿದರೆಲ್ಲರೂ ದಾವಣಗೆರೆ ನಗರಸಭೆ ಆವರಣದಲ್ಲಿ ಹರಟೆಮಲ್ಲರಾಗಿ, ಪ್ರತಿದಿನ ಕಾಲಹರಣ ಮಾಡುತ್ತಿದ್ದೆವು. ಹೀಗಿರುವ ಸಮಯದಲ್ಲಿ ಸಾಹಿತಿಗಳಾದ ಮಲ್ಲಿಕಾರ್ಜುನ ಕಡಕೋಳ ಇವರು ನಾವಿದ್ದ ಸ್ಥಳಕ್ಕೆ ಬಂದು ನಮ್ಮ ಮಾತಿನಲ್ಲಿ ಅವರೂ ಭಾಗವಹಿಸಿದರು.

ವಜ್ರ ಮಹೋತ್ಸವವನ್ನು ಹಮ್ಮಿಕೊಳ್ಳಲು ಕೊನೇ ಪಕ್ಷ 60-70 ಸಾವಿರ ರೂಪಾಯಿಗಳಾದರೂ ಬೇಕು. ಸಂಬಂಧಪಟ್ಟ ಸಚಿವರನ್ನು ಕರೆಸಬೇಕು. ಕಂಪನಿಯಲ್ಲಿ ದುಡಿದ ಕಲಾವಿದರಿಗೆ, ಸನ್ಮಾನಿಸಲು, ಸ್ಮರಣ ಸಂಚಿಕೆ ಮಾಡಿಸಲು, ಪ್ರಿಂಟಿಂಗ್, ಪ್ರಚಾರ, ನಮ್ಮ ಕಂಪನಿಯದೇ ಒಂದು ನಾಟಕ ಪ್ರದರ್ಶಿಸಲು, ಕಲಾವಿದರ ಸಂಭಾವನೆ, ನೆನಪಿನ ಕಾಣಿಕೆ, ಹೀಗೆ ಹತ್ತು ಹಲವಾರು ಖರ್ಚಿನ ಬಾಬತ್ತಿಗೆ ಇಷ್ಟು ಹಣ ಬೇಕಾಗುತ್ತೆ ಎನ್ನುವ ಅಭಿಪ್ರಾಯವನ್ನು ಕಡಕೋಳರು ಸೂಚಿಸಿದರು.

ಇದಕ್ಕೊಂದು ಸಮಿತಿಯನ್ನು ಮಾಡಿದರೆ, ಒಳಿತೆಂದು, ಶ್ರೀಶ್ರೀ ಸದ್ಯೋಜಾತ ಶಿವಾಚಾರ್ಯರ ಸಾನಿಧ್ಯದಲ್ಲಿ ಶಾಮನೂರು ಶಿವಶಂಕರಪ್ಪನವರು, ಹೆಚ್.ಎಸ್. ಶಿವಶಂಕರ (ಈಗಿನ ಎಂ.ಎಲ್.ಎ) ಬಾತಿ ಚಂದ್ರಪ್ಪ, ಗಣೇಶ್ ಶೆಣೈ, ಬಾತಿ ಜಿ.ಹೆಚ್. ದೇವೇಂದ್ರಪ್ಪ, ಮಲ್ಲಿಕಾರ್ಜುನ ಕಡಕೋಳ, ಕಂಚಿಕೇರಿ ಶಿವಣ್ಣ, ಶಾಂತಾಪರಮೇಶ್, ಇನ್ನೂ ಕೆಲವು ಮಹನಿಯರಿಂದ ವಜ್ರ ಮಹೋತ್ಸವ ಸಮಿತಿಸಮಿತಿ ರಚನೆಯಾಯ್ತು.

ಶಾಂತಾ ಪರಮೇಶ್, ದೇವೇಂದ್ರಪ್ಪ, ಮಲ್ಲಿಕಾರ್ಜುನ ಕಡಕೋಳ ಗಣೇಶ ಶೆಣೈ, ಮತ್ತು ಕಂಚಿಕೇರಿ ಶಿವಣ್ಣ, ದಾವಣಗೆರೆಯ ಕೊಡುಗೈ ದಾನಿಗಳ ಬಳಿ ದೇಣಿಗೆಗೆ ಹೊರಟಾಗ, ನಮ್ಮೂರಿನ ಸಂಘ ಎಂಬ ಅಭಿಮಾನದಿಂದ ಜನರು ದೇಣಿಗೆಯನ್ನು ಕೊಟ್ಟು ಸಹಕರಿಸಿದರು. 15 ದಿನಗಳೊಳಗಾಗಿ, ಸಮಾರಂಭಕ್ಕೆ ಖರ್ಚು ಮಾಡುವಷ್ಟು ಹಣ ಸುಮಾರು, 60000 ರೂ. ಗಳಷ್ಟು ಸೇರಿತು.

ಇದೇ ಸಮಯಕ್ಕೆ ಅಖಿಲ ಕರ್ನಾಟಕ ವೃತ್ತಿ ರಂಗಕಲಾವಿದರ ಒಕ್ಕೂಟ ಎಂಬ ಸಂಘವನ್ನು ಕೆಲವೊಂದು ಕಲಾವಿದರು, ಶಾಮನೂರು ಶಿವಶಂಕರಪ್ಪ ಅಭಿಮಾನಿ ಸಂಘದ ಅಧ್ಯಕ್ಷರಾದ ಎ. ಭದ್ರಪ್ಪನವರ ಮುಂದಾಳತ್ವದಲ್ಲಿ ಕಲಾವಿದರ ಸಮ್ಮೇಳನವನ್ನು ಮಾಡಲು ಸಿದ್ಧತೆ ನಡೆಸಿದರು. ವರನಟ ಡಾ. ರಾಜಕುಮಾರ ಅವರನ್ನು ಕರೆತರಲು ಪ್ರಯತ್ನ ನಡೆಸಿದರು. ಆದರೆ ಅಣ್ಣಾ ಅವರು ಬರುವುದು ಒಂದು ವರುಷ ಮುಂದಕ್ಕೆ ಹೋಯಿತು.

ಈ ಸಮಾರಂಭಕ್ಕೆಂದು ಪ್ರದರ್ಶಿಸಲು, ಕೆ.ಎಸ್. ಕೊಟ್ರೇಶ್ ವಿರಚಿತ ಕನ್ನಡ ಕುಲತಿಲಕ ನೃಪತುಂಗ ನಾಟಕವನ್ನು, ಕೊಡಗನೂರು, ಜಯಣ್ಣ, ದೇವೇಂದ್ರಪ್ಪ, ಬಿ.ವಿ. ಸ್ವಾಮಿ, ಕುಮಾರಿ ಬಿಂದುಶ್ರೀಕಡಕೋಳ, ಐ.ಬಿ. ಸುರೇಶ್, ನಟರಾಜ, ಕೆ.ಬಿ. ಮಂಜುನಾಥ, ರಾಜೇಶ್ವರಿ, ರಿತ್ತಿಸಾವಿತ್ರಮ್ಮ, ಮೀನಾಕುಮಾರಿ, ಕಸ್ತೂರಮ್ಮ, ರೇವಣಸಿದ್ದಯ್ಯ ಸರ್ವಂದ, ಪಿ. ಚಂದ್ರಶೇಖರ ಈ ಎಲ್ಲಾ ಕಲಾವಿದರಿಂದ ಕೂಡಿದ ನಾಟಕದ ತಾಲೀಮು. ಸೀನ್ಸ್ ಹಾಗೂ ಉಡುಗೆ, ತೊಡುಗೆಗಳನ್ನು ಮಲ್ಲಿಕಾರ್ಜುನ ಸ್ವಾಮಿಯವರು ನೀಡಲು ಒಪ್ಪಿಕೊಂಡರು.

26.7.1995ರಂದು ಜರುಗಿದ ವಜ್ರ ಮಹೋತ್ಸವ ಸಮಾರಂಭಕ್ಕೆ ಕನ್ನಡ ಸಂಸ್ಕೃತಿ ಇಲಾಖೆ ಸಚಿವೆ ಶ್ರೀಮತಿ ಬಿ.ಟಿ. ಲಲಿತಾನಾಯಕ್ ಆಗಮಿಸಿದರು. ಏಣಗಿ ಬಾಳಪ್ಪನವರು, ಬಸವಲಿಂಗಶಾಸ್ತ್ರಿ, ಪುಂಡಲೀಕ ಬಸನಗೌಡ ಧುತ್ತರಗಿ, ಗಂಗಾಧರಪ್ಪ ನವರು (ಚಿತ್ರದುರ್ಗ ಜಿಲ್ಲಾ ಪಂಚಾಯ್ತಿ ಅಧ್ಯಕ್ಷರು) ಮಾಜಿ ಶಾಸಕರಾದ ಮೋತಿ ವೀರಣ್ಣನವರು, ಚಿಂದೋಡಿ ಲೀಲಾ, ಸುಭದ್ರಮ್ಮನವರೊಂದಿಗೆ ನಮ್ಮ ಕಂಪನಿಯಲ್ಲಿ ಸೇವೆ ಸಲ್ಲಿಸಿದ ಹತ್ತು ಜನ ಕಲಾವಿದರನ್ನು ಸನ್ಮಾನಿಸಲಾಯಿತು.

ವಿಚಾರ ಸಂಕಿರಣಕ್ಕೆಂದು ಡಾ. ರಾಮಕೃಷ್ಣ ಮರಾಠೆ, ಗೋಪಾಲಕೃಷ್ಣನಾಯರಿ, ಗುಡಿಹಳ್ಳಿ ನಾಗರಾಜ, ಪತ್ರಿಕಾ ಪ್ರತಿನಿಧಿಗಳು, ಟಿವಿಯವರು, ನೂರಾರು ಜನ ಪ್ರೇಕ್ಷಕರಿಂದ ತುಂಬಿದ ಗುಂಡಿ ಮಹಾದೇವಪ್ಪ ರಂಗಮಂದಿರದಲ್ಲಿ ಸಮಾರಂಭವನ್ನು ಸಚಿವೆ ದೀಪ ಬೆಳಗಿಸುವುದರೊಂದಿಗೆ, ಉದ್ಘಾಟಿಸಿ ಏಷಿಯಾ ಖಂಡದಲ್ಲಿ ಗುಬ್ಬಿ ವೀರಣ್ಣ ಕಂಪನಿ ಬಿಟ್ಟರೆ ಇದೇ ಹಿರಿದಾದ ಕಂಪನಿ ಎಂದು ಕೊಂಡಾಡಿ ಬಿ.ಟಿ. ಲಲಿತಾನಾಯಕ್ ಭಾಷಣ ಮಾಡಿದರು. ಸಂಘದ ಬಗ್ಗೆ ಬಾಳಪ್ಪನವರು ಎರಡು ತಾಸು ಮಾತನಾಡಿದರು.

ಮಲ್ಲಿಕಾರ್ಜುನ ಕಡಕೋಳ ಅವರು ಅತ್ಯಂತ ಶ್ರದ್ಧೆಯಿಂದ ಸಂಪಾದಿಸಿದ 'ರಂಗಕಂಕಣ ಸ್ಮರಣ ಸಂಚಿಕೆ'ಯನ್ನು ನಾಟಕಕಾರ ಬಸವಲಿಂಗಶಾಸ್ತ್ರಿಗಳು ಬಿಡುಗಡೆ ಮಾಡಿದರು. ಸಂಜೆ ನೃಪತುಂಗ ನಾಟಕದ ಉದ್ಘಾಟನೆಯನ್ನು ನಾಟಕ ಅಕಾಡೆಮಿ ಅಧ್ಯಕ್ಷೆ ಚಿಂದೋಡಿ ಲೀಲಾ ನೆರವೇರಿಸಿದರು. ಎಂ.ಜಿ. ಈಶ್ವರಪ್ಪ ಅತಿಥಿಗಳಾಗಿ ಆಗಮಿಸಿದ್ದರು. ಹೀಗೆ 75 ವರ್ಷ ಪೂರೈಸಿದ ನಮ್ಮ ನಾಟಕ ಕಂಪನಿಯ ವಜ್ರ ಮಹೋತ್ಸವದಿಂದ ಕಂಪನಿಗೆ ಪುನಶ್ಚೇತನದ ಹೊಸಬೆಳಕು ಮೂಡಿತು. ಅಂದಿನಿಂದ ಇಂದಿನವರೆಗೂ ಅರೆಕಾಲಿಕವಾಗಿ ಸಂಘದ ಹೆಸರನ್ನು ಉಳಿಸಿಕೊಂಡಿದ್ದೇವೆ.

# ಮೂರು ತಲೆಮಾರಿನ ಶಿವಣ್ಣನ ರಂಗ ಕುಟುಂಬ

ಎಂಬತ್ತೊಂದರ ಹಿರಿಯ ರಂಗ ಚೇತನ ಕಂಚಿಕೇರಿ ಶಿವಣ್ಣನವರದು ಮೂರು ತಲೆಮಾರಿನ ರಂಗಕುಟುಂಬ. ಇವರ ತಾತ ಕಂಚಿಕೇರಿ ಕೊಟ್ರಬಸಪ್ಪನವರು ವೃತ್ತಿ ರಂಗಭೂಮಿಯ ಮಹಾನ್ ಚೇತನ. 1918ರಷ್ಟು ಹಿಂದೆಯೇ ಶ್ರೀ ಜಯಲಕ್ಷ್ಮಿ ಪ್ರಾಸಾದಿಕ ನಾಟಕ ಮಂಡಳಿ (1921ರಲ್ಲಿ ಇದು ಶ್ರೀ ಜಯಲಕ್ಷ್ಮಿ ನಾಟಕ ಸಂಘ)ಯನ್ನು ಸ್ಥಾಪಿಸಿ 35 ವರುಷಗಳ ಕಾಲ ಅತ್ಯಂತ ವೈಭವದಿಂದ ಕಂಪನಿ ನಡೆಸುತ್ತಾರೆ. ಇವರ ಪತ್ನಿ ಅಂದರೆ ಶಿವಣ್ಣನವರ ಅಜ್ಜಿ ಶ್ರೀಮತಿ ಲಕ್ಷ್ಮಮ್ಮ ಕರ್ನಾಟಕ ಸಂಗೀತ ವಿದುಷಿ, ಶ್ರೇಷ್ಠ ಅಭಿನೇತ್ರಿ. ಶಿವಣ್ಣನವರ ತಂದೆ ಬಸವಣ್ಣೆಪ್ಪ ಓರ್ವ ಸಾತ್ವಿಕ ರಂಗನಟ ಹಾರ್ಮೋನಿಯಂ ನುಡಿಸುವಲ್ಲಿ ನಿಪುಣ ರಂಗಪಟು. ಇನ್ನು ಶಿವಣ್ಣನವರು ತನ್ನ ತಾತ, ತನ್ನ ತಂದೆ ಹಾಕಿಕೊಟ್ಟ ಹಾದಿಯಲ್ಲೇ ಬದುಕಿನುದ್ದಕ್ಕು ರಂಗಬದುಕನ್ನೇ ಬದುಕಿದವರು.

ಶಿವಣ್ಣನವರ ಪತ್ನಿ ಕಮಲಮ್ಮ ಓರ್ವ ಅಭಿಜಾತ ಅಭಿನೇತ್ರಿ. ಶಿವಣ್ಣನ ತಮ್ಮ ಮಂಜುನಾಥ ಇವತ್ತಿಗೂ ಸ್ತ್ರೀ-ಪುರುಷ ಪಾತ್ರ ಮಾಡುವಲ್ಲಿ ಅತ್ಯಂತ ನಿಪುಣರು. ಶಿವಣ್ಣನ ತಮ್ಮನ ಹೆಂಡತಿ-ರಾಜೇಶ್ವರಿ ಕೂಡಾ ವೃತ್ತಿರಂಗ ನಟಿ. ಶಿವಣ್ಣನವರ ಮೂವರು ಮಕ್ಕಳೂ ವೃತ್ತಿ ರಂಗಭೂಮಿಯ ಪಳಗಿದ ರಂಗನಟರೇ ಆಗಿದ್ದಾರೆ.

ಶಿವಣ್ಣನವರ ಹಿರಿಯಮಗ ಕೆ.ಎಸ್. ನಟರಾಜ್ ವೃತ್ತಿರಂಗದ ಎಲ್ಲ ಬಗೆಯ ಪಾತ್ರಗಳ ಮೂಲಕ ಹೆಸರು ಮಾಡಿದವರು. ಕಂಚಿನ ಕಂಠದ ನಟರಾಜ ವರ್ತಮಾನದ ಎಲ್ಲ ವೃತ್ತಿನಾಟಕ ಕಂಪನಿಗಳಲ್ಲಿ ಹಾಸ್ಯನಟನಾಗಿ ಪ್ರಸ್ತುತ ಮಂಡಲಗಿರಿಯ ಶ್ರೀ ತೋಂಟದಾರ್ಯ ನಾಟಕ ಸಂಘದಲ್ಲಿ ರಂಗಸೇವೆ ಸಲ್ಲಿಸುತ್ತಿದ್ದಾರೆ.

ಶಿವಣ್ಣನವರ ಎರಡನೇ ಮಗ ಕೆ.ಎಸ್. ಕೊಟ್ರೇಶ್ ಅಪ್ಪನ ಮಾರ್ಗದರ್ಶನದಲ್ಲಿದ್ದು ಕೊಂಡೇ ಅರೆಕಾಲಿಕವಾಗಿ ವೃತ್ತಿನಾಟಕಗಳಲ್ಲಿ, ಅದರಲ್ಲೂ ಗ್ರಾಮೀಣ ರಂಗಭೂಮಿ ಯಲ್ಲಿ ತನ್ನನ್ನು ತೀವ್ರವಾಗಿ ತೊಡಗಿಸಿಕೊಂಡಿದ್ದಾರೆ. ಕೊಟ್ರೇಶ್‌ಗೆ ನಾಟಕ ಬರೆಯು ವಲ್ಲಿಯೂ ಅಪಾರ ಆಸಕ್ತಿ, ಅವರ ಮಾತೃದೇವೋಭವ  ಹಳೆಯ ರಂಗಕೃತಿ ರೂಪಾಂತರಿಸಿ ಅದನ್ನು 'ತಾಯಿ' ಹೆಸರಿನಿಂದ ಮಲ್ಲಿಕಾರ್ಜುನ ಕಡಕೋಳ ಅವರ ನಿರ್ದೇಶನದಲ್ಲಿ ಕರ್ನಾಟಕ ನಾಟಕ ಅಕಾಡೆಮಿ ವತಿಯಿಂದ ಈ ನಾಟಕವು ರಂಗ ಪ್ರಯೋಗಕಂಡಿದೆ.

ಶಿವಣ್ಣನವರ ಮೂರನೇ ಮಗ ಮಲ್ಲಿಕಾರ್ಜುನ ಖಾಸಗಿ ಮಿಲ್ ಒಂದರಲ್ಲಿ ದುಡಿಯುತ್ತಿದ್ದರೂ ಅವನ ಹವ್ಯಾಸ ವೃತ್ತಿ ರಂಗಭೂಮಿಯೇ. ತಂದೆಯೊಂದಿಗೆ ಅನೇಕ ನಾಟಕಗಳಲ್ಲಿ ಅಭಿನಯಿಸಿರುವ ಮಲ್ಲಿಕಾರ್ಜುನ ವೃತ್ತಿರಂಗ ಸಂಗೀತಕ್ಕೆ  ವಾದ್ಯಗಳನ್ನು ನುಡಿಸುವಲ್ಲಿಯೂ ಆಸಕ್ತಿ ಉಳ್ಳವರಾಗಿದ್ದಾರೆ. ಒಂದು ನಾಟಕ ಕಂಪನಿಗೆ ಬೇಕಾಗುವಷ್ಟು ರಂಗಕರ್ಮಿಗಳು ಇವರ ಕುಟುಂಬದಲ್ಲೇ ಇದ್ದಾರೆ.

# ಅನುಬಂಧ

# ಕಂಚಿಕೇರಿ ಕೊಟ್ರ ಬಸಪ್ಪನವರ ವಂಶಾವಳಿ
## ಶಾಲಿವಾಹನ ಶಕೆ 1126. ಕ್ರಿಸ್ತಶಕೆ. 1204

1. ದೊಡ್ಡ ವೀರನಗೌಡ    ಬಸಣ್ಣ ವೀರನಗೌಡ

1. ದೊಡ್ಡಬಸಪ್ಪ    2. ಸಣ್ಣಬಸಪ್ಪ

ವೀರಪ್ಪ

ಶಿವಪ್ಪ

ದೊಡ್ಡನಂಜಪ್ಪ    ಸಣ್ಣನಂಜಪ್ಪ

1. ಚನ್ನಪ್ಪ    2. ಫಕ್ಕೀರಪ್ಪ    3. ರುದ್ರಪ್ಪ    4. ಕೊಟ್ಟೂರಬಸಪ್ಪ (ದೇವೀರಮ್ಮ-ಲಕ್ಷ್ಮಮ್ಮ)

1884 ಇಸವಿ 1959

ಬಸವಣ್ಣಪ್ಪ (1912)(1984)    ಚನ್ನಬಸಮ್ಮ

(ಗೌರಮ್ಮ...........................ಗಂಗಮ್ಮ)

ಜಯಮ್ಮ

1. ಕೆ.ಬಿ. ಶಿವಣ್ಣ (1936)    2. ಗಿರಿಜಮ್ಮ    3. ಮಂಜುನಾಥ    4. ಅಣ್ಣಪ್ಪ    5. ಸೋಮನಾಥ    6. ಮಂಜುಳ

(ಕಮಲಮ್ಮ) (1988 ಕೊನೆ)

1. ನಟರಾಜ್ (1965)    2. ಕೊಟ್ರೇಶ್ (27.1.1968)    3. ಮಂಗಳ    4. ಮಲ್ಲಿಕಾರ್ಜುನ

ಜೀವನ    ಗುರುಪ್ರಸಾದ್    ನಿರಂಜನ – ಗಗನ

| ಕ್ರ.ಸಂ. | ಇಸವಿ | ಸಂಘದ ಹೆಸರು | ಮುಕ್ಕಾಂ | ನಾಟಕ | ಕರ್ತೃ | ಪಾತ್ರದ ಹೆಸರು | ಯಾರೊಂದಿಗೆ |
|---|---|---|---|---|---|---|---|
| 1. | 1940ರಿಂದ | ಶ್ರೀ ಜಯಲಕ್ಷ್ಮಿನಾಟಕ | ಹಿರೇಕೆರೂರು | ಭೌಮಾಸುರ | ಎಸ್.ಎಲ್. ಇನಾಂದಾರ್ | ಬಾಲ ಭೌಮಾಸುರ ಭಗದತ್ತ | ಬಸವನಗೌಡರು ವಿಠಲಸಾಖಟವಟಿ |
| | 1946 | ಸಂಘ ದಾವಣಗೆರೆ. | ನಿಜಾಮಪ್ರಾಂತ | ಆಕ್ಷೆಯಾಂಬರ | ಕಂದಗಲ್ಲ | ವಿಕರ್ಣ ಶಿಶುಪಾಲ | |
| | | | ಕಲ್ಬುರ್ಗಿ ರಾಯಚೂರು. | ರಾಮಾಯಣ | ನರಹರಿಶಾಸ್ತ್ರಿ | ಅಂಗದ ಅಕ್ಷಕುಮಾರ | ನಂಜುಂಡಸ್ವಾಮಿ ಹರಿಹರ |
| | | | ನಾರಾಯಣ ಪೇಟ್ | ಚಿತ್ರಾಂಗದ | | ಶ್ರೀಕೃಷ್ಣ | ಪಕ್ಕೀಗೌಡರು ಮಣ್ಣೇರಿ |
| | | | ಅಕ್ಕಲಕೋಟೆ | ಭೌಮಾಸುರ | ಎಸ್.ಎಲ್. ಇನಾಂದಾರ್ | ಭಗದತ್ತ | ಬಸವನಗೌಡರು |
| 2. | 1947–1956ರವರೆಗೂ | | ವಿದ್ಯಾಭ್ಯಾಸ. ದಾವಣಗೆರೆಯಲ್ಲಿ ವಾಸ್ತವ್ಯ | | | | |
| 3. | 1960 | ಜಯಲಕ್ಷ್ಮಿ ನಾಟಕ ಸಂಘ | ದಾವಣಗೆರೆ | ಮಕ್ಕಳಮದುವೆ | ಹೆಚ್.ಎನ್. ಹೂಗಾರ್ | ವಿಲಾಸ | ಶ್ರೀಪಾದರಾವ್ ಗರೂಡ |
| 4. | 1961 | ಕಲಾವೈಭವ ನಾಟ್ಯಸಂಘ ಏಣಗಿ ಬಾಳಪ್ಪ | ಅಣ್ಣಾವರ | ಜಗಜ್ಯೋತಿಬಸವೇಶ್ವರ | ಸಂಕಲನ | ಪರಮೇಶ್ವರ (ಹಳ್ಳಿಹುಡುಗಿ)ಬಾಲಚಂದ್ರ | ಏಣಗಿಬಾಳಪ್ಪ ಲಿಂಗರಾಜ್-ಸುಭದ್ರಮ್ಮ ಮನ್ಸೂರು ಲಕ್ಷ್ಮೀಬಾಯಿ |
| 5. | 1962 | ಸಂಗನಬಸವೇಶ್ವರ ನಾಟಕ.ಸಂ | ಸಿಂದಗಿ | ತಾಯಿಕರುಳು | ಪಿ.ಬಿ. ಧುತ್ತರಾಗಿ | ಮಹೇಶ | ಶಿವಯ್ಯ ಲಕ್ಷ್ಮೇಶ್ವರ |
| 6. | 1963ರಿಂದ | ಅಮರೇಶ್ವರನಾಟ್ಯ ಸಂಘ | | | | (ಗಂಡನ ಮನೆ) ಡಾ॥ಜೀವನ | ಶಿವಯ್ಯ ಲಕ್ಷ್ಮೇಶ್ವರ |
| | 1964 | ಸಿಂಧನೂರು ಮೃತದೇವಗವಾಯಿ | ರಾಣೆಬೆನ್ನೂರು | ಮಲಮಗಳು | ಪಿ.ಬಿ. ಧುತ್ತರಗಿಸಾಮ | | ಮೃದದೇವ ಗವಾಯಿ, ಜುಬೇದಾಬೈಗಂ |
| | | | | ರೇಣುಕಾದೇವಿ | ಬಸಲಿಂಗಶಾಸ್ತ್ರಿ | ಭೃಗುಕಿರಣ | ಮೃದದೇವ ಮಳ್ಳಗೇರಿ ಪಂಚಯ್ಯ ಬಿ.ಶಂಕರ್ |
| | | | | ಕುಲಪುತ್ರ | ಹೆಚ್.ಎನ್. ಹೂಗಾರ | ಮಂಜು | ಮೃದದೇವ ಕಮಲಮ್ಮ-ಬಾಲಪ್ಪ, ಪಂಡರೀಬಾಯಿ |
| 7. | 1965ರಿಂದ | ಓಂಕಾರೇಶ್ವರ ನಾಟಕ ಸಂಘ | | ಹರಗಿರಿಜೆ | ಪಿ.ಬಿ. ಧುತ್ತರಗಿ | ಅಗ್ನಿಕೇತು | ಮೃದದೇವ ಪಂಚಯ್ಯ, ಪಾಜಾಮೀಯ |
| | 1972 | ರಾಣೆಬೆನ್ನೂರು, ಓಬಳೇಶ್ವರ | ದಾವಣಗೆರೆ | ಬೆಳ್ಳಿ ಬಂಗಾರ | ಓಬಳೇಶ್ವರ | ತಿಪ್ಪಾಚಾರಿ | ಓಬಳೇಶ್ವರ, ಯಶೋಧರಮ್ಮ, |
| | | | | | | | ಬಸಲಿಂಗಶಾಸ್ತ್ರಿ, ಲಕ್ಷ್ಮೀದೇವಿ, ಕಮಲಮ್ಮ |
| | | | ಬನಶಂಕರಿಜಾತ್ರೆ | ಬೆಳ್ಳಿ ಬಂಗಾರ | | | ಚಿತ್ರನಟಿ ಹೆಚ್.ಎನ್. ಲಕ್ಷ್ಮೀದೇವಿ |
| | | | | | | | ಓಬಳೇಶ್ವರ ಇತ್ಯಾದಿ |
| | 1966–67 | | ಕಲಬುರುಗಿ | ದೇವದಾಸಿ | ಕೆ. ಹಿರಣ್ಣಯ್ಯ | ವಸಂತಶೇಖರ್ | ಓಬಳೇಶ್ವರ |

| ಇಸವಿ | ಸಂಘದ ಹೆಸರು | ಮುಕ್ಕಾಂ | ನಾಟಕ | ಕರ್ತೃ | ಪಾತ್ರದ ಹೆಸರು | ಯಾರೊಂದಿಗೆ |
|---|---|---|---|---|---|---|
| | | ಕಲಬುರುಗಿ | ಮುಂಡೇಮಗ | ಓಬಳೇಶ್ವರ | ಧರ್ಮರಾಯ | ಓಬಳೇಶ್ವರ |
| | | ಕಲಬುರುಗಿ | ಖಾದೀಸೀರೆ | ಓಬಳೇಶ್ವರ | ಶರಣಪ್ಪಯ್ಯ ಶಾಸ್ತ್ರಿ | ಓಬಳೇಶ್ವರ |
| | | ಕಲಬುರುಗಿ | ಶರಣಬಸವೇಶ್ವರ | ಮಾರುತೇಶಮಾಂತ್ರೆ | ಕಂಠಿಕಾಡಯ್ಯ | ಸಿದ್ದಯ್ಯಸ್ವಾಮಿ ದೊಡ್ಡವಾಡ |
| | | ಕಲಬುರುಗಿ | ಜಗಜ್ಯೋತಿ ಬಸವೇಶ್ವರ | | ನಲವಡಿ, ಶ್ರೀಕಂಠಶಾಸ್ತ್ರಿ | ಶೆಟಿ ಸಿದ್ದಯ್ಯಸ್ವಾಮಿ ದೊಡ್ಡವಾಡ |
| 1968 | | ಕಲಬುರುಗಿ | ಕಲತಕತ್ತೆ | ಮಹಾಂತೇಶ್‌ಶಾಸ್ತ್ರಿ | ಮಲ್ಲೇಶಿ (ಕಾಂಪೌಡರ್) | ಓಬಳೇಶ್ವರ |
| 1968 | | ಕಲಬುರುಗಿ | ಹೋಳಿಹುಣ್ಣಿಮೆ | ಓಬಳೇಶ್ವರ | ವೆಂಕಟಾಚಲ | ಓಬಳೇಶ್ವರ ಸಿದ್ದಯ್ಯಸ್ವಾಮಿ ದೊಡ್ಡವಾಡ |
| 1969 | | ಹುಬ್ಬಳ್ಳಿ | ಖಾದಿಸೀರೆ ಮುಂಡಮಗ | ಓಬಳೇಶ್ವರ | ಶರಪ್ಪಯ್ಯ ಶಾಸ್ತ್ರಿ ಧರ್ಮರಾಯ | ಓಬಳೇಶ್ವರ ಪಕ್ಕೀರಪ್ಪ ವರದಿ |
| 1970ರಿಂದ | | ರಾಯಚೂರು | ದಾರಿದೀಪ | | ಕೆ.ಎನ್. ಸಾಳಂಕಿ | ಭೀರಮ್ಮನೆ ಪಕ್ಕೀರಪ್ಪ ವರದಿ |
| 1971 | | ದಾವಣಗೆರೆ | ಖಾದಿಸೀರೆ | ಬಿ.ಪಿ. | ಶರಣಪ್ಪಯ್ಯಶಾಸ್ತ್ರಿ | ಬಿ.ಪಿ. ಪಕ್ಕೀರಪ್ಪ ವರದಿ |
| | | ಭದ್ರಾವತಿ | ರಾಮಾಯಣ | ನರಹರಿಶಾಸ್ತ್ರಿ | (ಕೊಳ್ಳಿ ವೆಂಕಟಾಚಲಯ್ಯ(ಆಂಜನೇಯ) | |
| | | ಚಿಕ್ಕಮಗಳೂರು | ಯಜಮಾನಾಯಕ | ಕೆ. ಹಿರಣ್ಣಯ್ಯ | ಖಾನ್ ಶಿದ್ದಾಂತಿ | ಚಿತ್ರನಟ ಎಂ.ಪಿ. ಶಂಕರ್, ಓಬಳೇಶ್ವರ |
| | | ತುಮಕೂರು | ಖಾದಿಸೀರೆ | ಬಿ.ಪಿ. | ಶರಣಪ್ಪಯ್ಯಶಾಸ್ತ್ರಿ | ಬಿ.ಪಿ. ಪಕ್ಕೀರಪ್ಪ ವರದಿ |

**1972 ರಿಂದ ಎಲಿವಾಳ ಸಿದ್ದಯ್ಯಸ್ವಾಮಿಗಳೊಂದಿಗೆ, ತಾತ್ಕಾಲಿಕವಾಗಿ ಕುರುಗೋಡು, ಕೊಟ್ಟೂರು ಜಾತ್ರೆ.**

| ಇಸವಿ | ಸಂಘದ ಹೆಸರು | ಮುಕ್ಕಾಂ | ನಾಟಕ | ಕರ್ತೃ | ಪಾತ್ರದ ಹೆಸರು | ಯಾರೊಂದಿಗೆ |
|---|---|---|---|---|---|---|
| 1973 | ಶ್ರೀ ಶೈಲಮಲ್ಲಿಕಾರ್ಜುನನಾಟ್ಯ | ಸಾವೇರಿ | ರಕ್ತರಾತ್ರಿ | | ಕಂದಗಲ್ಲ | ಎಲಿವಾಳಶಿದ್ದಯ್ಯಸ್ವಾಮಿ. ದುರ್ಗಾದಾಸರು ವಸಂತರಾವ್ ನಾಕೋಡ್ ಅಬ್ದುಲ್ ಸಾಬ್ ಅಣ್ಣಿಗೇರಿ |
| | ಸಂಘ, ಸೂಳ್ಯ (ದೇಸಾಯಿ) | | ನನ್ನ ಹೆಂಡತಿ ಜಾಣೆ | | ಕೆ.ಎನ್. ಸಾಳುಂಕೆ | ಶಿವಣ್ಣ (ನಳ್ಳಿಮಂಬ) ಅಬ್ದುಲ್‌ಸಾಬ್ ಅಣ್ಣಿಗೇರಿ, ಪಾಪಮ್ಮ |
| ಸತ್ಯಭಾಮ | | | ಕಿತ್ತೂರ ಚೆನ್ನಮ್ಮ | | ಕಂದಗಲ್ಲ | ಮಲ್ಲಪ್ಪ ಶೆಟ್ಟಿ ಅಬ್ದುಲ್‌ಸಾಬ್ ಸತ್ಯಭಾಮ |
| 1973 | ಜಿ.ವಿ. ಕೃಷ್ಣನಾಟ್ಯ ಸಂಘ | ದಾವಣಗೆರೆ | ನನ್ನಹೆಂಡತಿ ಜಾಣೆ | | ಕೆ.ಎನ್. ಸಾಳುಂಕೆ | ಶಿವಣ್ಣ ಜಿ.ವಿ. ಕೃಷ್ಣ–ರಾಧಾ, ರುಕ್ಮಿಣಿ |

## ಜಯಲಕ್ಷ್ಮಿ ನಾಟಕ ಸಂಘ ಪ್ರದರ್ಶಿಸಿದ ನಾಟಕಗಳು ಮತ್ತು ಶಿವಣ್ಣ ಅಭಿನಯಿಸಿದ ಪಾತ್ರಗಳು

| ಇಸವಿ | ಸಂಘದ ಹೆಸರು | ಮುಕ್ಕಾಂ | ನಾಟಕ | ಕರ್ತೃ | ಪಾತ್ರ | ಸಂಘದ ಸದಸ್ಯರು | ನಾಟಕ | ಬರೆದ ಕವಿಗಳು | ನಿರ್ವಹಿಸಿದ ಪಾತ್ರ |
|---|---|---|---|---|---|---|---|---|---|
| 1974ರಿಂದ | ಶ್ರೀ ಜಯಲಕ್ಷ್ಮಿ | ಹೊಸರಿತ್ತಿ | ಬೆಳ್ಳಿಬಂಗಾರ | ಓಬಳೇಶ್ವರ | ಸಣ್ಣಾಚಾರಿ | ಬಾಬಣ್ಣ ಜಯಮ್ಮ ಕಮಲಮ್ಮ | 1. ಹೇಮರೆಡ್ಡಿ ಮಲ್ಲಮ್ಮ | ನಲವಡಿ ಶ್ರೀಕಂಠಶಾಸ್ತ್ರಿಗಳು | ಧರ್ಮರೆಡ್ಡಿ |
| 1976 | ನಾಟಕ ಸಂಘ | | ಶಿರಹಟ್ಟಿ | ಬೆಳ್ಳಿಬಂಗಾರ | ಓಬಳೇಶ್ವರ | ಸಣ್ಣಾಚಾರಿ ಪಾರ್ವತಮ್ಮ, ಕಮಲಮ್ಮ, ಮಂಜಣ್ಣ | | 2. ಖಾದಿಸೀರೆ | ಓಬಳೇಶ್ವರ |
| ಶರಣಪ್ಪಯ್ಯ, ಭರಣ | | | | | | | | | |
| | ದಾವಣಗೆರೆ. | ಇಲಕಲ್ಲ | ಬೆಳ್ಳಿಬಂಗಾರ | ಓಬಳೇಶ್ವರ | ಸಣ್ಣಾಚಾರಿ | ಪಾರ್ವತಮ್ಮ, ಕಮಲಮ್ಮ, ಮಂಜಣ್ಣ | 3. ಮುಂಡೇಮಗ | ಓಬಳೇಶ್ವರ | ಧರ್ಮರಾಯ, ಅಚ್ಯುತ |
| | | ಇಲಕಲ್ಲ | ವರನೋಡಿಹೆಣ್ಣು ಕೊಡು | ಕೆ.ಎನ್. ಸಾಳುಂಕೆ | ಶಿವಣ್ಣ | ಪಾರ್ವತಮ್ಮ ಕಮಲಮ್ಮ ಮಂಜಣ್ಣ | 4. ಬೆಳ್ಳಿಬಂಗಾರ | ಓಬಳೇಶ್ವರ | ಶಿವಾಚಾರಿ-ಸಣ್ಣಾಚಾರಿ |
| | | ಇಲಕಲ್ಲ | ದೇವದಾಸಿ | ಕೆ.ಹಿರಣ್ಣಯ್ಯ | ನಾಜೂಕಯ್ಯ | ಕಮಲಮ್ಮ-ಮಂಜುನಾಥ | 5. ಮದುವೆ ಮಾರ್ಕೆಟ್ | ಹೆಚ್.ಎನ್. ಹೂಗಾರ್ | ವಿಶ್ವಾಸ |
| | | ಇಲಕಲ್ಲ | ಖಾದಿಸೀರೆ | ಬಿ.ಪಿ. | ಭರಣ | ಚಿತ್ರನಟಿ ಬಿ. ಜಯಾ(ಕುಳ್ಳಿ) | 6. ಕೊಂಡು ತಂದ ಗಂಡ | ಹೆಚ್.ಎನ್. ಹೂಗಾರ್ | ಠಾಕೂರ |
| | | ಟೀಲೂರು | ವರನೋಡಿಹೆಣ್ಣುಕೊಡು | ಸಾಳುಂಕೆ | ಶಿವಣ್ಣ | ಕಮಲಮ್ಮ ಮಂಜುನಾಥ ವಗ್ಗೆರೆ | 7. ವರನೋಡಿ ಹೆಣ್ಣುಕೊಡು | ಕೆ.ಎನ್. ಸಾಳುಂಕೆ | ಶಿವಣ್ಣ |
| | | ಟೀಲೂರು | ಬೆಳ್ಳಿ ಬಂಗಾರ | ಬಿ.ಪಿ. | ಸಣ್ಣಾಚಾರಿ | ಕಮಲಮ್ಮ ಮಂಜುನಾಥ ವಗ್ಗೆರೆ | 8. ಪಾಣಿ ಗ್ರಹಣ | ಆಚಾರ್ಯ ಅತ್ರೆ (ಮರಾಠಿ) | ಭೀಮರಾಯ |
| | | ಗುಡೂರು | ಮುಂಡೇಮಗ | ಬಿ.ಪಿ. | ಅಚ್ಯುತ | ಕಮಲಮ್ಮ ಮಂಜುನಾಥ ವಗ್ಗೆರೆ | 9. ಚಿನ್ನದ ಗೊಂಬೆ | ಕಡಪಟ್ಟಿ ಪ್ರಕಾಶ | ಎಂಟೀಗೌಡ |
| | | ಗುಡೂರು | ಖಾದೀಸೀರೆ | ಬಿ.ಪಿ. | ಭರಣ | ಕಮಲಮ್ಮ ಮಂಜುನಾಥ ವಗ್ಗೆರೆ | 10. ಚನ್ನಪ್ಪ ಗೌಡ | ಎನ್.ಎಸ್. ಜ್ಯೋಷಿ | ಪಕ್ಕೀರ |
| | | ಗುಡೂರು | ವರನೋಡಿಹೆಣ್ಣುಕೊಡು | ಸಾಳುಂಕೆ | ಶಿವಣ್ಣ | ಕಮಲಮ್ಮ ಮಂಜುನಾಥ ವಗ್ಗೆರೆ | 11. ಲಂಬಾಣಿ ಹುಡುಗಿ | ಹೆಚ್.ಎನ್. ಹೂಗಾರ | ಚೌಡಪ್ಪ |
| | | ಗುಡೂರು | ಮದುವೆ ಮಾರ್ಕೆಟ್ | ಹೆಚ್.ಎನ್.ಹೂಗಾರ | ವಿಶ್ವಾಸ | ಚಿತ್ರನಟ ಉದಯಕುಮಾರ್‌ರೊಂದಿಗೆ | 12. ದೇವದಾಸಿ | ಹಿರಣ್ಣಯ್ಯ | ನಾಜೂಕಯ್ಯ |
| | | ಗುಡೂರು | ದೇವದಾಸಿ | ಹಿರಣ್ಣಯ್ಯ | ನಾಜೂಕಯ್ಯ | ಚಿತ್ರನಟಿ ಬಿ. ಜಯಾರೊಂದಿಗೆ | 13. ಬಸ್‌ಹಮಾಲಿ | ತಾರನಾಳ | ರಂಗ |
| | | ಹುನಗುಂದ | ಖಾದೀಸೀರೆ | ಬಿ.ಪಿ. | ಭರಣ | ಕಮಲಮ್ಮ ಮಂಜಣ್ಣ | 14. ಬಸ್‌ಕಂಡಕ್ಟರ್ | ಬಿ.ಆರ್. ಅರಿಷಿಣಗೋಡಿ | ಕಂಡಕ್ಟರ್ ದೇವೇಗೌಡ |
| | | ನರಗುಂದ | ಖಾದೀಸೀರೆ | ಬಿ.ಪಿ. | ಭರಣ | ಮುರುಗೋಡ ರೇಣುಕಮ್ಮ | 15. ಬಂಚಿಕೊಟ್ಟಿಲು | ಎನ್.ಎಸ್. ಜ್ಯೋಷಿ | ಶಿವಮಾರಶೆಟ್ಟಿ |
| | | ನರಗುಂದ | ದೇವದಾಸಿ | ಹಿರಣ್ಣಯ್ಯ | ನಾಜೂಕಯ್ಯ | ಚಿತ್ರನಟಿ, ಗಿರಿಜಾಲೋಕೇಶ್ | 16. ಕೈಲಾಗದ ಗಂಡ ಕೈಲಾಸಕಂಡ | ಕಣವಿ ಶಿವಮೂರ್ತಿ | ಗುರು |
| | | ನರಗುಂದ | ಮದುವೆ ಮಾರ್ಕೆಟ್ | ಹೂಗಾರ | ವಿಶ್ವಾಸ | ಚಿತ್ರನಟ ಉದಯಕುಮಾರ್‌ರೊಂದಿಗೆ | 17. ರತ್ನ ಮಾಂಗಲ್ಯ | ಎನ್.ಎಸ್. ಜ್ಯೋಷಿ | ರಂಗ, ಶಾಮ |
| | | ನರಗುಂದ | ಮುಂಡೇಮಗ | ಬಿ.ಪಿ. | ಅಚ್ಯುತ | ಚಿತ್ರನಟ ದಿನೇಶ್‌ರೊಂದಿಗೆ | 18. ಮಲಮಗಳು | ಪಿ.ಬಿ. ಧುತ್ತರಗಿ | ಸುಂದ-ನಾಗರಾಜ-ಪಂಡಿತ |
| | | ನರಗುಂದ | – | – | – | | 19. ಧರ್ಮದೇವತೆ | ಮಾರುತೇಶ ಮಾಂತ್ರಿ | ಪೂಜಾರಿ |
| | | ನವಲಗುಂದ | ಖಾದೀಸೀರೆ | ಬಿ.ಪಿ. | ಭರಣ | ಸಂಘದ ಸದಸ್ಯರೊಂದಿಗೆ | 20. ಬೇಡರಕಣ್ಣಪ್ಪ | ಜಿ.ವಿ. ಅಯ್ಯರ್ | ಬೇಹುಲ್ಯ |
| | | ನವಲಗುಂದ | ಲಂಕಾದಹನ | ನರಹರಿಶಾಸ್ತ್ರಿ | ದುರ್ಮುಖಿ | ಶ್ರೀಮತಿ ಸಾವಿತ್ರಮ್ಮ ಬ್ಯಾಡಗಿ | 21. ರೇಣುಕಾದೇವಿ | ಬಸಲಿಂಗಶಾಸ್ತ್ರಿ | ಮೀರ್ ಸಾಧಿಕ್ |
| | | ಸವದತ್ತಿ | ವರನೋಡಿಹೆಣ್ಣು ಕೊಡು | ಸಾಳುಂಕೆ | ಶಿವಣ್ಣ | ಅಬ್ದುಲ್‌ಸಾಬ್ ಪುಷ್ಪಮಾಲ ಕಮಲಮ್ಮ | 22. ಟಿಪ್ಪುಸುಲ್ತಾನ | ಆರ್.ಡಿ. ಕಾಮತ್ | ಕೊಟ್ರಪ್ಪ ಮಾಸ್ತರ |
| | | | | | | | 23. ಗೌಡರಗದ್ದ | ಬಿ.ವಿ. ಈಶ | ಸೇವಕ, ನಕ್ಷತ್ರಿಕ |

ಶ್ರೀ ಜಯಲಕ್ಷ್ಮಿ ನಾಟಕ ಸಂಘ ದಾವಣಗೆರೆ. ಪ್ರದರ್ಶಿಸುತ್ತಿದ್ದ ನಾಟಕಗಳು. ಶಿವಣ್ಣನವರು ವಹಿಸಿದ ಪಾತ್ರಗಳು

| | ನಾಟಕ | ರಚನೆ | ಪಾತ್ರದ ಹೆಸರು | ಪಾತ್ರದ ಸ್ವರೂಪ |
|---|---|---|---|---|
| 1 | ಹೇಮರೆಡ್ಡಿ ಮಲ್ಲಮ್ಮ | ನಲವಡಿ ಶ್ರೀಕಂಠಶಾಸ್ತ್ರಿ | ಭರಮರೆಡ್ಡಿ | ಹಾಸ್ಯ |
| 2 | ಖಾದಿಸೀರೆ | ಓಬಳೇಶ್ವರ | ಭರಣ | ಹಾಸ್ಯ |
| 3 | ಮುಂಡೇಮಗ | ಓಬಳೇಶ್ವರ | ಧರ್ಮರಾಯ | ಖಳನಾಯಕ |
| 4 | ಬೆಳ್ಳಿಬಂಗಾರ | ಓಬಳೇಶ್ವರ | ತಿಪ್ಪಾಚಾರಿ | ಖಳನಾಯಕ+ಹಾಸ್ಯ |
| 5 | ಮದುವೆ ಮಾರ್ಕೆಟ್ | ಹೆಚ್.ಎನ್. ಹೂಗಾರ | ವಿಶ್ವಾಸ | ಖಳನಾಯಕ |
| 6 | ಕೊಂಡು ತಂದ ಗಂಡ | ಹೆಚ್.ಎನ್. ಹೂಗಾರ | ಠಾಕೂರ | ಖಳನಾಯಕ |
| 7 | ವರನೋಡಿಹೆಣ್ಣುಕೊಡು | ಕೇದಾರನಾಥ ಸಾಳುಂಕೆ | ಶಿವಣ್ಣ | ಕಥಾನಾಯಕ, ಹಳ್ಳಿಹುಂಬ |
| 8 | ಪಾಣಿಗ್ರಹಣ | ಆಚಾರ್ಯ ಆತ್ರೆ (ಮರಾಠಿ)<br>ಎಸ್.ಎಲ್. ಇನಾಂದಾರ್(ಕನ್ನಡಕ್ಕೆ) | ಕೊತ್ತಂಬ್ರಿಭೀಮರಾಯ | ಹಾಸ್ಯ |
| 9 | ಚಿನ್ನದಗೊಂಬೆ | ಕಡಪಟ್ಟಿ ಪ್ರಕಾಶ | ಎಂಟೇಗೌಡ | ಹಾಸ್ಯ |
| 10 | ಚೆನ್ನಪ್ಪ ಗೌಡ | ಎಸ್.ಎಸ್. ಜೋಷಿ | ಪಕ್ಕೀರ | ಹಾಸ್ಯ |
| 11 | ಲಂಬಾಣಿ ಹುಡುಗಿ | ಹೆಚ್.ಎನ್. ಹೂಗಾರ | ಚೌಡಪ್ಪ | ಹಾಸ್ಯ |
| 12 | ದೇವದಾಸಿ | ಕೆ. ಹಿರಣ್ಣಯ್ಯ | ನಾಜೂಕಯ್ಯ | ಹಾಸ್ಯ+ಖಳನಾಯಕ |
| 13 | ಬಸ್‌ಹಮಾಲ | ತಾರನಾಳ | ರಂಗ | ಹಾಸ್ಯ |
| 14 | ಬಸ್‌ಕಂಡಕ್ಟರ್ | ಭೀಮಣ್ಣ ಅರಿಶಿಣಗೋಡಿ | ದೇವಣ್ಣ | ಹಾಸ್ಯ |
| 15 | ಬಂಜೆತೊಟ್ಟಿಲು | ಎಸ್.ಎಸ್. ಜೋಷಿ | ಶಿವಮಾರಶೆಟ್ಟಿ | ಹಾಸ್ಯ |
| 16 | ಕೈಲಾಗದ ಗಂಡ ಕೈಲಾಸ | ಕಂಡಕಣವಿ ಶಿವಮೂರ್ತಿ | ಕಂಟೆಪ್ಪ | ಹಾಸ್ಯ |
| 17 | ರತ್ನ ಮಾಂಗಲ್ಯ | ಎಸ್.ಎಸ್. ಜೋಷಿ | ಗುರು | ಹಾಸ್ಯ |
| 18 | ತಾಯಿಕರುಳು | ಪಿ.ಬಿ. ಧುತ್ತರಗಿ | ಸೋಮಣ್ಣಶೆಟ್ಟಿ | ಹಾಸ್ಯ |
| 19 | ಮಲಮಗಳು | ಪಿ.ಬಿ. ಧುತ್ತರಗಿ | ರಂಗ | ಹಾಸ್ಯ |
| 20 | ಧರ್ಮದೇವತೆ | ಮಾರುತೇಶ ಮಾಂತ್ರೆ | ಗಂಡ | ಹಾಸ್ಯ |
| 21 | ಬೇಡರ ಕಣ್ಣಪ್ಪ | ಜಿ.ವಿ. ಅಯ್ಯರ್ | ಪೂಜಾರಿ | ಹಾಸ್ಯ |
| 22 | ರೇಣುಕಾದೇವಿ | ಬಸವಲಿಂಗಶಾಸ್ತ್ರಿ | ಬೇಹುಲ್ಯ | ಹಾಸ್ಯ |
| 23 | ಟಿಪ್ಪುಸುಲ್ತಾನ್ | ಆರ್.ಡಿ. ಕಾಮತ್ | ಮೀರ್‌ಸಾಧಕ | ಹಾಸ್ಯ |
| 24 | ಗೌಡ್ರಗದ್ಲ | ಬಿ.ವಿ. ಈಶ | ಮಾಸ್ತರ | ಹಾಸ್ಯ |
| 25 | ಸತ್ಯಹರಿಶ್ಚಂದ್ರ | ಜಿ.ಜಿ. ಹೆಗಡೆ | ಸೇವಕ | ಹಾಸ್ಯ |
| 26 | ಸಂಪತ್ತಿಗೆ ಸವಾಲ್ | ಪಿ.ಬಿ. ಧುತ್ತರಗಿ | ಕುಲಕರ್ಣಿ | ಹಾಸ್ಯ |
| 27 | ತಾಳತಪ್ಪಿದ ಬಾಳು | ಹೆಚ್.ಎನ್. ಹೂಗಾರ | ವೀರೇಶ | ಹಾಸ್ಯ |
| 28 | ದತ್ತು ಪುತ್ರ | ಪದ್ಮನಾಭರಾವ್ ಹೊಸಪೇಟೆ | ಕಾಳಾಚಾರಿ | ಖಳನಾಯಕ |
| 29 | ಗಾಂಧಿಟೋಪಿ | ಮಾರುತೇಶ ಮಾಂತ್ರೆ | ಚಂದ್ರಣ್ಣ | ಖಳನಾಯಕ |
| 30 | ಪುಢಾರಿ ಪೂರ್ಣಯ್ಯ | ನಾಡಿಗೇರ ಕೃಷ್ಣರಾಯ | ಪಿ.ಎ. | ಹಾಸ್ಯ |
| 31 | ಕೈದಿ | ಎಸ್.ಎಲ್. ಇನಾಂದಾರ | ಡಾಕ್ಟರ್ | – |
| 32 | ಹೊಸಬೆಳಕು | ಹೆಚ್.ಎನ್. ಹೂಗಾರ | ಖಾದಿಮಾಯಿ | ಹಾಸ್ಯ |
| 33 | ನೀನೂ ಸಾಹುಕಾರನಾಗು | ಕೆ.ಎನ್. ಸಾಳುಂಕೆ | ನಂಜಪ್ಪ | ಖಳನಾಯಕ |
| 34 | ಭೌಮಾಸುರ | ಎಸ್.ಎಲ್. ಇನಾಂದಾರ | ಭಗದತ್ತ | ಬಾಲಪಾತ್ರ |
| 35 | ಲಂಕಾದಹನ | ನರಹರಿಶಾಸ್ತ್ರಿಗಳು | ಅಂಗದ–ಅಕ್ಷಯಕುಮಾರ | |
| 36 | ಅಕ್ಷಯಾಂಬರ | ಕಂದಗಲ್ಲ | ವಿಕರ್ಣ | |
| 37 | ಚಿತ್ರಾಂಗದ | ಕಂದಗಲ್ಲ | ಕೃಷ್ಣಾ | |

# ಶ್ರೀ ಜಯಲಕ್ಷ್ಮೀ ನಾಟಕ ಸಂಘ (ರಿ) ದಾವಣಗೆರೆ (ಸ್ಥಾಪನೆ 1921)

## 1991 ರಿಂದ 2016ರವರೆಗೂ ಪ್ರದರ್ಶಿಸಿದ ನಾಟಕಗಳ ವಿವರ.

| ಕ್ರಸಂ. | ದಿನಾಂಕ | ಸ್ಥಳ | ನಾಟಕ | ಸಂದರ್ಭ |
|---|---|---|---|---|
| 1 | 08.09.1979 | ಹರಿಹರ | ವರ ನೋಡಿ ಹೆಣ್ಣು ಕೊಡು | ಮಿತ್ರವೃಂದ ಗಣೇಶೋತ್ಸವ |
| 2 | 12.09.1983 | ಹರಿಹರ | ಮುದುಕನ ಮದುವೆ | ಸಾರ್ವಜನಿಕ ವಿನಾಯಕ ಸಂಘ ಗಣೇಶೋತ್ಸವ |
| 3 | 13.09.1991 | ತುರುವನೂರು | ರೇಣುಕಾ ದೇವಿ | ಗಣೇಶೋತ್ಸವ |
| 4 | 26.11.1991 | ತುರುವನೂರು | ಬಸ್ ಕಂಡಕ್ಟರ್ | ಮುಖಾಂ |
| 5 | 27.11.1991 | ತುರುವನೂರು | ತಾಯಿ ಕರುಳು | ಮುಖಾಂ |
| 6 | 30.11.1991 | ತುರುವನೂರು | ಮಲ್ಲಮ್ಮ | ಮುಖಾಂ |
| 7 | 01.11.1992 | ಹರಿಹರ | ಬಸ್ ಕಂಡಕ್ಟರ್ | ಕನ್ನಡ ರಾಜ್ಯೋತ್ಸವ ಸಮಾರಂಭ |
| 8 | 23.11.1993 | ದೊಡ್ಡಬಾತಿ | ಮಾತೃದೇವೋಭವ | ಗ್ರಾಮೀಣ ರಂಗೋತ್ಸವ ಸಮಾರಂಭ ನಾಟಕ ಅಕಾಡೆಮಿ |
| 9 | 05.02.1994 | ದಾವಣಗೆರೆ | ಖಾದೀಸೀರೆ | ಸಹಾಯಾರ್ಥ ಪ್ರದರ್ಶನ |
| 10 | 01.04.1994 | ದಾವಣಗೆರೆ | ಮುಂಡೇಮಗ | ಕರ್ನಾಟಕ ನಾಟಕ ಅಕಾಡೆಮಿ |
| 11 | 04.04.1994 | ದಾವಣಗೆರೆ | ಟಿಪ್ಪುಸುಲ್ತಾನ್ | ಕರ್ನಾಟಕ ಕಾಂಗ್ರೆಸ್ ಸಮ್ಮೇಳನ |
| 12 | 06.05.1994 | ಹೊಳೆಸಿರಿಗೆರೆ | ಚನ್ನಪ್ಪಗೌಡ | ಸಹಾಯಾರ್ಥ ಪ್ರದರ್ಶನ |
| 13 | 23.05.1994 | ಕೊಕ್ಕನೂರು | ಚನ್ನಪ್ಪಗೌಡ | ಸಹಾಯಾರ್ಥ ಪ್ರದರ್ಶನ |
| 14 | 28.05.1994 | ಕಡಾರನಾಯ್ಕನಹಳ್ಳಿ | ಚನ್ನಪ್ಪಗೌಡ | ಸಹಾಯಾರ್ಥ ಪ್ರದರ್ಶನ |
| 15 | 04.06.1994 | ದಾವಣಗೆರೆ | ಖಾನಾವಳಿ ಚನ್ನಿ | ಸಹಾಯಾರ್ಥ ಪ್ರದರ್ಶನ |
| 16 | 09.09.1994 | ಹರಿಹರ | ಚಿನ್ನದ ಗೊಂಬೆ | ಗಣೇಶೋತ್ಸವ |
| 17 | 12.09.1994 | ನಿಟುವಳ್ಳಿ(ಡಿವಿಜಿ) | ಖಾನಾವಳಿ ಚನ್ನಿ | ಗಣೇಶೋತ್ಸವ |
| 18 | 05.10.1994 | ಅಣಜಿ | ಮಲ್ಲಮ್ಮ | ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| 19 | 14.01.1995 | ತ್ಯಾವಣಿಗಿ | ಮಲ್ಲಮ್ಮ | ಸಂಕ್ರಾಂತಿ ಹಬ್ಬದ ಪ್ರಯುಕ್ತ |
| 20 | 07.03.1995 | ಕೈದಾಳೆ | ಚನ್ನಪ್ಪಗೌಡ | ರಥೋತ್ಸವದ ಪ್ರಯುಕ್ತ |
| 21 | 23.03.1995 | ಕೂಲಂಬಿ | ಚನ್ನಪ್ಪಗೌಡ | ರಥೋತ್ಸವದ ಪ್ರಯುಕ್ತ |
| 22 | 26.07.1995 | ದಾವಣಗೆರೆ | ನೃಪತುಂಗ | 75ನೇ ವಾರ್ಷಿಕೋತ್ಸವ |
| 23 | 10.09.1995 | ನಿಟುವಳ್ಳಿ | ತಾಯಿಕರುಳು | ಗಣೇಶೋತ್ಸವ |
| 24. | 08.09.1996 | ದಾವಣಗೆರೆ | ಗಾಂಧಿ ಟೋಪಿ | ಜಿಲ್ಲಾ ಸಮಾಚಾರ ಸಹಯೋಗ |
| 25 | 14.09.1996 | ನಿಟುವಳ್ಳಿ | ಸೊಕ್ಕಿನ ಸೊಸೆ | ಗಣೇಶೋತ್ಸವ |
| 26 | 24.12.1996 | ಹನಗವಾಡಿ | ಖಾದಿಸೀರೆ | ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| 27 | 27.02.1997 | ದಾವಣಗೆರೆ | ದೇವರಮಗ | ಸಹಾಯಾರ್ಥ ಪ್ರದರ್ಶನ |
| 28 | 22.03.1997 | ಚಿತ್ರದುರ್ಗ | ಮುಂಡೇಮಗ | ಕರ್ನಾಟಕ ನಾಟಕ ಅಕಾಡೆಮಿ |
| 29 | 06.09.1997 | ನಿಟುವಳ್ಳಿ | ತವರುಮನೆ | ಗಣೇಶೋತ್ಸವ |
| 30 | 08.06.1997 | ಆನಗೋಡು | ಯಾರ ತಪ್ಪು ? | ಸಹಾಯಾರ್ಥ |

| | | | | |
|---|---|---|---|---|
| 31 | 05.09.1997 | ಹರಿಹರ | ದೇವರ ಮಗ | ಗಣೇಶೋತ್ಸವ |
| 32 | 07.09.1997 | ಕೊಟ್ಟೂರು | ಬಸ್ ಕಂಡಕ್ಟರ್ | ಗಣೇಶೋತ್ಸವ |
| 33 | 15.08.1997 | ದಾವಣಗೆರೆ | ಟಿಪ್ಪು ಸುಲ್ತಾನ್ | ಸ್ವಾತಂತ್ರ ದಿನಾಚರಣೆ ಅಂಗವಾಗಿ |
| 34 | 17.07.1997 | ಆನಗೋಡು | ನನಗಂಡ ಬಲು ಭಂಡ | ಸಹಾಯಾರ್ಥ |
| 35 | 09.02.1998 | ದಾವಣಗೆರೆ | ಬಸ್‌ಕಂಡಕ್ಟರ್ | ಸಹಾಯಾರ್ಥ |
| 36. | 14.05.1998 | ನೇರ್ಲಿಗೆ | ಧರ್ಮ ದೇವತೆ | ದೇವಿಹಬ್ಬ |
| 37 | 03.08.1998 | ಕೋಲಾರ | ಟಿಪ್ಪು ಸುಲ್ತಾನ್ | ಕರ್ನಾಟಕ ನಾಟಕ ಅಕಾಡೆಮಿ |
| 38 | 16.12.1998 | ಕಂಗುವಳ್ಳಿ | ಬಸ್‌ಕಂಡಕ್ಟರ್ | ಮಹೇಶ್ವರಸ್ವಾಮಿ ಜಾತ್ರೆ |
| 39 | 22.02.1999 | ದಾವಣಗೆರೆ | ತಾಯಿ | ಕರ್ನಾಟಕ ನಾಟಕ ಅಕಾಡೆಮಿ |
| | | | | ರಂಗತರಬೇತಿ ಶಿಬಿರ ನಿ: ಮಲ್ಲಿಕಾರ್ಜುನ |
| ಕಡಕೋಳ | | | | |
| 40 | 26.03.1999 | ದಾವಣಗೆರೆ | ಟಿಪ್ಪುಸುಲ್ತಾನ್ | ನಾಟಕೋತ್ಸವ ಕರ್ನಾಟಕ |
| ನಾಟಕ | | | | |
| | | | | ಅಕಾಡೆಮಿ |
| 41 | 14.08.1999 | ದಾವಣಗೆರೆ | ಶಿಶುನಾಳ ಷರೀಫ್ | ಸಹಾಯಾರ್ಥ ಪ್ರದರ್ಶನ |
| 42 | 14.09.1999 | ದಾವಣಗೆರೆ | ಬಸ್ ಕಂಡಕ್ಟರ್ | ಗಣೇಶೋತ್ಸವ |
| 43 | 27.09.1999 | ಬೇಲೂರು | ಖಾಕಿ,ಕಾವಿ, ಇತ್ಯಾದಿ | ಗಣೇಶೋತ್ಸವ |
| 44 | 11.10.1999 | ಬೀರೂರು | ಧರ್ಮ ದೇವತೆ | ಗಣೇಶೋತ್ಸವ |
| 45 | 15.09.1999 | ಹೊಳಲ್ಕೆರೆ | ಖಾಕಿ, ಕಾವಿ, ಇತ್ಯಾದಿ | ಗಣೇಶೋತ್ಸವ |
| 46 | 03.02.2000 | ಹಿತ್ತಲ | ಓಂ ನಮಃ ಶಿವಾಯ | ಮಾರಿಕಾಂಬ ಜಾತ್ರೆ |
| 47 | 04.02.2000 | ಹಿತ್ತಲ | ಟಿಪ್ಪು ಸುಲ್ತಾನ್ | ಮಾರಿಕಾಂಬ ಜಾತ್ರೆ |
| 48 | 23.06.2000 | ದಾವಣಗೆರೆ | ಸಮಾಜಕ್ಕೆ ಸವಾಲ್ | ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| 49 | 02.05.2001 | ತುಮ್ಮಿನಕಟ್ಟೆ | ಧರ್ಮದೇವತೆ | ಸಹಾಯಾರ್ಥ |
| 50 | 03.09.2001 | ಚಿಕ್ಕಮಗಳೂರು | ದೇವರಮಗ | ಗಣೇಶೋತ್ಸವ |
| 51 | 21.06.2002 | ದಾವಣಗೆರೆ | ಧರ್ಮ ದೇವತೆ | ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| 52 | 09.03.2003 | ದಾವಣಗೆರೆ | ಮಖ್ಮಲ್‌ಟೋಪಿ | ಸಂಘದ ಸಹಾಯಾರ್ಥ |
| 53 | 11.07.2003 | ಜಗಳೂರು | ಸಮಾಜಕ್ಕೆ ಸವಾಲ್ | ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| 54 | 06.06.2004 | ದಾವಣಗೆರೆ | ತಾಯಿ ಕರುಳು | ಸಹಾಯಾರ್ಥ ಪ್ರದರ್ಶನ |
| 55 | 02.07.2004 | ದಾವಣಗೆರೆ | ಸಮಾಜಕ್ಕೆ ಸವಾಲ್ | ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| 56 | 29.09.2004 | ಹೊಳಲ್ಕೆರೆ | ದೇವರಮಗ | ಗಣೇಶೋತ್ಸವ |
| 57 | 09.01.2004 | ಹೊಳಗುಂದಿ | ಬಸ್ ಕಂಡಕ್ಟರ್ | ಜಾತ್ರೆ ಪ್ರಯುಕ್ತ |
| 58 | 10.01.2004 | ಹೊಳಗುಂದಿ | ನನ್ನ ಮಗಳು ಅಂಥವಳಲ್ಲ | ಜಾತ್ರೆ ಪ್ರಯುಕ್ತ |
| 59 | 03.08.2004 | ಕಾರವಾರ | ರೇಣುಕಾದೇವಿ | ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| | | | | ಪೌರಾಣಿಕ ನಾಟಕೋತ್ಸವ |
| 60 | 06.06.2005 | ಹರಿಹರ | ದೇವದಾಸಿ | ಕರ್ನಾಟಕ ನಾಟಕ ಅಕಾಡೆಮಿ |
| | | | | ನಾಟಕೋತ್ಸವ |

| | | | | |
|---|---|---|---|---|
| 61 | 08.01.2005 | ಬಳ್ಳಾರಿ | ಧರ್ಮದೇವತೆ | ಸಹಾಯಾರ್ಥ ಪ್ರದರ್ಶನ |
| 62 | 05.05.2006 | ಲಕ್ಕುಂಡಿ | ಮುಂಡೇಮಗ | ಲಕ್ಕುಂಡಿ ಉತ್ಸವ-2006 |
| 63 | 13.02.2009 | ಹನಗವಾಡಿ | ರೇಣುಕಾದೇವಿ | ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| 64 | 19.07.2009 | ದಾವಣಗೆರೆ | ಖಾದೀಸೀರೆ | ಸಹಾಯಾರ್ಥ ಪ್ರದರ್ಶನ |
| 65 | 16.09.2010 | ಚಿತ್ರದುರ್ಗ | ಖಾದೀಸೀರೆ | ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| 66 | 22.01.2011 | ದಾವಣಗೆರೆ | ತವರುಮನೆ | ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| 67 | 25.12.2011 | ಹನಗವಾಡಿ | ಧರ್ಮದೇವತೆ | ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| 68 | 11.11.2011 | ಕಾಳಿಗನೂರು | ಧರ್ಮದೇವತೆ | ಜೆ.ಹೆಚ್. ಪಟೇಲ ಸಹಕಾರ ಸಂಘ, 10ನೇ ವಾರ್ಷಿಕೋತ್ಸವ |
| 69 | 13.02.2012 | ದಾವಣಗೆರೆ | ಧರ್ಮದೇವತೆ | ಜಿಲ್ಲಾ ಉತ್ಸವ ದಾವಣಗೆರೆ ಹಬ್ಬ |
| 70 | 15.07.2012 | ದಾವಣಗೆರೆ | ಮುಂಡೇಮಗ | ಕರ್ನಾಟಕ ನಾಟಕ ಅಕಾಡೆಮಿ ನಾಟಕೋತ್ಸವ |
| 71 | 26.08.2012 | ದಾವಣಗೆರೆ | ಟಿಪ್ಪುಸುಲ್ತಾನ್ | ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| 72 | 23.10.2012 | ದಾವಣಗೆರೆ | ಅಣ್ಣ ತಂದ ಅತ್ತಿಗೆ | ದಸರಾ ಹಬ್ಬದ ಪ್ರಯುಕ್ತ |
| 73 | 02.12.2012 | ಗದಗ | ಬಸ್ ಕಂಡಕ್ಟರ್ | ಕಲಾವಿದನ ಸಹಾಯಾರ್ಥ ಪ್ರದರ್ಶನ |
| 74 | 30.09.2012 | ಜಗಳೂರು | ಬಸ್ ಕಂಡಕ್ಟರ್ | ರಂಗಯಾತ್ರೆ-ರಾ.ವ್ಯ.ರ.ಕ.ಸಂಘ (ರಿ) |

| ಕ್ರಸಂ. | ದಿನಾಂಕ | ಸ್ಥಳ | ನಾಟಕ | ಸಂದರ್ಭ |
|---|---|---|---|---|
| 69 | 13.02.2012 | ದಾವಣಗೆರೆ | ಧರ್ಮದೇವತೆ | ದಾವಣಗೆರೆ ಜಿಲ್ಲಾ ಹಬ್ಬದ ಪ್ರಯುಕ್ತ |
| 70 | 15.7.2012 | ದಾವಣಗೆರೆ | ಮುಂಡೇಮಗ | ಕರ್ನಾಟಕ ನಾಟಕ ಅಕಾಡೆಮಿ ನಾಟಕೋತ್ಸವ |
| 71 | 26.8.2012 | ದಾವಣಗೆರೆ | ಟಿಪ್ಪುಸುಲ್ತಾನ್ | ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ |
| 72 | 28.10.2012 | ದಾವಣಗೆರೆ | ಅಣ್ಣತಂದ ಅತ್ತಿಗೆ | ದಸರಾ ಹಬ್ಬದ ಪ್ರಯುಕ್ತ – ನಿಟುವಳ್ಳಿ |
| 73 | 10.10.2013 | ದಾವಣಗೆರೆ | ಧರ್ಮದೇವತೆ | ದಸರಾ, ನಿಟುವಳ್ಳಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ |
| 74 | 14.11.2013 | ಹನಗವಾಡಿ | ವಿದ್ಯೆಬಾಳಿನ ಬೆಳಕು | ಹೊಸ ನಾಟಕ ಪ್ರದರ್ಶನ |
| 75 | 27.3.2014 | ಸೂಗೂರು | ಮುಠ್ಠಾಳಮಾವ | ಊರ ಜಾತ್ರೆ ಸಂಬಂಧ |
| 76 | 29.9.2014 | ದಾವಣಗೆರೆ | ಭಂಡಬಡ್ಡಿ ಮಗ | ದಸರೆಯ ಪ್ರಯುಕ್ತ ನಿಟುವಳ್ಳಿ |
| 77 | 26.10.2014 | ಚನ್ನಗಿರಿ | ರೇಣುಕಾದೇವಿ | ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಾಂಸ್ಕೃತಿಕ ಸೌರಭ |
| 78 | 31.01.2015 | ದಾವಣಗೆರೆ | ಧರ್ಮದೇವತೆ | ಮಹಾನಗರ ಪಾಲಿಕೆ ವತಿಯಿಂದ |
| 79 | 18.9.2015 | ದಾವಣಗೆರೆ | ಧರ್ಮದೇವತೆ | ಗಣೇಶೋತ್ಸವ ಸಿದ್ದವೀರಪ್ಪ ಬಡಾವಣೆ, |
| 80 | 17.10.2015 | ದಾವಣಗೆರೆ | ರೇಣುಕಾದೇವಿ | ದಸರೆ ಪ್ರಯುಕ್ತ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ |
| 81 | 20.32016 | ದಾವಣಗೆರೆ | ಮುಂಡೇಮಗ | ಕುವೆಂಪು ರಂಗಮಂದಿರ, ಕನ್ನ ಮತ್ತು ಸಂಸ್ಕೃತಿ ಇಲಾಖೆ |
| 82 | 21.32016 | ದಾವಣಗೆರೆ | ತಾಯಿ | ಬೆಂಗಳೂರು ಇವರ ಸಹಯೋಗದಲ್ಲಿ ನಾಟಕೋತ್ಸವ-2016 |


| ಕ್ರ.ಸಂ. | ದಿನಾಂಕ | ನಾಟಕ | ಕ್ರ.ಸಂ. | ದಿನಾಂಕ | ನಾಟಕ | ಪ್ರಯೋಗ |
|---|---|---|---|---|---|---|
| 1 | 19.01.1992 | ಬಸ್ ಕಂಡಕ್ಟರ್ | 1 | 04.03.1993 | ಬಸ್ ಕಂಡಕ್ಟರ್ | 15 ಪ್ರಯೋಗ |
| 2 | 20.01.1992 | ಚನ್ನಪ್ಪಗೌಡ | | 18.03.1993 | | |
| 3 | 21.01.1992 | ತಾಯಿ ಕರುಳು | 2 | 19.03.1993 | ಚನ್ನಪ್ಪಗೌಡ | 10 ಪ್ರಯೋಗ |
| 4 | 23.01.1992 | ಮುತ್ಕಾಳ ಮಾವ | | 28.03.1993 | | |
| 5 | 25.01.1992 | ಬಂಗಾರದ ಹೂವು | 3 | 29.03.1993 | ಮುಂಡೇಮಗ | 5 ಪ್ರಯೋಗ |
| 6 | 27.01.1992 | ಮದುಕನ ಮದುವೆ | | 02.04.1993 | | |
| 7 | 31.01.1992 | ಬಂಜೆ ತೊಟ್ಟಿಲು | 4 | 03.04.1993 | ರೇಣುಕಾ ದೇವಿ | 5 ಪ್ರಯೋಗ |
| 8 | 01.02.1992 | ಮುಂಡೇಮಗ | | 07.04.1993 | | |
| 9 | 03.02.1992 | ಮಲ್ಲಮ್ಮ | 5 | 08.04.1993 | ಖಾದೀಸೀರೆ | 5 ಪ್ರಯೋಗ |
| 10 | 05.02.1992 | ಬೇಡರ ಕಣ್ಣಪ್ಪ | | 12.04.1993 | | |
| 11 | 09.02.1992 | ಕೊಂಡು ತಂದ ಗಂಡ | 6 | 13.04.1993 | | |
| 12 | 10.02.1992 | ವರನೋಡಿ ಹೆಣ್ಣು ಕೊಡು | | 14.04.1993 | | |
| 13 | 12.02.1992 | ಮುತ್ಕಾಳ ಮಾವ | 7 | 15.04.1993 | ಗೌಡ್ರಗದ್ಲ | 1 ಪ್ರಯೋಗ |
| 14 | 13.02.1992 | ಗೌಡ ಮೆಚ್ಚಿದ ಹುಡುಗಿ | | | 43 ಪ್ರಯೋಗಗಳು | |
| 15 | 14.02.1992 | ರೇಣುಕಾದೇವಿ | | | | |

ಹರಪನಹಳ್ಳಿ ತಾ॥, ಕಮ್ಮತ್ತನಹಳ್ಳಿ ಮುಖಾಂ — ಮುಖಾಂ ಬಾಗೂರು ತಾ॥ ಹೊಸದುರ್ಗ

| ಕ್ರ.ಸಂ. | ದಿನಾಂಕ | ನಾಟಕ | ಕ್ರ.ಸಂ. | ದಿನಾಂಕ | ನಾಟಕ | ಪ್ರಯೋಗ |
|---|---|---|---|---|---|---|
| 1 | 21.12.1993 | ಬಸ್ ಕಂಡಕ್ಟರ್ | 1 | 23.03.1998 | ಸಮಾಜಕ್ಕೆ ಸವಾಲ್ | |
| 2 | 22.12.1993 | ಚನ್ನಪ್ಪಗೌಡ | 2 | 24.03.1998 | ಸಮಾಜಕ್ಕೆ ಸವಾಲ್ | |
| 3 | 23.12.1993 | ಮಲ್ಲಮ್ಮ | 3 | 25.03.1998 | ಧರ್ಮ ದೇವತೆ | |
| 4 | 24.12.1993 | ಮುತ್ಕಾಳ ಮಾವ | 4 | 26.03.1998 | ಧರ್ಮ ದೇವತೆ | |
| 5 | 25.12.1993 | ರೇಣುಕಾದೇವಿ | 5 | 27.03.1998 | ಮುದುಕನ ಮದುವೆ | |

ಹೂವಿನಹಡಗಲಿ ತಾ॥, ಕುರುವತ್ತಿ ಜಾತ್ರೆ — ಮುಖಾಂ, ಉಜ್ಜನಿ, ಕೂಡ್ಲಿಗಿ ತಾಲ್ಲೂಕು

| ಕ್ರ.ಸಂ. | ದಿನಾಂಕ | ನಾಟಕ | ಕ್ರ.ಸಂ. | ದಿನಾಂಕ | ನಾಟಕ | ಪ್ರಯೋಗ |
|---|---|---|---|---|---|---|
| 1 | 27.02.1995 | ಬಸ್ ಕಂಡಕ್ಟರ್ | 1 | 01.05.1998 | ಬಸ್ ಕಂಡಕ್ಟರ್ | 1ನೇ ಪ್ರಯೋಗ |
| 2 | 28.02.1995 | ಬಸ್ ಕಂಡಕ್ಟರ್–1ನೇ ನಾಟಕ | 2 | 01.05.1998 | ಬಸ್ ಕಂಡಕ್ಟರ್ | 2ನೇ ಪ್ರಯೋಗ |
| 3 | 28.02.1995 | ಬಸ್ ಕಂಡಕ್ಟರ್–2ನೇ ನಾಟಕ | 3 | 02.05.1998 | ಬಸ್ ಕಂಡಕ್ಟರ್ | |
| 4 | 01.03.1995 | ಬಸ್ ಕಂಡಕ್ಟರ್–1ನೇ ನಾಟಕ | 4 | 03.05.1998 | ಬಸ್ ಕಂಡಕ್ಟರ್ | |
| 5 | 01.03.1995 | ಮಲ್ಲಮ್ಮ–2ನೇ ನಾಟಕ | 5 | 04.05.1998 | ಬಸ್ ಕಂಡಕ್ಟರ್ | |
| 6 | 02.03.1995 | ಮುತ್ಕಾಳ ಮಾವ | | | | |
| 7 | 03.03.1995 | ಚನ್ನಪ್ಪಗೌಡ | | | | |


ರಂಗ ಕಂಕಣ
ಶ್ರೀ ಜಯಲಕ್ಷ್ಮಿ ನಾಟಕ ಸಂಸ್ಥೆ, ದಾವಣಗೆರೆ
ವಜ್ರ ಮಹೋತ್ಸವದ ನೆನಪಿನ ಸಂಚಿಕೆ
ಸಂಪಾದಕ:
ಮಲ್ಲಿಕಾರ್ಜುನ ಕಡಕೋಳ

# ಕಂಚಿಕೇರಿ ಶಿವಣ್ಣನವರ ರಂಗ ಕುಟುಂಬ



ಕಂಚಿಕೇರಿ ಕೊಟ್ರಬಸಪ್ಪ
(ಶಿವಣ್ಣನ ತಾತ)



ಕೆ.ಬಿ. ಬಸವಣ್ಣೆಪ್ಪ
(ಶಿವಣ್ಣನ ತಂದೆ)



ಗೌರಮ್ಮ ಬಸವಣ್ಣೆಪ್ಪ
(ಶಿವಣ್ಣನ ತಾಯಿ)



ಕಂಚಿಕೇರಿ ಶಿವಣ್ಣ
(ಕೆ.ಬಿ. ಶಿವರಾಜ)



ಕೆ.ಬಿ. ಮಂಜುನಾಥ
(ಶಿವಣ್ಣನ ತಮ್ಮ)



ರಾಜೇಶ್ವರಿ ಮಂಜುನಾಥ
(ಶಿವಣ್ಣನ ಸೊಸೆ)




ಕೆ.ಎಸ್. ನಟರಾಜ
(ಶಿವಣ್ಣನ ಹಿರಿಯಮಗ)



ಕೆ.ಎಸ್. ಕೊಟ್ರೇಶ್
(ಶಿವಣ್ಣನ ಎರಡನೇಮಗ)



ಕೆ.ಎಸ್. ಮಲ್ಲಿಕಾರ್ಜುನ
(ಶಿವಣ್ಣನ ಕೊನೆಯಮಗ)



1918 ರಲ್ಲಿ ಶ್ರೀ ಜಯಲಕ್ಷ್ಮಿ ಪ್ರಾಸಾದಿತ ಸಂಗೀತ ನಾಟಕ ಮಂಡಳಿ ಹಿರೇಹಡಗಲಿಯಲ್ಲಿ ಪ್ರಥಮವಾಗಿ ಪ್ರದರ್ಶಿಸಿದ ರಾಮಕೊರವಂಜಿ ಕೃಷ್ಣಕೊರವಂಜಿ ನಾಟಕದಲ್ಲಿ ನಾರದನಾಗಿ ಬಸವಣ್ಣೆಪ್ಪ, ಕೊರವಂಜಿಯಾಗಿ (ಬಲತುದಿ) ಲಕ್ಷ್ಮಮ್ಮ ಮಧ್ಯದಲ್ಲಿ ಕೊಟ್ಟೂರ ವೀರಭದ್ರಪ್ಪ




ಶರಣ ಬಸವೇಶ್ವರ ನಾಟಕದಲ್ಲಿ ಕಂಚಿಕೇರಿ ಶಿವಣ್ಣ (ಕಂತಿ ಕಾಡಯ್ಯ ಪಾತ್ರ), ಶಕುಂತಲಮ್ಮ, ಬಿ. ಓಬಳೇಶ್ (ವಿಭೂತಿ ವೀರಯ್ಯ ಪಾತ್ರ) 1967 ಕಲಬುರ್ಗಿ ಕ್ಯಾಂಪ್, ಓಂಕಾರೇಶ್ವರ ನಾಟಕ ಸಂಘ



ಕಮಲಮ್ಮ, 1964 ಮಂಗಳೂರು ಕ್ಯಾಂಪ್ ಮೃಥದೇವ ಗವಾಯಿಗಳ ಅಮರೇಶ್ವರ ನಾಟ್ಯ ಸಂಘದ ಪಾತ್ರವೊಂದರಲ್ಲಿ



ಕಲಬುರ್ಗಿ–1966 ಖಾದಿಸೀರೆ ನಾಟಕ ಮರಿಯಪ್ಪ ಕಮಲಮ್ಮ



1967 ಕಲಬುರ್ಗಿ ಕ್ಯಾಂಪ್ ಹೋಳಿಹುಣ್ಣಿಮೆ ನಾಟಕದಲ್ಲಿ ವೆಂಕಟಾಚಲನಾಗಿ ಕಂಚಿಕೇರಿ ಶಿವಣ್ಣ (ಓಬಳೇಶ್‌ರವರ ಓಂಕಾರೇಶ್ವರ ನಾಟ್ಯ ಸಂಘ)



ಕಲಬುರ್ಗಿ–1966 ಖಾದಿಸೀರೆ ನಾಟಕ ಯಶೋದರಮ್ಮ (ಎಂ.ಎಲ್.ಎ. ಪಾತ್ರ)
ಓಬಳೇಶ್ವರ, ಕಂಚಿಕೇರಿ ಶಿವಣ್ಣ



1964–ಮಂಗಳೂರು ಕ್ಯಾಂಪ್ ಮಲಮಗಳು ನಾಟಕದಲ್ಲಿ ಕಮಲಮ್ಮ ಶಿವಣ್ಣ



1974–ಕೊಂಡು ತಂದ ಗಂಡ ನಾಟಕದಲ್ಲಿ ಕಮಲಮ್ಮ



1965 ಗುಳೇದಗುಡ್ಡ ಕ್ಯಾಂಪ್ ಬೆಳ್ಳಿ ಬಂಗಾರ ನಾಟಕದಲ್ಲಿ ಬಸವಲಿಂಗಶಾಸ್ತ್ರಿ, ಕಮಲಮ್ಮ, ಮತ್ತು ಶೈಲ (ಓಬಳೇಶ್ ಸಂಗಡ)



ಮುಂಡೇಮಗ ನಾಟಕದಲ್ಲಿ ಗೌಡ್ರಜಯಣ್ಣ (ನಿಂತವರು) ಮತ್ತು ಬಿ. ಓಬಳೇಶ್



1970 ಗಾಂಧಿ ಟೋಪಿ ನಾಟಕದಲ್ಲಿ ಕಂಚಿಕೇರಿ ಶಿವಣ್ಣ (ಚಂದ್ರಣ್ಣನ ಪಾತ್ರ)



ಜಗಜ್ಯೋತಿ ಬಸವೇಶ್ವರ ಪಾತ್ರದಲ್ಲಿ ಸಿದ್ಧರಾಜ್ ಉಜ್ಜಯಿನಿ ಮಠ(ಕಂಚಿಕೇರಿ ಕಂಪನಿ)



1972 ಬೈಲುಹೊಂಗಲ ಖಾದಿಸೀರೆ ನಾಟಕ
ಎಂ.ಎಲ್.ಎ. ಶಾಮಲಾದೇವಿ ಪಾತ್ರದಲ್ಲಿ ಕಮಲಮ್ಮ
(ಜಯಲಕ್ಷ್ಮಿ ನಾಟಕ ಸಂಘ)



ಶರಣ ಬಸವೇಶ್ವರ ನಾಟಕ (1967)
ಕಂತಿಕಾಡಯ್ಯನ ಪಾತ್ರದಲ್ಲಿ ಶಿವಣ್ಣ
(ಓಂಕಾರೇಶ್ವರ ನಾಟ್ಯ ಸಂಘ)



1972 ಬೈಲಹೊಂಗಲ ಬೆಳ್ಳಿ ಬಂಗಾರ ನಾಟಕ ಭಾರತಿ ಪಾತ್ರದಲ್ಲಿ ಕಮಲಮ್ಮ



1966 ಖಾದಿಸೀರೆ ನಾಟಕ ಶಾಂತಲಾ ಪಾತ್ರದಲ್ಲಿ ಕಮಲಮ್ಮ




ಮುದುಕನ ಮದುವೆ ನಾಟಕದಲ್ಲಿ ಶೇಷಣ್ಣನ ಪಾತ್ರದಲ್ಲಿ ಶಿವಣ್ಣ





ಜಯಲಕ್ಷ್ಮಿ ನಾಟಕ ಸಂಘಕ್ಕೆ ಅನೇಕ ವರ್ಷಗಳ ಕಾಲ ರಂಗಸೇವೆ ಸಲ್ಲಿಸಿದ ಅಬ್ದುಲ್‌ಸಾಬ್ ಅಣ್ಣಿಗೇರಿ ಮತ್ತು ಪುಷ್ಪಮಾಲಾ ಅಣ್ಣಿಗೇರಿ ದಂಪತಿ



ಶಿವಣ್ಣಗೆ ಕರ್ನಾಟಕ ನಾಟಕ ಅಕಾಡೆಮಿಯು 8-11-1994 ರಂದು ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು. ಡಾ. ಯು.ಆರ್. ಅನಂತಮೂರ್ತಿ ಮತ್ತು ಅಧ್ಯಕ್ಷೆ ಚಿಂದೋಡಿಲೀಲಾ



ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಮಂತ್ರಿ ಶ್ರೀ ಡಿ. ಮಂಜುನಾಥ್ ಅವರಿಂದ 1-11-1995ರಂದು ಜಿಲ್ಲಾ ರಾಜ್ಯೋತ್ಸವ ಸನ್ಮಾನ



25-03-1996 ರಂದು ವೃತ್ತಿರಂಗಭೂಮಿ ಕಲಾವಿದರ ಸಮ್ಮೇಳನ (ದಾವಣಗೆರೆ)ದಲ್ಲಿ ಶಿವಣ್ಣನವರಿಗೆ ವರನಟ ಡಾ. ರಾಜ್‌ಕುಮಾರ್ ಅವರಿಂದ ಸನ್ಮಾನ.



ಕನ್ನಡ ಸಾಹಿತ್ಯ ಪರಿಷತ್ ಶತಮಾನೋತ್ಸವ ಸಂದರ್ಭದಲ್ಲಿ ಕೇಂದ್ರ ಸಾಹಿತ್ಯ ಪರಿಷತ್ ದಿನಾಂಕ 14-06-2015 ರಂದು ಕಂಚಿಕೇರಿ ಶಿವಣ್ಣ ಇವರಿಗೆ ನೀಡಿದ ಸನ್ಮಾನ. ಚಿತ್ರದಲ್ಲಿ ಸನ್ಮಾನಿತರಾದ ಪ್ರೊ. ಬಿ.ವಿ. ವೀರಭದ್ರಪ್ಪ, ಮನ್ಸೂರ್ ಸುಭದ್ರಮ್ಮ, ಗುರುರಾಜ್ ನಾಯ್ಡುರವರ ಮಗಳು ಶೀಲಾನಾಯ್ಡು ಇದ್ದಾರೆ.

DECCAN HERALD SATURDAY, JULY 22, 1995



Founder Kotrabasappa: his fabled company would move its belongings in 150 bullock carts

# The company of 150 carts

**The Jayalaksmi Nataka Sangha of Davangere has organised a ceremony to mark its diamond jubilee on July 26. Recalling its glorious early days when he**

# ನಗರದಲ್ಲಿ 26 ರಂದು ಜಯಲಕ್ಷ್ಮಿ ನಾಟಕ ಸಂಘದ ವಜ್ರಮಹೋತ್ಸವ

## ದಾವಣಗೆರೆಯ ಕುವೆಂಪು ಕನ್ನಡ ಭವನದಲ್ಲಿ ಮಾ.21ರಂದು ಜಯಲಕ್ಷ್ಮಿ ನಾಟಕೋತ್ಸವ ಸಮಾರೋಪ

**ಎಲ್ಲಿ ಏನು? ದಾವಣಗೆರೆ ಜಿಲ್ಲೆ**

21.03.2016 (ಸೋಮವಾರ)

**ಸರಕಾರಿ ಪ್ರಥಮ ದರ್ಜೆ ಕಾಲೇಜು**

ಭಾಷೆ ಮತ್ತು ಸಮೂಹ ಮಾಧ್ಯಮಗಳ ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣ: ಉದ್ಘಾಟನೆ: ಪತ್ರಕರ್ತ ಸುಗತ ಶ್ರೀನಿವಾಸ ರಾಜು, ಮುಖ್ಯ ಅತಿಥಿ: ಪತ್ರಕರ್ತ ಮಹದೇವ ಪ್ರಕಾಶ್, ಪ್ರಾಚಾರ್ಯ ಹೊ.ಕೆ.ಶಂಕರಯ್ಯ, ಆಶಯ ನುಡಿ: ಪ್ರಾಧ್ಯಾಪಕ ಡಾ.ಬಿ.ಕೆ.ರವಿ, ಅಧ್ಯಕ್ಷತೆ: ಕುಲಪತಿ ಡಾ.ಮಲ್ಲಿಕಾ ಘಂಟಿ, ಸ್ಥಳ: ಸರಕಾರಿ ಪ್ರಥಮ ದರ್ಜೆ ಕಾಲೇಜು, ಸಮಯ: ಬೆಳಗ್ಗೆ 10.30 ಕ್ಕೆ.

**ಜಯಲಕ್ಷ್ಮಿ ನಾಟಕ ಸಂಘ**


ನಾಟಕೋತ್ಸವ ಸಮಾರೋಪ: ಸಾನಿಧ್ಯ: ಬಸವಪ್ರಭು ಸ್ವಾಮೀಜಿ, ಅಧ್ಯಕ್ಷತೆ: ಎ.ಚಂದ್ರಪ್ಪ, ಪ್ರಸ್ತಾವನೆ: ಕೆ.ಎಸ್.ಕೊಟ್ರೇಶ್, ಮುಖ್ಯ ಅತಿಥಿ: ಬಿ.ಎಸ್.ಮಲ್ಲೇಶ್, ಬಸವರಾಜ್ ಮೊಳ್ಳ್ಕ್ರ, ಬಸವರಾಜ್ ದಂಡಿ, ಕಂಚಿಕೆರೆ ಶಿವಣ್ಣ, ಸ್ಥಳ: ಕುವೆಂಪು ಕನ್ನಡ ಭವನ, ಸಮಯ: ಸಂಜೆ 6.30ಕ್ಕೆ.

**ಹೊಸ ಬೆಳವಲೇರಿ**

**ಎಆರ್‌ಎಂ ಪ್ರಥಮ ದರ್ಜೆ ಕಾಲೇಜು**

ಎನ್‌ಎಸ್‌ಎಸ್ ಶಿಬಿರ: ಉದ್ಘಾಟನೆ: ದೊಡ್ಡ ನಾಗಪ್ಪ, ಅಧ್ಯಕ್ಷತೆ: ಬಸವರಾಜಪ್ಪ ನಲ್ಲಿಗೌಡ್ರು, ಉಪನ್ಯಾಸ: ಡಾ.ಪ್ರಕಾಶ ಹಲಗೇರಿ, ಮುಖ್ಯ ಅತಿಥಿ: ಪ್ರೊ.ಜಯಲಿಂಗಪ್ಪ, ಡಾ.

ಸೋಮವಾರ, 21, ಮಾರ್ಚ್, 2016, ದಾವಣಗೆರೆ



ಶ್ರೀ ಜಯಲಕ್ಷ್ಮಿ ನಾಟಕ ಸಂಘದಿಂದ ದಾವಣಗೆರೆಯಲ್ಲಿ ಆರಂಭವಾದ ನಾಟಕೋತ್ಸವಕ್ಕೆ ಮಲ್ಲಿಕಾರ್ಜುನ ಕಡಕೋಳ ಚಾಲನೆ ನೀಡಿದರು. ಪಾಟೀಲ ಬಳ್ಳಾರಿ ದೇವಣ್ಣ, ಕುಮಾರ್ ಬೆಕ್ಕೇರಿ, ಎಚ್.ಷಡಾಕ್ಷರಪ್ಪ, ಗಣೇಶ ಶೆಣೈ, ಕಂಚಿಕೆರೆ ಶಿವಣ್ಣ ಹಾಜರಿದ್ದರು.

(ಪ್ರಜಾವಾಣಿ)

## ಸರ್ಕಾರ ವೃತ್ತಿ ರಂಗಭೂಮಿ ಶಾಲೆ ಸ್ಥಾಪಿಸಲಿ



ದಾವಣಗೆರೆ, ಮಾ.20: ಸರ್ಕಾರ ವೃತ್ತಿ ರಂಗಭೂಮಿ ಕ್ಷೇತ್ರವನ್ನು ಪುನಶ್ಚೇತನಗೊಳಿಸುವ ನಿಟ್ಟಿನಲ್ಲಿ ರಂಗಾಯಣ ಮಾದರಿಯಲ್ಲಿ ವೃತ್ತಿ ರಂಗಭೂಮಿ ಶಾಲೆಯನ್ನು ಸ್ಥಾಪಿಸಬೇಕೆಂದು ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ಮಲ್ಲಿಕಾರ್ಜುನ ಕಡಕೋಳ ತಿಳಿಸಿದರು.

ಜಯಲಕ್ಷ್ಮೀ ನಾಟಕ ಸಂಘ ನಗರದ ಕುವೆಂಪು ಕನ್ನಡ ಭವನದಲ್ಲಿ ಏರ್ಪಡಿಸಿದ್ದ ... ನಿರ್ಲಕ್ಷ್ಯ ವಹಿಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವೃತ್ತಿ ರಂಗಭೂಮಿ ಬಗ್ಗೆ ಸರ್ಕಾರ ಪ್ರತಿಬಾರಿಯೂ ಮಲತಾಯಿ ಧೋರಣೆ ಅನುಸರಿಸುತ್ತಿದ್ದು, ಇದನ್ನು ಕೈ ಬಿಟ್ಟು ವೃತ್ತಿ ರಂಗಭೂಮಿ ವೈಭವ ಮತ್ತೆ ಮರುಕಳಿಸಲು ಕ್ರಿಯಾಯೋಜನೆ ತಯಾರಿಸಬೇಕೆಂದು ಸಲಹೆ ನೀಡಿದರು. ಸ್ವಾತಂತ್ರ್ಯ ಪೂರ್ವದಲ್ಲಿ ಸ್ವಾತಂತ್ರ್ಯಕ್ಕೆ ...

ಗಣೇಶ್ ಶೆಣೈ ಮಾತನಾಡಿ, ವೃತ್ತಿ ರಂಗಭೂಮಿ ಕಲಾವಿದರು ತೀವ್ರ ಬವಣೆ ಎದುರಿಸುತ್ತಿದ್ದಾರೆ. ಅವರಿಗೆ ನೋವು ಸಹ ಇಲ್ಲ. ಸರ್ಕಾರ ನೇರವಾಗಿ ಕಲಾವಿದರಿಗೆ ಆಶ್ರಯ ಯೋಜನೆಯಡಿ ನಿವೇಶನ ಕಲ್ಪಿಸಬೇಕೆಂದು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ್ ಬೆಕ್ಕೇರಿ, ನಾಟಕ ಅಕಾಡೆಮಿ ಸದಸ್ಯ ಹೆಚ್.ಷಡಾಕ್ಷರಪ್ಪ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪಾಟೀಲ ಬಳ್ಳಾರಿ ದೇವಣ್ಣ ಮಾತನಾಡಿದರು.

ಸಂಘದ ಮಾಲೀಕ ಕಂಚಿಕೇರಿ ಶಿವಣ್ಣನವರು ಉಪಸ್ಥಿತರಿದ್ದ ಈ ಕಾರ್ಯಕ್ರಮದಲ್ಲಿ ಹಿರಿಯ ಕಲಾವಿದರುಗಳಾದ ಶಿವಮಾಬದ್ದಯ್ಯ ಸರ್ಗಂಡ, ಶ್ರೀಮತಿ ಪಾರ್ವತಮ್ಮ ಕಾರಾಯಣ, ಶ್ರೀಮತಿ ಕೆ. ಸರೋಜಮ್ಮ, ಹೆಚ್.ಎಂ. ಮಲ್ಲಿಕಾರ್ಜುನಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ಟಿ.ನಾಗಭೂಷಣ ಗೌಡರು ಸ್ವಾಗತಿಸಿದರೆ, ...

**FINE ARTS INDUSTRIES**

K. L. Kendhuli

Artists & Photographers

I L K A L - 587 125

Dist. Bijapur) (Karnataka

**ಫೈನ್ ಆರ್ಟ್ಸ್ ಇಂಡಸ್ಟ್ರೀಜ**

ಕೆ. ಎಲ್. ಕೆಂಧೂಳಿ

ಕಲಾವಿದರು ಮತ್ತು ಛಾಯಾ ಚಿತ್ರಗ್ರಾಹಕರು

ಇಳಕಲ್ಲ - ೫೮೭ ೧೨೫

ಜಿ: ವಿಜಾಪುರ) (ಕರ್ನಾಟಕ


Date 2/4-3-80

ಶ್ರೀಯುತ. ಕೆ. ಬಿ. ಶಿವರಾಜ. ಅವರಿಗೆ-

ಇಳಕಲ್ಲದಿಂದ ತಮ್ಮಮೇಲೆ ಶ್ರೀ. ಶಿವರಾಜ. ಕಿನ್ನಾಳ. ಬರೆಯುವ ಅನಂತ
ಅಭಿನಂದನೆಗಳು - ತಾವು ಬರೆದ [illegible] ತಲುಪಿತು. ಹಾಗು
ತಮ್ಮಮೇಲೆ ಆದ ನನಗೆ ದೊರೆತ "ರಾಜ್ಯಪ್ರಶಸ್ತಿ"ಯು. ಅದು ತಮ್ಮೆಲ್ಲರಿಗೆ
ಗೌರವ ತಾರಿಯುತ್ತದೆ. ಹಾಗು ತಾವುಗಳು ರಾಷ್ಟ್ರಪ್ರಶಸ್ತಿಯನ್ನು
ಪಡೆಯಬೇಕೆಂಬ ಅಭಿಪ್ರಾಯಕ್ಕೆ ತುಂಬಾ ಧನ್ಯವಾದಗಳು-

ಅಲ್ಲದೆ "ಸುಧಾ" ಪತ್ರಿಕೆಯು ನನ್ನ ದಂಪತಿಗಳ
ಫೋಟೋ ಹಾಗು ನನ್ನ ಕೃತಿಗಳನ್ನು ಕಂಡು. ಕನ್ನಡ ತಾಯಿಯ
ಮಕ್ಕಳ ಬಗ್ಗೆ ತಮಗೆ ಬಂದ ಅಭಿಮಾನಕ್ಕೆ ತುಂಬಾ ಧನ್ಯವಾದಗಳು
ನನ್ನ ಹಿರಿಯ ಮಗ [illegible] ಕಲಾ ಶಾಲೆಯಿಂದ ಹೊರಬಂದ
ನಂತರ. ಹೈದ್ರಾಬಾದಿನಲ್ಲಿ. "[illegible]ನಲ್ಲಿ" [illegible]
-ಯಾಗಿ. ಕೆಲಸದಲ್ಲಿದ್ದಾನೆ. ನನ್ನ ಮಾರ್ಗದಲ್ಲಿ- ಅವನನ್ನು [illegible]
[illegible]. ಕಾರಣ. ಈಗ ರಂಗಭೂಮಿಗೆ ಬಂದಿರುವ ಅಧೋಗತಿಯೇ
ಅದಕ್ಕೆ ಕಾರಣ. ಹಾಗೆ. ತಮ್ಮ ತಂದೆ [illegible] ಕಾಲದಲ್ಲಿ [illegible]

ಡ್ರಾಮಾ ಸೀನರಿಗಳ ಹೆಸರಾಂತ ಪೇಂಟರ್ ಇಲಕಲ್‌ನ ಶ್ರೀ ಕೆ.ಎಲ್. ಕೆಂಧೂಳಿಯವರು ತಮಗೆ ರಾಜ್ಯೋತ್ಸವ ಪ್ರಶಸ್ತಿ ಬಂದ ಸಂದರ್ಭದಲ್ಲಿ ಶಿವಣ್ಣನವರಿಗೆ ಬರೆದ ಒಂದು ಆಪ್ತ ಪತ್ರ


ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆಯ ಅಂಗವಾಗಿ ನಾಟಕ ಪ್ರದರ್ಶನ
ದಿ|| ಶ್ರೀ ಕಂಚೀಕೇರಿ ಕೊಟ್ರಬಸಪ್ಪನವರ
ಶ್ರೀ ಜಯಲಕ್ಷ್ಮಿ ನಾಟಕ ಸಂಘ, ದಾವಣಗೆರೆ. (ಸ್ಥಾಪನೆ : 13-11-1921)
ಇವರು
ಶ್ರೀ ದುರ್ಗಾಂಬಿಕಾ ಕಾಂಪ್ಲೆಕ್ಸ್ ಹಿಂಭಾಗದ ಮೈದಾನದಲ್ಲಿ (ಹೊಂಡದ ಸರ್ಕಲ್ ಬಳಿ)
ದಿ. 13-3-2000 ನೇ ಸೋಮವಾರದಿಂದ
ಪ್ರತಿ ದಿನ 6-45 ಕ್ಕೆ ಹಾಗೂ 10-45 ಕ್ಕೆ 2 ಪ್ರದರ್ಶನಗಳು
''ಬಿ.ಆರ್. ಅರಿಶಿನಗೋಡಿ ಕೃತ''
ಖಾನಾವಳಿ ಚೆನ್ನಿ
ಕಂಚಿಕೇರಿ ಶಿವಣ್ಣ
ಶಾಂತಾ, ದಾವಣಗೆರೆ.
ಮು. ಭೂ :- ಹೆಚ್. ಮೆಹಬೂಬ್ ಅಲಿ, (ಕ.ನಾ.ಅ.ಪ್ರ. ವಿಜೇತರು) ಕೆ.ಬಿ. ಮಂಜುನಾಥ,
ಕೆ.ಎಸ್. ಕೊಟ್ರೇಶ್, ಕೆ. ಲೋಕೇಶ್, ಕಸ್ತೂರಮ್ಮ, ಮೀನಾಕ್ಷಿ, ಎಸ್. ರಾಜೇಶ್ವರಿ, ಶಾಂತಾ
ಹಾಸ್ಯ ಪಾತ್ರದಲ್ಲಿ :- ಕಂಚಿಕೇರಿ ಶಿವಣ್ಣ (ಕ.ನಾ.ಅ.ಪ್ರ. ವಿಜೇತರು) ಮತ್ತು ಕೆ.ಎಸ್. ನಟರಾಜ್
ಕೆ.ಎಸ್. ನಟರಾಜ್
ಪ್ರವೇಶ ದರ : 15-00, 10-00 ಮತ್ತು ನೆಲ 5-00
ಹೆಚ್. ಮೆಹಬೂಬ್ ಅಲಿ
ಕೆ.ಎಸ್. ಕೊಟ್ರೇಶ್
ಕೆ. ಲೋಕೇಶ್
ಮೀನಾಕ್ಷಿ
ಕಂಚಿಕೇರಿ ಶಿವಣ್ಣ
''ಕಲಾಭಿಮಾನಿಗಳು ಪ್ರೋತ್ಸಾಹಿಸಬೇಕಾಗಿ ವಿನಂತಿ''
ಮ್ಯಾನೇಜರ್
ಬಿ.ಕೆ. ಸ್ವಾಮಿ
ಸಂಚಾಲಕರು
ಹೆಚ್.ಎನ್. ಮಲ್ಲಿಕಾರ್ಜುನ ಸ್ವಾಮಿ
ಮಾಲೀಕರು
ಕಂಚಿಕೇರಿ ಶಿವಣ್ಣ (ಕ.ನಾ.ಅ.ಪ್ರ. ವಿಜೇತ)